ಸಂಪುಟ: 04 ಸಂಚಿಕೆ: 65 ಪುಟಗಳು: 08 ಭಾನುವಾರ 19 ಮೇ 2024 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

ಮುಂಜಾನೆ ಮಾತು

ಖರ್ಚುಮಾಡುವ ಮುನ್ನ ಗಳಿಸುವುದು, ಪ್ರಾರ್ಥಿಸುವ ಮೊದಲು ನಂಬಿಕೆಯಿಡುವುದು ಇವೆಲ್ಲ ಸುಂದರ ಬದುಕಿನ ಸೂತ್ರಗಳು. ಗಳಿಕೆ ನಂಬಿಕೆಗಳೆರಡನ್ನೂ ಅಳವಡಿಸಿಕೊಳ್ಳೋಣ.

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಎಚ್.ಡಿ.ದೇವೇಗೌಡ ಹುಟ್ಟುಹಬ್ಬಕ್ಕೆ ಶುಭಾಶಯ ತಿಳಿಸಿದ ಸಿಎಂ

• ಉದಯವಾಹಿನಿ, ಬೆಂಗಳೂರು

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಶನಿವಾರ ತಮ್ಮ 91ನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದಾರೆ. ಅವರಿಗೆ ಸಿಎಂ ಸಿದ್ದರಾಮಯ್ಯ ಅವರು ಹುಟ್ಟುಹಬ್ಬದ ಶುಭಾಶಯ ತಿಳಿಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಸಿಎಂ ಸಿದ್ದರಾಮಯ್ಯ, ಮಾಜಿ ಪ್ರಧಾನಿಗಳು, ಜನತಾದಳ (ಜಾತ್ಯತೀತ) ಪಕ್ಷದ ವರಿಷ್ಠರಾದ ಹೆಚ್.ಡಿ ದೇವೇಗೌಡರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು. ತಮಗೆ ಇನ್ನಷ್ಟು ಕಾಲ ಆಯಸ್ಸು – ಉತ್ತಮ ಆರೋಗ್ಯವನ್ನು ದೇವರು ನೀಡಲಿ, ತಮ್ಮ ಅನುಭವ, ಮಾರ್ಗದರ್ಶನ ಮುಂದೆಯೂ ನಾಡಿಗೆ ದೊರಕಲಿ ಎಂದು ಹಾರೈಸಿದ್ದಾರೆ.

ಯುಪಿ ಸಿಎಂ ಯೋಗಿ ತಂದಿರುವ ಕಾನೂನು ರಾಜ್ಯದಲ್ಲೂ ತರಬೇಕು

• ಉದಯವಾಹಿನಿ, ಹುಬ್ಬಳ್ಳಿ

ಇತ್ತೀಚೆಗೆ ಹುಬ್ಬಳ್ಳಿಯ ವೀರಾಪುರ ಓಣಿಯಲ್ಲಿ ಪ್ರೀತಿ ನಿರಾಕರಿಸಿದ್ದಕ್ಕೆ ಅಂಜಲಿ ಅಂಬಿಗೇರ ಎನ್ನುವ ಯುವತಿಯ ಬರ್ಬರ ಕೊಲೆಯಾಗಿತ್ತು. ಈ ಒಂದು ಘಟನೆಗೆ ಸಂಬಂಧಿಸಿದಂತೆ ಶನಿವಾರ ಅಂಬಿಗೇರ ಚೌಡಯ್ಯ ಪೀಠದ ಶಾಂತಭೀಷ್ಮ ಶ್ರೀಗಳು ಮಾತನಾಡಿ ಉತ್ತರ ಪ್ರದೇಶದ ಸಿಎಂ ಯೋಗಿ ಆದಿತ್ಯನಾಥ್ ಅವರು ತಂದಿರುವ ಕಾನೂನು ರಾಜ್ಯದಲ್ಲೂ ತರಬೇಕು ಎಂದು ಆಗ್ರಹಿಸಿದರು. ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಅಂಜಲಿ ಕೊಲೆ ಪ್ರಕರಣಕ್ಕೆ ಸರ್ಕಾರವೇ ನೇರ ಕಾರಣ. ಪೊಲೀಸರ ನಿರ್ಲಕ್ಷ್ಯವೇ ಈ ಒಂದು ಉಘಟನೆಗೆ ಕಾರಣ. ನೇಹಾ ಹಿರೇಮಠ್ ಕೊಲೆಯ ಬಳಿಕ ಮತ್ತೆ ಇದೇ ರೀತಿಯ ಕೃತ್ಯ ನಡೆದಿದೆ. ಯಾರೇ ಆಗಲಿ ತೊಂದರೆ ಅಂತ ಬಂದಾಗ ನ್ಯಾಯ ಕೊಡಿಸಬೇಕು.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಂದಿರುವ ಕಾನೂನು ಇಲ್ಲಿಯೂ ತರಬೇಕು. ಅಂಜಲಿಯದ್ದು ಬಡ ಕುಟುಂಬ ಅವರಿಗೆ ಮನೆ ಕೊಡಬೇಕು. ಕುಟುಂಬದ ಒಬ್ಬ ಸದಸ್ಯನಿಗೆ ಸರ್ಕಾರಿ ನೌಕರಿ ನೀಡಬೇಕು. ಅಂಜಲಿ ಕುಟುಂಬ ದವರಿಗೆ ಸೂಕ್ತ ರಕ್ಷಣೆ ಕೊಡಬೇಕು.ಅಂಜಲಿ ಸಾವಿಗೆ ನ್ಯಾಯ ಸಿಗುವವರೆಗೂ ಹೋರಾಟ ಮಾಡಲಾಗುತ್ತದೆ ಎಂದು ಅಂಬಿಗೇರ ಚೌಡಯ್ಯ ಪೀಠದ ಶಾಂತಭೀಷ್ಮ ಚೌಡಯ್ಯ ಮಹಾಸ್ವಾಮಿಗಳು ತಿಳಿಸಿದರು.

ಸಂಸ್ಥೆಗಳು ಸಭೆ ನಡೆಸಲು ಮಾದರಿ ನೀತಿ ಸಂಹಿತೆಯಿಂದ ವಿನಾಯ್ತಿ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರದಿಂದ ಸರ್ಕಾರದ ವಿವಿಧ ನಿಗಮ–ಮಂಡಳಿಗಳು, ಸಮಿತಿಗಳು ಹಾಗೂ ಸ್ಥಳೀಯ ಸಂಸ್ಥೆಗಳು ಮತ್ತು ಇತರೆ ಶಾಸನಾತ್ಮಕ ಸಂಸ್ಥೆಗಳಲ್ಲಿ ಶಾಸನಾತ್ಮಕ ಸಭೆಗಳನ್ನು ನಡೆಸಲು ಮಾದರಿ ನೀತಿ ಸಂಹಿತೆಯಿಂದ ವಿನಾಯ್ತಿ ನೀಡಿ ಆದೇಶಿಸಿದೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಈ ಸಂಬಂಧ ಸಿಎಂ ಅಪರ ಮುಖ್ಯಕಾರ್ಯದರ್ಶಿ, ಡಿಸಿಎಂ ಆಪ್ತ ಕಾರ್ಯದರ್ಶಿ, ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಎಲ್ಲಾ ಜಿಲ್ಲಾಧಿಕಾರಿ, ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ಪತ್ರವನ್ನು ಬರೆದಿದ್ದಾರೆ. ಸಿಎಸ್ ಬರೆದಿರುವಂತ ಪತ್ರದಲ್ಲಿ ಮಾದರಿ ನೀತಿ ಸಂಹಿತೆ ಅವಧಿಯಲ್ಲಿ ಸರ್ಕಾರದ ವಿವಿಧ ನಿಗಮಗಳು, ಮಂಡಳಿಗಳು, ಸಮಿತಿಗಳು ಹಾಗೂ ಸ್ಥಳೀಯ ಸಂಸ್ಥೆಗಳು ಮತ್ತು ಇತರೆ ಶಾಸನಾತ್ಮಕ ಸಂಸ್ಥೆಗಳಲ್ಲಿ ಶಾಸನಾತ್ಮಕ ಸಭೆಗಳನ್ನು ನಡೆಸುವ ಬಗ್ಗೆ ಸಕ್ಷಮ ಪ್ರಾಧಿಕಾರಗಳು ಚುನಾವಣಾ ಆಯೋಗದ ನಿರ್ಣಯದಲ್ಲಿನ ಷರತ್ತುಗಳಿಗೆ ಒಳಪಟ್ಟು, ಸೂಕ್ತ ನಿರ್ಣಯ ತೆಗೆದುಕೊಳ್ಳುವಂತೆ ತಿಳಿಸಿದ್ದಾರೆ.

ಡಿ.ಕೆ. ಯಿಂದ 100 ಕೋಟಿ ಆಫರ್ ಎಂದ ದೇವರಾಜೇಗೌಡ; ಹಾಗಾದ್ರೆ ಅಮಿತ್ ಶಾಗೆ ಹೇಳಬೇಕಿತ್ತು

• ಉದಯವಾಹಿನಿ, ಬೆಂಗಳೂರು

ಡಿಸಿಎಂ ಡಿ.ಕೆ.ಶಿವಕುಮಾರ್ 100 ಕೋಟಿ ಆಫರ್ ಮಾಡಿದ್ದರು ಎಂಬ ಬಿಜೆಪಿ ಮುಖಂಡ, ವಕೀಲ ದೇವರಾಜೇಗೌಡ ಆರೋಪಕ್ಕೆ ತಿರುಗೇಟು ನೀಡಿರುವ ಸಚಿವ ಪಿಯಾಂಕ್ ಖರ್ಗೆ, ನಮಗೆ ಚುನಾವಣೆ ಬಿಟ್ಟು ಬೇರೆ ಕೆಲಸವಿರಲಿಲ್ವಾ? ಎಂದು ಪ್ರಶ್ನಿಸಿದ್ದಾರೆ.ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಪ್ರಿಯಾಂಕ್ ಖರ್ಗೆ, 100 ಕೋಟಿ ಆಫರ್ ಇತ್ತೆಂದು ಅಮಿತ್ ಶಾಗೆ ಹೇಳಬೇಕಿತ್ತು. 5 ಕೋಟಿ ಹಣ ಕೊಟ್ರು ಅಂದ್ರೆ ಎಷ್ಟು ಟೆಂಪೋಗಳಲ್ಲಿ ತುಂಬಬೇಕು.

ಈ ಹಣ ಎಷ್ಟು ಟೆಂಪೋಗಳಲ್ಲಿ ತುಂಬಬೇಕು ಎಂದು ಬಿಜೆಪಿಯವರಿಗೆ ಗೊತ್ತಿದೆ. ಹಣ ಕೊಟ್ಟಿರುವ ಬಗ್ಗೆ ವಿಡಿಯೋ ರಿಲೀಸ್ ಮಾಡಲಿ ಎಂದು ಹೇಳಿದ್ದಾರೆ. ಪೊಲೀಸ್ ವ್ಯಾನ್ ನಲ್ಲಿ ಹೇಳಿಕೆ ಕೊಟ್ರೆ ಸಾಕ್ಷಿ ಎಂದು ಹೇಲಲು ಆಗುತ್ತಾ? ಏನು ಹೇಳಬೇಕು ಹೇಳಿ ಓಡಿ ಹೋದರೆ ಸಾಕ್ಷಿ ಅಂತಾ ಹೇಳಲು ಆಗುತ್ತಾ? ವಿಷಯ ಡೈವರ್ಟ್ ಮಾಡಲು ಈಗ ಕಾಂಗ್ರೇಸ್ ವಿರುದ್ಧ ಆರೋಪ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಪೆನ್‌ಡ್ರೈವ್ ಪ್ರ 'ಹಾಸನ' ರಾಜಕೀಯ ಸಂಚಲನ

ಇಷ್ಟೆಲ್ಲ ದೊಡ್ಡ ಹಗರಣವಾಗಿರುವುದರಿಂದ ಇದರ ಮೂಲಕ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಹಾಗೂ ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಕೆಟ್ಟ ಹೆಸರು ತರಲು ಹೋಗಿದ್ದರು. ನಮಗೆ ಸುಮಾರು 100 ಕೋಟಿ ರೂಪಾಯಿ ಆಫರ್ ಕೊಟ್ಟಿದ್ದರು. ಅದರಲ್ಲಿ 5 ಕೋಟಿ ರೂಪಾಯಿ ಅಡ್ವಾನ್ಸ್ ಅನ್ನು ಬೋರಿಂಗ್ ಕ್ಲಬ್‌ನ ರೂಂ ನಂಬರ್ 110ಕ್ಕೆ ಕಳಿಸಿದ್ದರು. ಆ ಮೀಟಿಂಗ್‌ಗೆ ಚನ್ನರಾಯಪಟ್ಟಣದ ಎಂ.ಎ. ಗೋಪಾಲಸ್ವಾಮಿಯನ್ನು ಕಳಿಸಿದ್ದರು. ಐದು ಕೋಟಿ ರೂಪಾಯಿ ಕ್ಯಾಶ್ ಅನ್ನೂ ಕೊಟ್ಟು ಕಳಿಸಿದ್ದರು. ಈ 100 ಕೋಟಿ ರೂಪಾಯಿ ಆಫರ್ ಮಾಡಿದ್ದು ಡಿ.ಕೆ. ಶಿವಕುಮಾರ್

–ದೇವರಾಜೇಗೌಡ
ವಕೀಲ

ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ಅಶ್ಲೀಲ ವಿಡಿಯೊ ಪ್ರಕರಣಕ್ಕೆ ಸಂಬಂಧಿಸಿದಂತೆ 100 ಕೋಟಿ ರೂಪಾಯಿ ಆಫರ್ ನೀಡಿದ್ದಾರೆ ಎಂಬ ವಕೀಲ ದೇವರಾಜೇಗೌಡ ಆರೋಪ. ಆತ ಏನು ಮಾತನಾಡುತ್ತಾನೋ, ಮಾತನಾಡಲಿ. ಏನು ಮಾಡುತ್ತಾನೋ ಮಾಡಲಿ. ಅಲ್ಲದೆ, ನಾನು ಆಫರ್ ಮಾಡಿದರೆ ದೇವರಾಜೇಗೌಡ ಲೋಕಾಯುಕ್ತಕ್ಕೆ ಹೋಗಿ ಕಂಪ್ಲೇಂಟ್ ಕೊಡಲಿ ಎಂದು ಸವಾಲು ಹಾಕಿದ್ದಾರೆ.

–ಡಿ.ಕೆ. ಶಿವಕುಮಾರ್
ಡಿಸಿಎಂ

ಅಲ್ಲೋಲ ಕಲ್ಲೋಲ ಸೃಷ್ಟಿಸಿದ ದೇವರಾಜೇಗೌಡ ಬಾಂಬ್

ಹಾಸನ ಜೆಎಂಎಫ್‌ಸಿ ಕೋರ್ಟ್ ಹೊರಗೆ ಪೊಲೀಸ್ ವ್ಯಾನ್ ನೊಳಗಿದ್ದ ವಕೀಲ ದೇವರಾಜೇಗೌಡ ಮಾಧ್ಯಮದವರೊಂದಿಗೆ ಮಾತನಾಡಿ, ಎಲ್.ಆರ್. ಶಿವರಾಮೇಗೌಡ ಮೂಲ 100 ಕೋಟಿ ರೂಪಾಯಿ ಆಫರ್ ಮಾಡಿದ್ದರು. ಡಿ.ಕೆ. ಶಿವಕುಮಾರ್ ನೇರವಾಗಿ ನನ್ನ ಜತೆಗೆ ಮಾತನಾಡಿದ್ದಲ್ಲ ಎಂದು ಡಿ.ಕೆ. ಶಿವಕುಮಾರ್ ಶುಕ್ರವಾರ ಹೇಳಿದ್ದರು. ನಾಲ್ಕು ಜನ ಮಂತ್ರಿಗಳ ಕಮಿಟಿ ಎಂದು ನಾನು ಹೇಳಿದ್ದೆನಲ್ಲವೇ? ಅವರ ಬಗ್ಗೆ ಹೇಳುತ್ತೇನೆ. ಎನ್. ಚಲುವರಾಯಸ್ವಾಮಿ, ಕೃಷ್ಣಬೈರೇಗೌಡ, ಪ್ರಿಯಾಂಕ್ ಖರ್ಗೆ ಹಾಗೂ ಇನ್ನೊಬ್ಬ ಸಚಿವರನ್ನು ಈ ಪ್ರಕರಣವನ್ನು ಹ್ಯಾಂಡಲ್ ಮಾಡಲು ಬಿಟ್ಟಿದ್ದಾರೆ. ಈಗ ನನ್ನ ಮೇಲೆ ನಿರಂತರವಾಗಿ ಒತ್ತಡ ಹಾಕುತ್ತಿದ್ದಾರೆ. ಆದರೆ, ಅದ್ಯಾವುದಕ್ಕೂ ನಾನು ಒಪ್ಪಲಿಲ್ಲ ಎಂದು ದೇವರಾಜೇಗೌಡ ಹೇಳಿದರು.

- ದೇವರಾಜೇಗೌಡಗೆ ನಾನು 100 ಕೋಟಿ ಆಫರ್ ಕೊಟ್ಟಿದ್ರೆ ಲೋಕಾಯುಕ್ತಕ್ಕೆ ದೂರು ಕೊಡಲಿ ಎಂದು ಡಿಸಿಎಂ ಡಿಕೆ ಶಿವಕುಮಾರ್ ಸವಾಲು ಹಾಕಿದರು
- ಬೆಂಗಳೂರಿನಲ್ಲಿ ಶನಿವಾರ ಮಾತನಾಡಿದ ಅವರು, ವಕೀಲ ದೇವರಾಜೇಗೌಡ ವಿರುದ್ಧ ವಾಗ್ದಾಳಿ ನಡೆಸಿದರು
- ಇನ್ನು ಇದೇ ಸಂದರ್ಭದಲ್ಲಿ ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡರ ಹುಟ್ಟು ಹಬ್ಬದ ಹಿನ್ನೆಲೆಯಲ್ಲಿ ಮಾಜಿ ಪ್ರಧಾನಿಗೆ ಶುಭಹಾರೈಸಿದರು.

ಕುಮಾರಸ್ವಾಮಿ ಜವಾಬ್ದಾರಿ ಸ್ಥಾನದಲ್ಲಿ ಇಲ್ವಾ?

ದೇವೇಗೌಡರ ಬಗ್ಗೆ ನಮಗೆ ಗೌರವವಿಲ್ವಾ? ಆದರೆ ಇಂತ ವಿಚಾರದಲ್ಲಿ ಹೇಗೆ ಮಾತನಾಡಬೇಕು. ಡಿಕೆ ಶಿವಕುಮಾರ್ ಅವರಿಗೆ ಎಚ್ ಡಿ ಕುಮಾರಸ್ವಾಮಿ ಜೊತೆಗೆ ವೈರತ್ವವಿಲ್ಲ. ಕೆಲವೊಮ್ಮೆ ಡಿಕೆಶಿ ಫೈಟ್ ಮಾಡಿದ್ದಾರೆ, ಕೆಲವೊಮ್ಮೆ ಅವರಿಗೆ ಸಹಾಯ ಮಾಡಿದ್ದಾರೆ. ಆದರೆ ಸಹಾಯ ಮಾಡಿದವರನ್ನ ಎಚ್ಚಿಕೆ ಮರೆಯುತ್ತಾರೆ ಎಂದರು. ರೇವಣ್ಣಮೇಲೆ ಕೇಸ್ ಹಾಕಿದ್ದು ಸರಿಯಲ್ಲ ಎಂಬ ಎಚ್‌ಡಿ ದೇವೇಗೌಡ ಹೇಳಿಕೆ ವಿಚಾರವಾಗಿ, ದೇವೇಗೌಡರ ಮಾತನ್ನು ನಾನು ಒಪ್ಪುತ್ತೇನೆ. ಆದರೆ, ಪ್ರಜ್ವಲ್ ರೇವಣ್ಣ ಅವರನ್ನು ವಿದೇಶದಿಂದ ಕರೆಸೋಕೆ ಏನು ಸಮಸ್ಯೆ ಮಹಿಳೆಯನ್ನ ಕಿಡ್ನ್ಯಾಪ್ ಮಾಡಿದ್ದಕ್ಕೆ ತಾನೇ ರೇವಣ್ಣ ಮೇಲೆ ಕೇಸ್ ಹಾಕಿದ್ದು, ರೇವಣ್ಣ ಪಾತ್ರ ಇಲ್ಲದಿದ್ದರೆ ಯಾಕೆ ಹಾಕ್ತಿದ್ರು ರೇವಣ್ಣ ಬಗ್ಗೆ ನಮಗೂ ಗೌರವವಿದೆ ಎಂದರು.

ಪ್ರಜ್ವಲ್ ರೇವಣ್ಣಗೆ ಸಂಕಷ್ಟ

• ಉದಯವಾಹಿನಿ, ಹಾಸನ

ಹಾಸನ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಮುಖಂಡ, ವಕೀಲ ದೇವರಾಜೇಗೌಡ ಮಾಡಿರುವ 100 ಕೋಟಿ ಆಫರ್ ಆರೋಪ ರಾಜ್ಯ ರಾಜಕಾರಣದಲ್ಲಿ ಸಂಚಲನ ಸೃಷ್ಟಿಸಿದ್ದು, ಕಾಂಗ್ರೇಸ್ ನಾಯಕರೂ ವಿಚಲಿರಾಗಿದ್ದಾರೆ. ದೇವರಾಜೇಗೌಡ ಡಿಸಿಎಂ ಡಿ.ಕೆ.ಶಿವಕುಮಾರ್ ಮಾತ್ರವಲ್ಲದೆ, ಸಚಿವರಾದ ಚೆಲುವರಾಯಸ್ವಾಮಿ, ಕೃಷ್ಣಬೈರೇಗೌಡ, ಪ್ರಿಯಾಂಕ್ ಖರ್ಗೆ ಹೆಸರನ್ನೂ ಉಲ್ಲೇಖ ಮಾಡಿರುವುದು ಗಂಭೀರ ಸ್ವರೂಪ ಪಡೆದುಕೊಂಡಿದೆ. ಪ್ರಜ್ವಲ್ ಅವರ ಕಾರು ಚಾಲಕ ಕಾರ್ತಿಕ್ ಗೌಡನ ಹತ್ತಿರ ಪೆನ್‌ಡ್ರೈವ್ ತರಿಸಿಕೊಂಡು ಎಲ್ಲಾ ರೆಡಿ ಮಾಡಿದ ಡಿ.ಕೆ ಶಿವಕುಮಾರ್ ನಾಲ್ಕು ಸಚಿವರ ಕಮಿಟಿ ಮಾಡಿ ಇದನ್ನೆಲ್ಲಾ ಹ್ಯಾಂಡಲ್ ಮಾಡಬೇಕು ಎಂದು ಬಿಟ್ಟಿದ್ದಾರೆ ಎಂದು ದೇವರಾಜೇಗೌಡ ಆರೋಪ ಮಾಡಿದ್ದರು. ಪ್ರಧಾನಿ ಮೋದಿ, ಬಿಜೆಪಿ, ಎಚ್.ಡಿ ಕುಮಾರಸ್ವಾಮಿ ಅವರಿಗೆ ಕೆಟ್ಟ ಹೆಸರು ತರುವ ಉದ್ದೇಶದಿಂದ ಈ ರೀತಿ ಮಾಡಿದ್ದಾರೆ. ಚನ್ನರಾಯಪಟ್ಟಣದ ಗೋಪಾಲಸ್ವಾಮಿ ಬಳಿ 5 ಕೋಟಿ ಹಣ ಕೊಟ್ಟು ಸಂಧಾನಕ್ಕೆ ಕಳಿಸಿದ್ದರು. ಈ ಸಂದರ್ಭದಲ್ಲಿ ಶಿವಕುಮಾರ್ ಅವರು 100 ಕೋಟಿ ಆಫರ್ ಮಾಡಿದರು ಎಂದು ದೇವರಾಜೇಗೌಡ ಆರೋಪಿಸಿದ್ದಾರೆ.

ಆರಂಭದಲ್ಲೇ ಡಿ.ಕೆ.ಶಿವಕುಮಾರ್, ಚೆಲುವ ರಾಯಸ್ವಾಮಿ, ಕೃಷ್ಣ ಬೈರೇಗೌಡ ಅವರು ಈ ಪ್ರಕರಣದಲ್ಲಿ ಪ್ರತಿಕ್ರಿಯೆ ನೀಡುತ್ತಾ ಬಂದಿದ್ದರು. ಇದಕ್ಕೆ ಪ್ರಿಯಾಂಕ್ ಖರ್ಗೆ ಕೂಡ ಧ್ವನಿಗೂಡಿಸಿದ್ದರು. ಆದರೆ ಇದೀಗ ದೇವರಾಜೇಗೌಡ ಈ ನಾಲ್ವರನ್ನು ಉಲ್ಲೇಖಿಸಿ ಆರೋಪಿಸಿರುವುದು ಸಹಜವಾಗಿ ಕುತೂಹಲಕ್ಕೆ ಎಡೆ ಮಾಡಿಕೊಟ್ಟಿದೆ. ದೇವರಾಜೇಗೌಡ ಈ ಹಿಂದೆಯೂ ಡಿ.ಕೆ. ಶಿವಕುಮಾರ್‌ಗೆ ಸಂಬಂಧಿಸಿದ ಆಡಿಯೋ ಬಿಡುಗಡೆ ಮಾಡಿದ್ದರು. ಎಲ್. ಆರ್.ಶಿವರಾಮೇಗೌಡ ಜೊತೆಗೆ ನಡೆಸಿದ ಮಾತುಕತೆ, ಸಂದರ್ಭದಲ್ಲಿ ಡಿಕೆಶಿ ಜೊತೆಗೂ ನಡೆಸಿದ ಮಾತುಕತೆಯ ಆಡಿಯೋ ಬಿಡುಗಡೆ ಮಾಡಿದ್ದರು. ಆದರೆ ಇದರ ಪೂರ್ತಿ ವಿವರವನ್ನು ಅವರು ಬಹಿರಂಗಪಡಿಸಿರಲಿಲ್ಲ. ಈ ಆಡಿಯೋ ಬಿಡುಗಡೆಯ ಬೆನ್ನಲ್ಲೇ ದೇವರಾಜೇಗೌಡ ಅವರನ್ನು ಅತ್ಯಾಚಾರ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಬಂಧನ ಮಾಡಲಾಗಿದೆ. ಇದೀಗ ಅವರು ಪೊಲೀಸ್ ಕಸ್ಟಡಿಯಲ್ಲಿದ್ದಾರೆ. ಈ ನಡುವೆ ಅವರು ರಾಜ್ಯದ ನಾಲ್ವರು ಸಚಿವರ ವಿರುದ್ಧ ಗಂಭೀರ ಸ್ವರೂಪದ ಆರೋಪವನ್ನು ಮಾಡಿದ್ದಾರೆ.ಇನ್ನು ಬಿಜೆಪಿ ಈ ಆರೋಪವನ್ನೇ ಮುಂದಿಟ್ಟುಕೊಂಡು ಕಾಂಗ್ರೇಸ್ ವಿರುದ್ಧ ವಾಗ್ದಾಳಿ ನಡೆಸುತ್ತಿದೆ.

ಪ್ರಕರಣದ ದಿಕ್ಕು ತಪ್ಪಿಸುವ ಪ್ರಯತ್ನದಲ್ಲಿದ್ದಾರೆ. ಅವರಿಗೆ ಮೆಂಟಲ್ ಟ್ರೀಟ್ಮೆಂಟ್ ಕೊಡಿಸುವುದು ಒಳ್ಳೆಯದು ಎಂದು ಹೇಳಿದೆ. ದೇವರಾಜೇಗೌಡ ವಿರುದ್ಧ ಎಕ್ಸ್‌ನಲ್ಲಿ ಪೋಸ್ಟ್ ಹಾಕಿರುವ ರಾಜ್ಯ ಕಾಂಗ್ರೇಸ್, ದೇವರಾಜೇಗೌಡರ ಹೇಳಿಕೆಯಲ್ಲಿ ಯಾವುದೇ ಸತ್ಯಾಂಶವಿಲ್ಲ. ದಿನಕ್ಕೊಂದು ಮಾತನಾಡುವ ದೇವರಾಜೇಗೌಡ ಮಹಿಳೆಯರ ಮಾನ ಕಳೆದ ಪ್ರಕರಣವನ್ನು ಬೇರೆಡೆಗೆ ತಿರುಗಿಸಿ, ರಾಜಕೀಕರಣಗೊಳಿಸಿ ದಿಕ್ಕು ತಪ್ಪಿಸುವ ಪ್ರಯತ್ನದಲ್ಲಿದ್ದಾರೆ. ಎಸ್‌ಐಟಿ ಅಧಿಕಾರಿಗಳು ದೇವರಾಜೇಗೌಡರಿಗೆ ಮಾನಸಿಕ ಚಿಕಿತ್ಸೆ ಕೊಡಿಸುವುದು ಒಳ್ಳೆಯದು ಎಂದು ಆಕ್ರೋಶವನ್ನು ಹೊರಹಾಕಿದೆ. ಬ್ರದರ್ ಸ್ವಾಮಿಗಳು ಹೇಳಿಕೊಟ್ಟ ಮಾತನ್ನು ದೇವರಾಜೇಗೌಡ ಆಡಿದ್ದಾರೆ. ಆತನ ಬಾಯಲ್ಲಿ ಬರುವ ಪ್ರತಿ ಮಾತುಗಳಲ್ಲೂ ದೊಡ್ಡವರ ಚಿತಾವಣೆ ಇರುತ್ತದೆ. ಬಾಯಿ ದೇವರಾಜೇಗೌಡನದ್ದು, ಮಾತು ಬ್ರದರ್ ಸ್ವಾಮಿಗಳದ್ದು ಇದನ್ನು ಸ್ವತಃ ದೇವರಾಜೇಗೌಡ ಒಪ್ಪಿಕೊಂಡಿರುವಾಗ ಅವರ ಮಾತುಗಳಿಗೆ ಗಾಂಭೀರ್ಯತೆಯನ್ನು, ಸತ್ಯವನ್ನು ಹುಡುಕುವುದು ಹಾಸ್ಯಾಸ್ಪದವಾಗುತ್ತದೆ ಎಂದು ಕಾಂಗ್ರೇಸ್ ಕಿಡಿಕಾರಿದೆ.

ನೂರು ಕೋಟಿ ಆಫರ್

ದೇವರಾಜೇಗೌಡರು ಯಾವ ಪರಿಸ್ಥಿತಿಯಲ್ಲಿದ್ದಾರೆ ಎಂಬುದನ್ನು ಪರಿಗಣಿಸಬೇಕು. ಯಾವುದೇ ಸಂದರ್ಭವಾದರೂ ಕಾನೂನು ಮೇಲುಗೈ ಸಾಧಿಸಬೇಕು. ಇಲ್ಲಿ ಪಕ್ಷ, ವ್ಯಕ್ತಿ ಮುಖ್ಯ ಅಲ್ಲ ಎಂದರು. ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ರವರು ದೇವರಾಜೇಗೌಡರಿಗೆ 100 ಕೋಟಿ ರೂ. ಆಫರ್ ನೀಡಿದ್ದರು ಎಂಬ ಆರೋಪಕ್ಕೆ ಸಂಬಂಧಪಟ್ಟಂತೆ ಪ್ರಕರಣ ದಾಖಲಿಸಲಿ, ನಾವ್ಯಾರೂ ಬೇಡ ಎನ್ನುವುದಿಲ್ಲ., ಈ ರೀತಿಯ ಆರೋಪ ಮಾಡುವ ವ್ಯಕ್ತಿ ಯಾರು? ಆತನ ಹಿನ್ನಲೆ ಏನು? ಯಾವ ಸಂದರ್ಭದಲ್ಲಿ ಏಕೆ ಹೇಳಿದ್ದಾರೆ? ಎಂಬುದನ್ನು ಪರಿಗಣಿಸಬೇಕಾಗುತ್ತದೆ

–ಮಧು ಬಂಗಾರಪ್ಪ, ಶಾಲಾ ಶಿಕ್ಷಣ, ಸಾಕ್ಷರತಾ ಸಚಿವ

ಪೆನ್‌ಡ್ರೈವ್ ಪ್ರಕರಣದ ಬಗ್ಗೆ ನಮಗೂ ನೋವಾಗಿದೆ. ಇದು ಆಗಬಾರದಿತ್ತು. ದೇವೇಗೌಡರ ಕುಟುಂಬಕ್ಕೆ ಈ ರೀತಿಯಾಗಿರುವುದರ ಬಗ್ಗೆ ಬೇಸರವಿದೆ. ರಾಜ್ಯದಲ್ಲಿ ಅತ್ಯಂತ ಪ್ರತಿಷ್ಠಿತ ಕುಟುಂಬ ಅದು. ದೇವೇಗೌಡರನ್ನು ಹೊರತುಪಡಿಸಿದರೆ, ಕುಮಾರಸ್ವಾಮಿಯವರು ಆ ಮನೆಯ ಎರಡನೇಯ ಮುಖ್ಯಸ್ಥರಾಗಿದ್ದಾರೆ. ಈಗಲಾದರೂ ಅವರು ಪ್ರಜ್ವಲ್ ನನ್ನು ವಾಪಸ್ ಕರೆಸಲಿ ಎಂದು ಮನವಿ ಮಾಡಿದರು

–ಚೆಲುವರಾಯಸ್ವಾಮಿ, ಕೃಷಿ ಸಚಿವ

ಸಿಬಿಐ ಮೂಲಕ ರೆಡ್ ಕಾರ್ನರ್ ನೋಟಿಸ್

ವಿದೇಶದಲ್ಲಿರುವ ಪ್ರಜ್ವಲ್ ರೇವಣ್ಣಗೆ ವಿಚಾರಣೆಗೆ ಹಾಜರಾಗಲು ಈಗಾಗಲೇ ಎಸ್‌ಐಟಿ ಲುಕ್ ಔಟ್ ನೋಟಿಸ್ ಹಾಗೂ ಬ್ಲೂ ಕಾರ್ನರ್ ನೋಟಿಸ್ ನೀಡಿತ್ತು. ಇದೀಗ ಅರೆಸ್ಟ್ ವಾರಂಟ್ ಲಭಿಸಿರುವುದರಿಂದ ಸಿಬಿಐ ಮೂಲಕ ರೆ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

ತಳೆಯಿತ್ತಾ ಪ್ರಕೃತಿಗೆ ನಿಜಧಾಮ

ನಿಜಗುಣರ ಪರಮಾರ್ಥಗೀತೆಯ ಮೂರನೇ ಗತಿಯ ಮಾತು. ಸತ್ ಚಿತ್ ಆನಂದ ನಿತ್ಯ ಸ್ವರೂಪನಾದ ಪರಮಾತ್ಮನಾದ ತನ್ನ ಬಹುವಾಗಿ ತೋರುವ ಇಚ್ಛಾಶಕ್ತಿಯಿಂದ ಮೂರು ಗುಣಗಳ ಸಾಮ್ಯಾವಸ್ಥೆಯಾದ ಪ್ರಕೃತಿಯು ನಾದ ಬಿಂದು ಕಳೆಗಳಿಂದ ಕೂಡಿ ಸತ್ತ್ವ ರಜಸ್ ತಮಸ್ ಎಂಬ ಮೂರು ಗುಣಗಳನ್ನು ಹುಟ್ಟುಹಾಕಿತು. ಈ ಮೂರು ಗುಣಗಳಿಂದ ಕ್ರಮವಾಗಿ ವೈಕಾರಿಕ ತೈಜಸ ಭೂತಾದಿ ಎಂಬ ಮೂರು ಅಹಂಕಾರಗಳು ಉಂಟಾದವು. ಮೂರು ಗುಣ ಹಾಗೂ ಮೂರು ಅಹಂಕಾರಗಳಿಂದ ನಾಮರೂಪಾತ್ಮಕ ಈ ಜಗತ್ತು ಉದಿಸಿತು. ಮಹದ್ರೂಪವಾಗಿ ತೋರುವ ಈ ಜಗತ್ತೂ ಪ್ರಕೃತಿ. ಈ ಪ್ರಕೃತಿಗೆ ಆಶ್ರಯ ಅಧಿಷ್ಠಾನ ಸತ್ ಚಿತ್ ಆನಂದ ನಿತ್ಯ ಸ್ವರೂಪನಾದ ನೀನೇ ಆಗಿರುವಿ. ಆದ್ದರಿಂದ ನೀನು ನಿಸ್ಸೀಮ ಸೀಮಾತೀತ.

ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಿ

ನಮ್ಮ ಕುಟುಂಬ ವಿರುದ್ಧ ರಾಜಕೀಯ ಕುತಂತ್ರ ನಡೆದಿದೆ: ಹೆಚ್‌ಡಿ ದೇವೇಗೌಡ, ಮೊದಲ ಬಾರಿಗೆ ಪ್ರತಿಕ್ರಿಯೆ

• ಉದಯವಾಹಿನಿ, ಬೆಂಗಳೂರು

ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರ ವಿರುದ್ಧ ಕೇಳಿ ಬರುತ್ತಿರುವ ಲೈಂಗಿಕ ದೌರ್ಜನ್ಯದ ಅಶ್ಲೀಲ ವಿಡಿಯೊ ಪ್ರಕರಣಕ್ಕೆ ಸಂಬಂಧಪಟ್ಟಂತೆ ಜೆಡಿಎಸ್ ವರಿಷ್ಠ ಹೆಚ್‌ಡಿ ದೇವೇಗೌಡರು ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿದ್ದಾರೆ.

ಮಾಜಿ ಪ್ರಧಾನಿ ಜೆಡಿಎಸ್ ವರಿಷ್ಠ ದೇವೇಗೌಡರ 91ನೇ ಹುಟ್ಟುಹಬ್ಬ. ಆ ಪ್ರಯುಕ್ತ ಬೆಂಗಳೂರಿನಲ್ಲಿ ವೆಂಕಟೇಶ್ವರ ದೇವಸ್ಥಾನಕ್ಕೆ ಹೋಗಿ ಅರ್ಚನೆ ಮಾಡಿಸಿದ ಬಳಿಕ ಹೊರಗೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ನಮ್ಮ ಕುಟುಂಬದ ವಿರುದ್ಧ ರಾಜಕೀಯ ಕುತಂತ್ರ ನಡೆದಿದೆ. ಪ್ರಜ್ವಲ್ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವುದರ ಬಗ್ಗೆ ತಕರಾರು ಇಲ್ಲ. ಆದರೆ ರೇವಣ್ಣ ವಿರುದ್ಧ ಆರೋಪ ಮಾಡಿರುವುದರ ಸತ್ಯ ಜನರಿಗೆ ಗೊತ್ತಿದೆ. ಪ್ರಜ್ವಲ್ ಪ್ರಕರಣ ಬಗ್ಗೆ ಕುಮಾರಸ್ವಾಮಿ ಇಡೀ ಕುಟುಂಬದ ಪರವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ರೇವಣ್ಣ ಪ್ರಕರಣದ ಬಗ್ಗೆ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಅದರ ಬಗ್ಗೆ ನಾನು ಪ್ರತಿಕ್ರಿಯೆ ಕೊಡುವುದಿಲ್ಲ. ಹಾಸನ ಕ್ಷೇತ್ರದ ಸಂಸದ ಪ್ರಜ್ವಲ್ ರೇವಣ್ಣ ಹೊರಗಡೆ ಹೋಗಿದ್ದಾರೆ ಎಂದರು.

ರೇವಣ್ಣ ಪ್ರಕರಣ ಕೋರ್ಟ್‌ನಲ್ಲಿ ವಿಚಾರಣೆ

ಈ ಘಟನೆ ಬಗ್ಗೆ ಕುಟುಂಬದ ಪರವಾಗಿ ಹೆಚ್‌ಡಿ ಕುಮಾರಸ್ವಾಮಿ ಮಾತನಾಡಿದ್ದಾರೆ. ಕ್ರಮ ಕೈಗೊಳ್ಳುವುದು ಸರ್ಕಾರದ ಜವಾಬ್ದಾರಿ, ಘಟನೆ ಬಗ್ಗೆ ಈ ನೆಲದ ಕಾನೂನಿನ ಚೌಕಟ್ಟಿನಡಿಯಲ್ಲಿ ಏನೇನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಲಿ ಎಂದು ಹೇಳಿದ್ದಾರೆ. ಇದರಲ್ಲಿ ಅನೇಕ ಜನರಿದ್ದಾರೆ, ಅವರ ಹೆಸರನ್ನು ಹೇಳಲು ಹೋಗಲ್ಲ. ಅನ್ಯಾಯಕ್ಕೆ ಒಳಗಾಗಿರುವ ಸಂತ್ರಸ್ತೆಯರಿಗೆ ಪರಿಹಾರ ನೀಡಬೇಕು. ಈ ಎಲ್ಲಾ ವಿಚಾರಗಳನ್ನು ಕುಮಾರಸ್ವಾಮಿ ಬಿಡಿಸಿ ಬಿಡಿಸಿ ಹೇಳಿದ್ದಾರೆ. ಇದು ಯಾವ ರೀತಿ ನಡೆಯಿತು ಎಂದು ನಾನು ವಿಶ್ಲೇಷಣೆ ಮಾಡಲ್ಲ ಎಂದಿದ್ದಾರೆ.

ಡಿಸಿಎಂ 100 ಕೋಟಿ ಆಫರ್ ಮಾಡಿದ್ದರು ಎಂಬ ದೇವರಾಜೇಗೌಡ ಹೇಳಿಕೆಗೆ ನಾನು ಪ್ರತಿಕ್ರಿಯೆ ಕೊಡುವುದಿಲ್ಲ ಎಂದೂ ಅವರು ಹೇಳಿದರು. ದೇವರಾಜೇಗೌಡ ಏನು ಹೇಳಿದ್ದಾರೆಂದು



ಪ್ರಜ್ವಲ್ ಏಪ್ರಿಲ್ 27 ರಂದು ಜರ್ಮನಿಗೆ ತೆರಳಿದ್ದು ಇನ್ನೂ ತಲೆಮರೆಸಿಕೊಂಡಿದ್ದಾರೆ. ಅವರ ವಿರುದ್ಧ ಇಂಟರ್‌ಪೋಲ್ ಬ್ಲೂ ಕಾರ್ನರ್ ನೋಟಿಸ್ ಜಾರಿ ಮಾಡಲಾಗಿದ್ದು, ಆತನನ್ನು ವಾಪಸ್ ಕರೆತರುವ ಪ್ರಯತ್ನ ನಡೆದಿದೆ. ಇನ್ನೊಂದೆಡೆ ಲೈಂಗಿಕ ಕಿರುಕುಳ ಪ್ರಕರಣದಲ್ಲಿ ದೇವೇ ಗೌಡರ 66 ವರ್ಷದ ಪುತ್ರ ಮಾಜಿ ಸಚಿವ ರೇವಣ್ಣ ಅವರು ನ್ಯಾಯಾಲಯದಿಂದ ಮಧ್ಯಂತರ ನಿರೀಕ್ಷಣಾ ಜಾಮೀನು ಪಡೆದಿದ್ದಾರೆ, ಇದರಲ್ಲಿ ಅವರ ಮಗ ಪ್ರಜ್ವಲ್ ಕೂಡ ಆರೋಪಿಯಾಗಿದ್ದಾರೆ.

ಮಾಧ್ಯಮದಲ್ಲಿ ನೋಡಿದ್ದೇವೆ. ಎಲ್ಲದಕ್ಕೂ ಕುಮಾರಸ್ವಾಮಿ ಉತ್ತರ ಕೊಟ್ಟಿದ್ದಾರೆ. ಯಾವುದೇ ವಿಚಾರ ಬಂದರೂ ಹೋರಾಟ ಮಾಡುವ ಛಲ ಇದೆ. ಲೋಕಸಭೆ ಚುನಾವಣೆಯಲ್ಲಿ ಎಲ್ಲಾ ಕಡೆ ನಾನು ಪ್ರಚಾರ ಮಾಡಿದ್ದೇನೆ. ಜೂನ್ 4ರಂದು ಚುನಾವಣಾ ಫಲಿತಾಂಶ ಬಳಿಕ ನಿಮ್ಮನ್ನು ಭೇಟಿ ಮಾಡುತ್ತೇನೆ. ನಂತರ ಎಲ್ಲಾ ವಿಷಯದ ಬಗ್ಗೆ ಮಾತನಾಡುತ್ತೇನೆ ಎಂದರು.

ರೇವಣ್ಣನವರಿಗೆ ಒಂದು ಪ್ರಕರಣದಲ್ಲಿ ಜಾಮೀನು ಸಿಕ್ಕಿದೆ, ಇನ್ನೊಂದು ನಾಡಿದ್ದು ವಿಚಾರಣೆಯಿದೆ, ಈ ವಿಚಾರದಲ್ಲಿ ಏನು ಬೆಳವಣಿಗೆ ಆಗಿದೆ ಎಂದು ರಾಜ್ಯದ ಜನತೆ ನೋಡುತ್ತಿದ್ದಾರೆ. ಪ್ರಜ್ವಲ್ ಬಗ್ಗೆ ಕಾನೂನು ಕ್ರಮ ಕೈಗೊಳ್ಳಲಿ ಎಂದರು.
– ಹೆಚ್ ಡಿ ದೇವೇಗೌಡ

33 ವರ್ಷದ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಹಲವು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿದ್ದಾರೆ. ಇದು ರಾಜ್ಯ ರಾಜಕೀಯದಲ್ಲಿ ಬಿರುಗಾಳಿ ಎಬ್ಬಿಸಿದ್ದು, ಆಡಳಿತಾರೂಢ ಕಾಂಗ್ರೇಸ್ ಮತ್ತು ಬಿಜೆಪಿ-ಜೆಡಿ(ಎಸ್) ಜಿದ್ದಾಜಿದ್ದಿಯಲ್ಲಿ ತೊಡಗಿವೆ.
– ಹೆಚ್ ಡಿ ದೇವೇಗೌಡ

ಕರ್ನಾಟಕ ಶಾಸ್ತ್ರೀಯ ಸಂಗೀತ

• ಉದಯವಾಹಿನಿ, ಬೆಂಗಳೂರು

ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್ (ರಿ.) ವತಿಯಿಂದ ಮೇ 19, ಭಾನುವಾರ ಸಂಜೆ 6-15ಕ್ಕೆ ಕರ್ನಾಟಕ ಶಾಸ್ತ್ರೀಯ ಸಂಗೀತ. ವಿ|| ಧನ್ಯ ರುದ್ರಪಟ್ಟಣ (ಗಾಯನ), ವಿ|| ಎಸ್. ಜನಾರ್ಧನ್ (ಪಿಟೀಲು), ವಿ|| ಕೆ. ಆರ್. ರಕ್ಷಿತ್ ಶರ್ಮಾ (ಮೃದಂಗ) ಮತ್ತು ವಿ|| ಜಿ. ಆರ್. ಹರೀಶ್ ಚಂದ್ರ (ಖಂಜಿರ). ಸಹಕಾರ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂಸ್ಕೃತಿ ಅಕಾಡೆಮಿ, ಭಾರತ ಸರ್ಕಾರ ಮತ್ತು ಸಂಗೀತ-ನಾಟಕ ಅಕಾಡೆಮಿ, ಭಾರತ ಸರ್ಕಾರ. ಸ್ಥಳ : ಶ್ರೀ ರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಅಂಚೆ ಕಚೇರಿ ಹತ್ತಿರ, ಮಲ್ಲೇಶ್ವರಂ, ಬೆಂಗಳೂರು-560003

ಹೆಂಡ್ತಿಯನ್ನು ಡುಮ್ಕಿ ಎನ್ನುತ್ತಿದ್ದ ಗಂಡ: ಮನನೊಂದು ಮಹಿಳೆ ಆತ್ಮಹತ್ಯೆಗೆ ಶರಣು!

• ಉದಯವಾಹಿನಿ, ಬೆಂಗಳೂರು

ದಪ್ಪ ಇರುವುದಕ್ಕೆ ಪತಿಯ ನಿಂದನೆಗೆ ಬೇಸತ್ತು ಬೆಂಗಳೂರಿನಲ್ಲಿ ಗೃಹಿಣಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಮೃತ ಮಹಿಳೆಯನ್ನು ಮಂಜುನಾಥನಗರ ನಿವಾಸಿ ಸಂಧ್ಯಾ (31) ಅಂತ ತಿಳಿದು ಬಂದಿದೆ. ಮೃತ ಸಂಧ್ಯಾ ದಪ್ಪ ಇರುವುದಕ್ಕೆ ಪತಿಯ ನಿಂದನೆ ಹಾಗೂ ಅನಾರೋಗ್ಯದಿಂದ ಬಳಲುತ್ತಿದ್ದ ಮಗುವಿನ ವಿಚಾರಕ್ಕೆ ದಾಂಪತ್ಯ ಕಲಹ ಉಂಟಾಗಿ ಆತ್ಮಹತ್ಯೆಗೆ ಶರಣಾಗಿದ್ದಾರೆ ಎನ್ನಲಾಗಿದೆ. ಮಗಳು ಸಂಧ್ಯಾ ಆತ್ಮಹತ್ಯೆಗೆ ಅಳಿಯ ಜಯಪ್ರಕಾಶ್, ಕುಟುಂಬಸ್ಥರ ದೈಹಿಕ, ಮಾನಸಿಕ ಕಿರುಕುಳವೇ ಕಾರಣ ಎಂದು ಆರೋಪಿಸಿ ಅವರ ತಂದೆ, ಬಿಎಂಟಿಸಿ ನಿವೃತ್ತ ಚಾಲಕ ಕಂದನ್ ದೂರು ನೀಡಿದ್ದು, ಘಟನೆ ಸಂಬಂಧ ಆತ್ಮಹತ್ಯೆಗೆ ಪ್ರಚೋದನೆ ಹಾಗೂ ಕೌಟುಂಬಿಕ ದೌರ್ಜನ್ಯದ ಆರೋಪದನ್ವಯ ಪ್ರಕರಣ ದಾಖಲಿಸಿಕೊಂಡು ಬಸವೇಶ್ವರನಗರ ಪೋಲಿಸ್ ಠಾಣೆಯವರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಬಾಂಬ್ ಬೆದರಿಕೆ : ಆರೋಪಿ ಅರೆಸ್ಟ್

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಬಾಂಬ್ ಬೆದರಿಕೆ ಹಾಕಿದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಪ್ರಯಾಣಿಕನನ್ನು ಬಂಧಿಸಲಾಗಿದೆ. ಚೆಕ್-ಇನ್ ಬ್ಯಾಗ್‌ನಲ್ಲಿ ಬಾಂಬ್ ಅಡಗಿಸಿಟ್ಟಿರುವುದಾಗಿ ಸುಳ್ಳು ಬೆದರಿಕೆ ಹಾಕಿದ್ದ ಆರೋಪದಲ್ಲಿ ಆರೋಪಿಯನ್ನು ಬಂಧಿಸಲಾಗಿದೆ. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭದ್ರತಾ ತಪಾಸಣೆ ವೇಳೆ ವ್ಯಕ್ತಿಯು ಬ್ಯಾಗ್‌ನಲ್ಲಿ ಬಾಂಬ್ ಇದೆ ಎಂದು ಹೇಳಿ ಆತಂಕ ಸೃಷ್ಟಿಸಿದ್ದ. ಈ ಸಂಬಂಧ ಪ್ರಯಾಣಿಕ ರಾಜೇಶ್‌ಕುಮಾರ್ ಬೇನಿವಾಲ್ ವಿರುದ್ಧ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಯಾನ ಸಂಸ್ಥೆಯ ಸಿಬ್ಬಂದಿ ವಿಮಾನ ನಿಲ್ದಾಣ ಪೊಲೀಸರಿಗೆ ದೂರು ನೀಡಿದ್ದರು. ಸದ್ಯ ಆರೋಪಿ ರಾಜೇಶ್‌ಕುಮಾರ್ ಬೇನಿವಾಲ್ ನನ್ನು ಬಂಧಿಸಲಾಗಿದೆ. ಪ್ರಯಾಣಿಕರು ಬ್ಯಾಗ್‌ಗಳನ್ನು ತಪಾಸಣೆಗಾಗಿ ಏರ್ ಲೈನ್‌ನ ಚೆಕ್-ಇನ್ ಕೌಂಟರ್‌ನಲ್ಲಿ ಹಸ್ತಾಂತರಿಸುತ್ತಿದ್ದಾಗ ಬೇನಿವಾಲ್ ತನ್ನ ಬ್ಯಾಗ್‌ನಲ್ಲಿ ಬಾಂಬ್ ಇದೆ ಎಂದು ಗಟ್ಟಿಯಾಗಿ ಹೇಳಿದ್ದಾನೆ. ವಿಮಾನಯಾನ ಸಿಬ್ಬಂದಿ ತಕ್ಷಣವೇ ವಿಮಾನ ನಿಲ್ದಾಣದ ಭದ್ರತಾ ಏಜೆನ್ಸಿಗಳಿಗೆ ಮಾಹಿತಿ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಜ್ವಲ್ ರೇವಣ್ಣ ಪೆನ್ ಡ್ರೈವ್ ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ: ಸಚಿವ ಸ್ಪಷ್ಟನೆ

• ಉದಯವಾಹಿನಿ, ಬೆಂಗಳೂರು

ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದಲ್ಲಿ ನನ್ನ ಯಾವ ಪಾತ್ರವೂ ಇಲ್ಲ. ದೇವರಾಜೇಗೌಡ ಅವರ ಮಾತುಗಳಿಗೆ ಮಾನ್ಯತೆ ಕೊಡುವ ಅಗತ್ಯವಿಲ್ಲ. ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆ ಎಂದು ಕೃಷಿ ಸಚಿವ ಎನ್ ಚಲುವರಾಯಸ್ವಾಮಿ ಸ್ಪಷ್ಟನೆ ನೀಡಿದ್ದಾರೆ.

ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದಲ್ಲಿ ಸಚಿವ ಎನ್ ಚಲುವರಾಯಸ್ವಾಮಿ ಪಾತ್ರ ಕೂಡ ಇದೆ ಎಂದು ಬಿಜೆಪಿ ಮುಖಂಡ ಹಾಗೂ ವಕೀಲ ದೇವರಾಜೇಗೌಡ ಆರೋಪಕ್ಕೆ ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಅವರು, ಸಂಸದ ಪ್ರಜ್ವಲ್ ರೇವಣ್ಣ ಪೆನ್ ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಯಾವ ಪಾತ್ರವೂ ಇಲ್ಲದಿರುವುದರ ಬಗ್ಗೆ ಈ ಮೂಲಕ ಸ್ಪಷ್ಟ ಪಡಿಸುತ್ತೇನೆ. ಈಗಾಗಲೇ ಬಂಧಿತನಾಗಿದ್ದು, ಆರೋಪಿ ಸ್ಥಾನದಲ್ಲಿರುವ ವಕೀಲ ದೇವರಾಜೇಗೌಡ ರಾಜ್ಯದ ಜನರ ಗಮನ ಬೇರೆಡೆಗೆ ಸೆಳೆಯಲು ಈ ರೀತಿ ಆರೋಪ ಮಾಡಿದ್ದಾನೆ ಎಂದಿದ್ದಾರೆ.

ಫ್ಲಾಟ್ಸ್ ನಿರ್ಮಿಸಲು 8 ಮರ ಕಡಿದ ಅನ್ವಿತಾ ಬಿಲ್ಡರ್ ವಿರುದ್ಧ ಕೇಸ್ ದಾಖಲಿಸಿದ ಬಿಬಿಎಂಪಿ

• ಉದಯವಾಹಿನಿ, ಬೆಂಗಳೂರು

ಕೆಆರ್ ಪುರಂ ವ್ಯಾಪ್ತಿಯಲ್ಲಿರುವ ಬಸವನಪುರ ವಾರ್ಡ್‌ನಲ್ಲಿರುವ ಸಾಯಿ ಸೆರಿನಿಟಿ ಲೇಔಟ್‌ನಲ್ಲಿ ಫ್ಲಾಟ್‌ಗಳನ್ನು ನಿರ್ಮಿಸಲು ಎಂಟು ಮರಗಳನ್ನು ಕಡಿದ ಆರೋಪದ ಮೇಲೆ ಆಂಧ್ರಪ್ರದೇಶ ಮೂಲದ ಬಿಲ್ಡರ್ ವಿರುದ್ಧ ಬಿಬಿಎಂಪಿ ಅರಣ್ಯ ವಿಭಾಗವು ಎಫ್‌ಐಆರ್ ದಾಖಲಿಸಿದೆ. ಮರಗಳನ್ನು ಕಡಿಯುತ್ತಿದ್ದ ವೇಳೆ ಬಡಾವಣೆಯ ನಿವಾಸಿಯೊಬ್ಬರು ಮಧ್ಯಪ್ರವೇಶಿಸಲು ಮುಂದಾದಾಗ ಬೆದರಿಕೆ ಹಾಕಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಕಳೆದ ಎರಡು ದಿನಗಳಿಂದ ಮಹದೇವಪುರ ವಲಯ ಉಪ ವಲಯ ಅರಣ್ಯಾಧಿಕಾರಿ ಸುದರ್ಶನರೆಡ್ಡಿ ಅವರಿಗೆ ಕರೆ ಮಾಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ, ಅರಣ್ಯ ಅಧಿಕಾರಿಗಳು ಉದ್ದೇಶಪೂರ್ವಕವಾಗಿ 5 ರಿಂದ 6 ಗಂಟೆಗಳ ಕಾಲ ತಡವಾಗಿ ಸ್ಥಳಕ್ಕೆ ತಲುಪಿದರು, ಈ ವೇಳೆಗೆ ಬೃಹತ್ ಕೊಂಬೆಯನ್ನು ಕಡಿಯಲಾಗಿದೆ ಎಂದು ನಿವಾಸಿಗಳು ಆರೋಪಿಸಿದ್ದಾರೆ. ನಿರ್ಮಾಣ ಸಂಸ್ಥೆಯಾದ ಅನ್ವಿತಾ ಇನ್ಫ್ರಾ ಬಿಲ್ಡರ್ಸ್ 45 ಫ್ಲಾಟ್‌ಗಳನ್ನು ನಿರ್ಮಿಸಲು ಬೃಹತ್ ಮಳೆ ಮರವನ್ನು ಕತ್ತರಿಸಲು ಕಾರ್ಮಿಕರನ್ನು ನಿಯೋಜಿಸಿದೆ.

ಮರಗಳನ್ನು ಕಡಿಯುವುದನ್ನು ತಡೆಯುವಂತೆ ನಿವಾಸಿಗಳು ಸುದರ್ಶನ್ ರೆಡ್ಡಿ ಅವರಿಗೆ ಕರೆ ಮಾಡಿದ್ದರು, ಆದರೆ ಅವರು ತಡವಾಗಿ ತಲುಪಿದ್ದಾರೆ. ನಂತರ ಕತ್ತರಿಸುವುದನ್ನು ನಿಲ್ಲಿಸಲಾಯಿತು.

ಕೋರ್ಟ್ ಮೂಲಕ ವಾರೆಂಟ್ ಜಾರಿಗೆ ಸಿಐಡಿ ಸಿದ್ಧತೆ

• ಉದಯವಾಹಿನಿ, ಬೆಂಗಳೂರು

ಅಶ್ಲೀಲ ವಿಡಿಯೋ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ದೇಶದಿಂದ ದೇಶಕ್ಕೆ ಜಿಗಿಯುತ್ತ ತಲೆಮರಿಸಿಕೊಂಡಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಈಗ ಎಸ್ ಐಟಿ ಮತ್ತೊಂದು ಅಸ್ತ್ರ ಪ್ರಯೋಗಿಸಲು ಮುಂದಾಗಿದ್ದು, ಕೋರ್ಟ್ ಮೂಲಕ ವಾರೆಂಟ್ ಜಾರಿ ಮಾಡುವ ಮುಖಾಂತರ ಪ್ರಜ್ವಲ್ ರೇವಣ್ಣನನ್ನು ಬಂಧಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ.

ಹೌದು ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಎಸ್‌ಐಟಿ ಅಧಿಕಾರಿಗಳು ಪ್ರಜ್ವಲ್‌ಗೆ ವಿಚಾರಣೆಗೆ ಹಾಜರಾಗುವಂತೆ ಹಲವಾರು ಬಾರಿ ನೋಟಿಸ್ ನೀಡಿದ್ದರು. ಅಲ್ಲದೆ ಸಿಐಡಿ ಮುಖಾಂತರ ರೆಡ್ ಕಾರ್ನರ್ ಹಾಗೂ ಬ್ಲೂ ಕಾರ್ನರ್ ನೋಟಿಸ್ ಕೂಡ ಜಾರಿ ಮಾಡಲಾಗಿತ್ತು. ಆದರೂ ಕೂಡ ಪ್ರಜ್ವಲ್ ರೇವಣ್ಣ ಯಾವುದೇ ನೋಟಿಸ್‌ಗೂ ಸರಿಯಾದ ರೀತಿ ಸ್ಪಂದಿಸಲಿಲ್ಲ. ಹಾಗಾಗಿ ಇದೀಗ ಕೋರ್ಟ್ ಮುಖಾಂತರ ವಾರಂಟ್ ಜಾರಿ ಮಾಡಲು ಎಸ್‌ಐಟಿ ಅಧಿಕಾರಿಗಳು ಸಿದ್ಧತೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಸದ್ಯ ಈ ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಜ್ವಲ್ ರೇವಣ್ಣ ಅವರು ಜರ್ಮನ್ ನಿಂದ ಲಂಡನ್‌ಗೆ ಪ್ರಯಾಣಿಸಿ ಅಲ್ಲಿ ವಾಸ್ತವ್ಯ ಮಾಡಿದ್ದಾರೆ ಎಂದು ಬಲ್ಲ ಮೂಲಗಳಿಂದ ಮಾಹಿತಿ ಬಂದಿದೆ. ಈ ನಡುವೆ ಪ್ರಜ್ವಲ್ ರೇವಣ್ಣನವರ ಬ್ಯಾಂಕ್ ಖಾತೆಗೆ ಭಾರತದಿಂದ ಹಣವನ್ನು ಹಾಕಿದ್ದಾರೆ ಎನ್ನಲಾಗಿದೆ. ಈ ನಡುವೆ ಪ್ರಜ್ವಲ್ ರೇವಣ್ಣನೊಂದಿಗೆ ಇಬ್ಬರು ಸ್ನೇಹಿತರು ಕೂಡ ಇದ್ದು, ಅದರಲ್ಲಿ ಒಬ್ಬರು ಬೆಂಗಳೂರಿನವರು, ಮತ್ತೊಬ್ಬರು ದುಬೈ ಮೂಲದವರು ಎನ್ನಲಾಗಿದೆ.

ಆನ್‌ಲೈನ್‌ನಲ್ಲಿ ಆಯುಷ್ಮಾನ್ ಭಾರತ್ ಕಾರ್ಡ್‌ಗಾಗಿ ಅರ್ಜಿ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ಅದು ರಾಜ್ಯ ಸರ್ಕಾರವಾಗಿರಲಿ ಅಥವಾ ಕೇಂದ್ರ ಸರ್ಕಾರವಾಗಿರಲಿ, ಇವೆರಡೂ ಇಂತಹ ಅನೇಕ ಪ್ರಯೋಜನಕಾರಿ ಮತ್ತು ಕಲ್ಯಾಣ ಯೋಜನೆಗಳನ್ನು ನಡೆಸುತ್ತಿವೆ, ಅದರ ಮೂಲಕ ಬಡ ವರ್ಗ ಮತ್ತು ಅಗತ್ಯವಿರುವ ಜನರಿಗೆ ಪ್ರಯೋಜನವಾಗುವ ಕೆಲಸವನ್ನು ಮಾಡಲಾಗುತ್ತಿದೆ. ನೀವು ಸಹ ಯಾವುದೇ ಯೋಜನೆಗೆ ಅರ್ಹರಾಗಿದ್ದರೆ, ನಿಸ್ಸಂಶಯವಾಗಿ ನೀವು ಈ ಯೋಜನೆಗಳಿಗೆ ಸೇರುವ ಮೂಲಕ ಲಾಭವನ್ನು ಪಡೆಯಬಹುದು.

ಜನರಿಗೆ ಪ್ರಯೋಜನ ಕೆಲಸ

ಆಯುಷ್ಮಾನ್ ಭಾರತ್, ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ, ಮುಖ್ಯಮಂತ್ರಿ ಯೋಜನೆ ತೆಗೆದುಕೊಳ್ಳಿ. ಈ ಆರೋಗ್ಯ ಯೋಜನೆಗೆ ಸೇರುವ ಮೂಲಕ ನೀವು 5 ಲಕ್ಷ ರೂ.ವರೆಗೆ ಉಚಿತ ಚಿಕಿತ್ಸೆಯ ಲಾಭವನ್ನು ಪಡೆಯಲು ಬಯಸಿದರೆ, ಮೊದಲು ನೀವು ಅದಕ್ಕೆ ಅರ್ಹರಾಗಿದ್ದೀರಾ ಅಥವಾ ಇಲ್ಲವೇ ಎಂದು ನೀವು ತಿಳಿದುಕೊಳ್ಳಬೇಕು. ಆದ್ದರಿಂದ ಈ ಯೋಜನೆಯ ಅರ್ಹತಾ ಪಟ್ಟಿಯ ಬಗ್ಗೆ ತಿಳಿದುಕೊಳ್ಳೋಣ. ಅರ್ಜಿ ಸಲ್ಲಿಸುವುದು ಹೇಗೆ? ಅರ್ಹರು ಅರ್ಜಿ ಸಲ್ಲಿಸಲು ತಮ್ಮ ಹತ್ತಿರದ ಸಾರ್ವಜನಿಕ ಸೇವಾ ಕೇಂದ್ರಕ್ಕೆ ಭೇಟಿ ನೀಡಬಹುದು ಇಲ

ನಗರದಲ್ಲಿ ಕಣ್ಣು ಹಾಯಿಸಿದಷ್ಟೂ ಕಸದ ರಾಶಿ: ನಗರಭೆಗೆ ತಲೆನೋವು

ಖಾಲಿ ನಿವೇಶನ, ಚರಂಡಿಯ ಬಳಿ ರಾತ್ರೋ ರಾತ್ರಿ ಕಸದ ಗುಡ್ಡೆ ಸಂಗ್ರಹ, ನಿವಾಸಿಗಳು ಮೂಗು ಮುಚ್ಚಿಕೊಂಡು ತಿರುಗಾಡುವ ಸ್ಥಿತಿ ನಿರ್ಮಾಣ

• ಉದಯವಾಹಿನಿ ಮಂಡ್ಯ

ನಗರದಲ್ಲಿ ಖಾಲಿ ನಿವೇಶನ, ಚರಂಡಿಯ ಬಳಿ ರಾತ್ರೋ ರಾತ್ರಿ ಕಸದ ಗುಡ್ಡೆ ಸಂಗ್ರಹವಾಗುತ್ತಿದ್ದು, ನಿವಾಸಿಗಳು ಮೂಗು ಮುಚ್ಚಿಕೊಂಡು ತಿರುಗಾಡುವ ಸ್ಥಿತಿ ನಿರ್ಮಾಣವಾಗಿದೆ. ಇದರಿಂದ, ಕಸದ ವಿಲೇವಾರಿ ನಗರಸಭೆಗೆ ತಲೆನೋವಾಗಿ ಪರಿಣಿಮಸಿದೆ.

ನಗರದ ಹೊಸಹಳ್ಳಿ, ಹಾಲಹಳ್ಳಿ, ಗಾಂಧಿ ನಗರ, ನೆಹರೂ ನಗರ, ಗುತ್ತಲು ಬಡಾವಣೆ, ಅನ್ನಪೂರ್ಣೆಶ್ವರಿ ನಗರ, ಮರಿಗೌಡ ಬಡಾವಣೆ, ಕ್ಯಾತಂಗೆರೆ, ಕಲ್ಲಹಳ್ಳಿ, ಕಿರಗಂದೂರು ಬಳಿ, ಶಂಕರ ಪುರ, ಬೀಡಿ ಕಾಲೋನಿ, ಸೆಂಟ್ರಲ್ ಪೊಲೀಸ್ ಠಾಣೆ ಸಮೀಪ, ಸಂತೆಮಾಳ, ಪೇಟೆಬೀದಿ, ಜೈನರ ಬೀದಿ ಸೇರಿದಂತೆ ನಗರದ ಹಲವೆಡೆ ರಾಶಿ ರಾಶಿ ಕಸದ ಗುಡ್ಡೆಗಳು ಕಂಡು ಬರುತ್ತಿವೆ.

ನಗರಸಭೆ ಸೇರಿದಂತೆ ಬೇಲೂರು, ಬೇವಿನಹಳ್ಳಿ, ಇಂಡುವಾಳು, ಹೊಳಲು ಗ್ರಾಮ ಪಂಚಾಯಿತಿಯಿಂದ ಕಸ ವಿಲೇ ವಾರಿ ವಾಹನಗಳು ಮನೆಮನೆ ಬಾಗಿಲಿಗೆ ಬರುತ್ತವೆ. ಆದರೂ ಸಹ ವಾಹನಗಳನ್ನು ನಿರ್ಲಕ್ಷ್ಯ ವಹಿಸಿರುವುದು ಸರಿಯಲ್ಲ, ಇನ್ನಾದರೂ ಸಹ ಕಸ ವಿಲೇವಾರಿ ವಾಹನಗಳನ್ನು ಬಳಸಿಕೊಂಡರೆ ಎಲ್ಲೆಡೆ ಕಸದ ಗುಡ್ಡೆ ಹಾಕುವುದನ್ನು ತಪ್ಪಿಸಬಹುದು' ಎಂದು ನಿವಾಸಿಗಳಾದ ನೇತ್ರಾ, ಸವಿತಾ ಹೇಳುತ್ತಾರೆ.

ಗಾಂಧಿ ನಗರದಲ್ಲಿ ಪೌರಕಾರ್ಮಿಕರು ಬೆಳಿಗ್ಗೆಯೇ ಬಂದು ಖಾಲಿ ನಿವೇಶನ, ಚರಂಡಿ ಬಳಿ ಸುರಿದಿರುವ ಕಸದ ರಾಶಿಯನ್ನು ತುಂಬಿಕೊಂಡು ಹೋಗುತ್ತಾರೆ.ನಂತರ ರಾತ್ರೋ ರಾತ್ರೋ ಕಸದ ಗುಡ್ಡೆ ಮತ್ತೆ ಕಾಣಿಸುತ್ತದೆ.

ಕಸವನ್ನು ರಾತ್ರಿ ಸುರಿಯಲೆಂದೇ ಬರುವ ಜನರಿಗೆ ಬುದ್ಧಿ ಹೇಳುವವರು ಯಾರು? ಚರಂಡಿ ಅಲ್ಲದೇ, ಅದರೊಳಗೆ ಬಿಸಾಡಿ ಹೋಗುತ್ತಿರುವ ವ್ಯಕ್ತಿಗಳಿಗೆ ದುಬಾರಿ ದಂಡ ವಿಧಿಸಬೇಕು' ಎಂದು ನಿವಾಸಿಗಳಾದ ಫೈರೋಜ್, ಸಹಬಾಜ್, ಫರಾಜ್ ಒತ್ತಾಯಿಸುತ್ತಾರೆ.

ಕಸದ ವಿಲೇವಾರಿ ವಾಹನ ಬೆಳಿಗ್ಗೆ ಬೇಗನೆ ಬರುತ್ತಿದೆ, ಆ ಸಮದಯಲ್ಲಿ ಕೆಲವರು ಮಲಗಿರುತ್ತಾರೆ, ಇನ್ನೂ ಕೆಲವರು ವಾಯು ವಿಹಾರಕ್ಕೆ ಹೋಗಿರುತ್ತಾರೆ, ಈ ಸಂದರ್ಭದಲ್ಲಿ ಕಸವಾಹನ ವಿಲೇವಾರಿ ವಾಹನಗಳು ಬಂದು ಹೋಗುತ್ತವೆ, ಹಾಗಾಗಿ ಈ ಸಮಸ್ಯೆ ಎದುರಾಗುತ್ತಿದೆ.

ನಂತರ ಕೆಲವರು ಮನೆಯಲ್ಲಿರುವ ಕಸವನ್ನು ದೊಡ್ಡ ಚೀಲ, ಕವರ್‌ಗಳಲ್ಲಿ ಕಟ್ಟಿಕೊಂಡು ಬಂದು ಖಾಲಿ ನಿವೇಶನ ಹಾಗೂ ಜನಸಂದಣಿ ಇಲ್ಲದ ಸ್ಥಳಗಳಲ್ಲಿ ಸುರಿದು ಹೋಗುತ್ತಿದ್ದಾರೆ ಇನ್ನೂ ಕೆಲವು ನಿವಾಸಿಗಳು ಡಬ್ಬಗಳಲ್ಲಿ ಕಸ ತುಂಬಿ ಕೊಂಡು ಬಂದು ಸುರಿದು ಹೋಗುವು ದನ್ನು ನೋಡಿದ ನಿವೇಶನ ಮಾಲೀಕರ ನಡುವೆ ಮಾತಿನ ಚಕಮಕಿ ನಡೆದಿ ರುವ ಘಟನೆಗಳು ನಡೆಯುತ್ತಿವೆ' ಎಂದು ಮುಖಂಡರಾದ ಟಿ.ವರಪ್ರಸಾದ್, ವಿಜಯ್ ಕೀರ್ತಿ, ಶಂಕರ್ ಜೇಷ್ಠ ಆರೋಪಿಸುತ್ತಾರೆ.

ಉದಯವಾಹಿನಿ ಚಿತ್ರ

ಎಲ್ಲೆಡೆ ಕಸದ ಗುಡ್ಡೆ

ತಮ್ಮ ಏರಿಯಾಗಳನ್ನು ಸ್ವಚ್ಛವಾಗಿಟ್ಟುಕೊಳ್ಳಿ

ಅನಧಿಕೃತವಾಗಿ ಎಲ್ಲೆಂದರಲ್ಲಿ ಕಸ ಸುರಿಯುವುದನ್ನು ಮಾಮೂಲಿ ಮಾಡಿಕೊಂಡಿರುವವರನ್ನು ಗುರುತಿಸಿ ಅವರ ಮನವೊಲಿಸುವ ಕೆಲಸ ಮಾಡುತ್ತೇವೆ, ಮಿತಿ ಮೀರಿದರೆ ದಂಡ ವಸೂಲಿ ಮಾಡಲು ಹಿಂಜರಿಯುವುದಿಲ್ಲ, ಇನ್ನಾದರೂ ತಮ್ಮ ಏರಿಯಾಗಳನ್ನು ಸ್ವಚ್ಛವಾಗಿಟ್ಟುಕೊಳ್ಳಿ, ತಮ್ಮ ಮನೆಬಾಗಿಲಿಗೆ ಬರುವ ಕಸ ವಿಲೇವಾರಿ ವಾಹನಗಳಿಗೆ ಹಸಿ ಮತ್ತು ಒಣ ಕಸ ವಿಂಗಡಿಸಿ ನೀಡುವುದನ್ನೇ ಕಾಯಕ ಮಾಡಿಕೊಳ್ಳಲು ಮನವಿ. ಆರ್.ಮಂಜುನಾಥ್, ಆಯುಕ್ತ, ನಗರಸಭೆ, ಮಂಡ್ಯ'ಸ್ವಚ್ಛತೆ ಕಾಪಾಡಿ'-ಹರೀಶ್, ದೊಡ್ಡಬಾಣಸವಾಡಿ ನಿವಾಸಿ, ಕೆಎಚ್‌ಬಿ ಬಡಾವಣೆನಗರದಲ್ಲೆಡೆ ಬೇಕಾಬಿಟ್ಟಿ ಕಸ ಬಿಸಾಕು ವುದನ್ನು ನಿಲ್ಲಿಸಿ, ಕಸ ವಿಲೇವಾರಿ ವಾಹನಕ್ಕೆ ನೀಡಬೇಕು. ಇದರಿಂದ ಪೌರ ಕಾರ್ಮಿಕರಿಗೆ ಕಿರಿಕಿರಿ ತಪ್ಪಿಸಿದಂತಾಗುತ್ತದೆ

ನಗರ ವ್ಯಾಪ್ತಿಯಲ್ಲಿ 35 ವಾರ್ಡ್‌ಗಳಿದ್ದು, ಸುಖಾಸುಮ್ಮನೆ ಕಸ ಸುರಿಯುತ್ತಿ ರುವ ಒಟ್ಟು 120 ಸ್ಥಳಗಳನ್ನು ಗುರುತಿಸಿ ನಗರಸಭೆ ವತಿಯಿಂದಲೇ ಜಾಗೃತಿ ಮತ್ತು ಎಚ್ಚರಿಕೆ ಫಲಕಗಳನ್ನು ಹಾಕಿಸಿದ್ದೇವೆ. ಸಿಬ್ಬಂದಿಯಿಂದಲೂ ಕಸ ತಂದು ಸುರಿಯುತ್ತಿರುವವರಿಗೆ ಮನವರಿಕೆ ಮಾಡಿಕೊ ಡುವ ಕೆಲಸ ಮಾಡುತ್ತಿದ್ದೇವೆ, ಇದರ ಫಲವಾಗಿಯೇ ಇಲ್ಲಿವರೆಗೆ 70 ರಿಂದ 75 ಕಸ ಸುರಿಯುತ್ತಿದ್ದ ಸ್ಥಳಗಳನ್ನ ನಿಯಂತ್ರಣಕ್ಕೆ ತರುವಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿದ್ದೇವೆ. ಇನ್ನುಳಿದ 50 ಸ್ಥಳಗಳಲ್ಲಿಯೂ ಇದೇ ರೀತಿ ಕೆಲಸ ಮಾಡಿ ಶೂನ್ಯಕ್ಕೆ ತರುವ ಕೆಲಸ ಮಾಡುತ್ತೇವೆ -ಆರ್.ಮಂಜುನಾಥ್, ನಗರಸಭೆ ಆಯುಕ್ತ

ಶ್ರೀ ವೀರಬ್ರಹ್ಮೇಂದ್ರಸ್ವಾಮಿ ಆರಾಧನಾ ಮಹೋತ್ಸವ

• ಉದಯವಾಹಿನಿ, ಶಿಡ್ಲಘಟ್ಟ

ನಗರದ ಒಂದನೇ ನಗರ್ತಪೇಟೆಯ ಶ್ರೀ ಕಾಳಿಕಾಂಬ ಕಮ್ಮಕೇಶ್ವರ ದೇವಾಲಯದಲ್ಲಿ ಕಾಲಜ್ಞಾನಿ ಶ್ರೀವೀರಬ್ರಹ್ಮೇಂದ್ರ ಸ್ವಾಮಿಯವರ ಆರಾಧನಾ ಮಹೋತ್ಸವವನ್ನು ಶ್ರದ್ಧಾ ಭಕ್ತಿಯಿಂದ ಆಚರಣೆ ಮಾಡಲಾಯಿತು. ಕುಲದೇವತೆ ಕಾಳಿಕಾಂಬ ದೇವರಿಗೆ ಹೂಗಳಿಂದ ಅಲಂಕಾರ ಮಾಡಿ, ವಿಶೇಷ ಪೂಜೆ ಸಲ್ಲಿಸಲಾಯಿತು.

ವೀರ ಬ್ರಹ್ಮೇಂದ್ರ ಸ್ವಾಮಿ ಅವರು ತಾಳೆಗರಿಗಳ ಮೇಲೆ ಕಾಲಜ್ಞಾನಂ ಎಂಬ ಭವಿಷ್ಯವಾಣಿಯ ಸಂಗ್ರಹಗಳನ್ನು ಬರೆದರು. ಅವರ ಬಹುಪಾಲು ಭವಿಷ್ಯವಾಣಿಗಳು ನಿಜವಾಗಿವೆ ಮತ್ತು ಇನ್ನೂ ಅನೇಕವು ಸಂಭವಿಸಬೇಕಾಗಿದೆ. ಪಶ್ಚಿಮದಲ್ಲಿ ಇಂಡಿಯನ್ ನಾಸ್ಟ್ರಡಾಮಸ್ ಎಂದೂ ಕರೆಯಲ್ಪಡುವ ವೀರ ಬ್ರಹ್ಮೇಂದ್ರ ಸ್ವಾಮಿ ಯವರು ಕಾರ್ತಿಕ ಶುದ್ಧ ದ್ವಾದಶಿಯಂದು ಕಡಪ ಜಿಲ್ಲೆಯ ಬ್ರಹ್ಮಂಗರಿಮಠದಲ್ಲಿ ಜೀವಸಮಾಧಿಯನ್ನು ಪಡೆದರು.

ಈ ಸಂದರ್ಭದಲ್ಲಿ ಶ್ರೀ ವಿಶ್ವಕರ್ಮ ಸಂಘದ ತಾ.ಅಧ್ಯಕ್ಷ ಅಮರನಾರಾಯಣಚಾರಿ, ಗೌರವಾಧ್ಯಕ್ಷ ಜನಾರ್ಧನ್ ಮೂರ್ತಿ, ಶ್ರೀ ಕಾಳಿಕಾಂಬ ದೇವಾಲಯ ಸಮಿತಿಯ ಅಧ್ಯಕ್ಷ ಮುನಿ ರತ್ನಚಾರಿ, ಖಜಾಂಚಿ ಕೃಷ್ಣಚಾರಿ, ಕಾರ್ಯದರ್ಶಿ ಜಗದೀಶ್, ಶಿಕ್ಷಕರ ಸಂಘದ ಖಜಾಂಚಿ ಸುಂದರಾಚಾರಿ, ದಿಬ್ಬೂರಹಳ್ಳಿಯ ಶಿವಶಂಕರಾಚಾರಿ, ಮಳಮಾಚನಹಳ್ಳಿ ವೆಂಕಟಚಾರಿ, ಕಾಸಪ ಮಾಜಿ ಅಧ್ಯಕ್ಷರಾದ ಕೆ ಎಂ ವಿನಾಯಕ, ಕರ್ಣ, ಮತ್ತು ವಿಶ್ವಕರ್ಮ ಕುಲ ಭಾಂದವರು, ಭಕ್ತಾದಿಗಳು ಪೂಜೆಯಲ್ಲಿ ಭಾಗವಹಿಸಿದ್ದರು.

ಉದಯವಾಹಿನಿ ಚಿತ್ರ

ಶ್ರದ್ಧಾ ಭಕ್ತಿಯಿಂದ ಆಚರಣೆ

15 ದಿನಗಳಲ್ಲಿ 12 ಸಾವಿರ ವಾಹನಗಳಿಗೆ ದಂಡ

• ಉದಯವಾಹಿನಿ, ರಾಮನಗರ

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇಯಲ್ಲಿ ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಸದ್ದಿಲ್ಲದೆ ಎಐ ಕೆಮರಾಗಳು ಕಣ್ಣಾಗ್ಗವಲು ಇರಿಸಲು ಆರಂಭಿಸಿವೆ. ಕಳೆದ 15 ದಿನಗಳಿಂದಲೇ ಎಎನ್‌ಆರ್‌ಪಿ ಕ್ಯಾಮೆರಾ ಮೂಲಕ ವಾಹನಗಳಿಗೆ ದಂಡ ವಿಧಿಸಲು ಆರಂಭಿಸಿದ್ದು, ಇದುವರೆಗೆ ಎಕ್ಸ್‌ಪ್ರೆಸ್ ಹೈವೇಯಲ್ಲಿ 12,192 ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸಿರುವುದಾಗಿ ಪೊಲೀಸ್ ಇಲಾಖೆ ತಿಳಿಸಿದೆ. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇಯಲ್ಲಿ ಎಐ ತಂತ್ರಜ್ಞಾನ ಹೊಂದಿರುವ ಎಎನ್‌ಆರ್‌ಪಿ ಕ್ಯಾಮೆರಾಗಳನ್ನು ಅಳವಡಿಸಿದ್ದು, ಇದರೊಂದಿಗೆ ಸ್ಪೀಡ್ ರಾಡಾರ್‌ಗಳನ್ನು ಅಳವಡಿಸಲಾಗಿದೆ. ಕ್ಯಾಮೆರಾ ಅಳವಡಿಸಿರುವ ಕಾಮಗಾರಿಯನ್ನು ಮೂರು ದಿನಗಳ ಹಿಂದೆ ರಸ್ತೆ ಸುರಕ್ಷಾ ವಿಭಾಗದ ಎಡಿಜಿಪಿ ಆಲೋಕ್ ಕುಮಾರ್ ಭೇಟಿ ಮಾಡಿ ಪರಿಶೀಲಿಸಿದ್ದರು. 15 ದಿನಗಳ ಹಿಂದೆಯೇ ಕ್ಯಾಮರಾಗಳು ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳ ಮೇಲೆ ನಿಗಾ ಇರಿಸಲು ಆರಂಭಿಸಿವೆ. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇಯಲ್ಲಿ ನಿಯಮ ಉಲ್ಲಂಘಿಸಿರುವ 12,192 ವಾಹನ ಮಾಲಕರ ವಿರುದ್ಧ ಚಿತ್ರ ಸಮೇತ ನೋಟಿಸ್ ಸಿದ್ಧವಾಗಿದೆ. ಗಣಕೀಕೃತ ಇ-ಚಲನ್ ಅನ್ನು ಎಡಿಜಿಪಿ ಆಲೋಕ್‌ಕುಮಾರ್ ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಉದಯವಾಹಿನಿ ಚಿತ್ರ

ಸತಾಯಿಸುವ ಅಧಿಕಾರಿಗಳು: ಲೋಕಾಯುಕ್ತ ದೂರು

• ಉದಯವಾಹಿನಿ, ಮಡಿಕೇರಿ

ಜಾತಿ, ಆದಾಯ ಸೇರಿದಂತೆ ವಿವಿಧ ಪ್ರಮಾಣ ಪತ್ರ ಪಡೆಯಲು ಹರಸಾಹಸ ಪಡಬೇಕು, 4 ದಶಕಗಳಿಂದ ಓಡಾಡಿದರೂ ಸಹ ಖಾತೆ ಬದಲಾವಣೆ ಆಗಿಲ್ಲ... ಹೀಗೆ ಅನೇಕ ಸಮಸ್ಯೆಗಳನ್ನು ಸಾರ್ವಜನಿಕರು ಇಲ್ಲಿ ಶುಕ್ರವಾರ ಮಡಿಕೇರಿ ಲೋಕಾಯುಕ್ತ ಡಿವೈಎಸ್‌ಪಿ ಪವನ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕರ ಅಹವಾಲು ಸ್ವೀಕಾರ ಹಾಗೂ ಕುಂದು ಕೊರತೆ ಸಭೆಯಲ್ಲಿ ಮಂಡಿಸಿದರು.

ನಗರದ ತಹಶೀಲ್ದಾರ್ ಕಚೇರಿಯಲ್ಲಿ ನಡೆದ ಈ ಸಭೆಯಲ್ಲಿ ಸಾರ್ವಜನಿಕರು ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳು ತಮ್ಮನ್ನು ಸತಾಯಿಸುತ್ತಿರುವ ದೂರುಗಳನ್ನೇ ಪ್ರಧಾನವಾಗಿ ನೀಡಿದರು. 'ಜಾತಿ, ಆದಾಯ ಸೇರಿದಂತೆ ವಿವಿಧ ಪ್ರಮಾಣ ಪತ್ರ ಪಡೆಯಲು ಹರಸಾಹಸ ಪಡಬೇಕಿದೆ' ಎಂದು ಸಾರ್ವಜನಿಕರೊಬ್ಬರು ದೂರಿದರು. ಸಕಾಲದಲ್ಲಿ ಇಷ್ಟು ದಿನದೊಳಗೆ ಪ್ರಮಾಣ ಪತ್ರ ನೀಡಬೇಕು ಎಂಬ ಆದೇಶ ಇದ್ದರೂ ಸಹ, ಸತಾಯಿಸುತ್ತಿದ್ದಾರೆ. ಜಾತಿ, ಆದಾಯ ಮತ್ತಿತರ ಪ್ರಮಾಣ ಪತ್ರ ಪಡೆಯಲು ಅಗತ್ಯ ದಾಖಲಾತಿಯ ಮಾಹಿತಿ ಫಲಕವನ್ನು ಅಳವಡಿಸಿದ್ದಲ್ಲಿ ಒದಗಿಸಲಾಗುವುದು. ಆದರೆ, ಸತಾಯಿಸುವುದು ಏಕೆ' ಎಂದು ಸಾರ್ವಜನಿಕರೊಬ್ಬರು ಅವಲತ್ತುಕೊಂಡರು. ಈ ಬಗ್ಗೆ ಪ್ರತಿಕ್ರಿಯಿಸಿದ ಡಿವೈಎಸ್‌ಪಿ ಪವನ್ ಕುಮಾರ್, 'ಯಾರು ಸತಾಯಿಸುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿ ನೀಡಿದ್ದಲ್ಲಿ ಲೋಕಾಯುಕ್ತ ನಿಯಮನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು. 'ಇದೊಂದು ಗಂಭೀರ ವಿಚಾರವಾಗಿದ್ದು, ಯಾರನ್ನೂ ಸತಾಯಿಸದೆ ಗೌರವದಿಂದ ಕಾಣಬೇಕು. ಪ್ರಮಾಣ ಪತ್ರ ಪಡೆಯಲು ಅಗತ್ಯ ದಾಖಲೆಗಳನ್ನು ಸಲ್ಲಿಸದೇ ಇದ್ದಲ್ಲಿ, ಹಿಂಬರಹವನ್ನಾದರೂ ನೀಡಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಉದಯವಾಹಿನಿ ಚಿತ್ರ

ಕಾಲುವೆ ಒತ್ತುವರಿ ತೆರವಿಗೆ ಇಚ್ಛಾಶಕ್ತಿ ಕೊರತೆ

• ಉದಯವಾಹಿನಿ, ತುಮಕೂರು

ನಗರದಲ್ಲಿರುವ ರಾಜಕಾಲುವೆಗಳು ಬಹುತೇಕ ಕಡೆಗಳಲ್ಲಿ ಒತ್ತುವರಿಯಾಗಿದ್ದು, ತೆರವುಗೊಳಿಸಲು ಅಧಿಕಾರಿಗಳು ಇಚ್ಛಾಶಕ್ತಿ ತೋರುತ್ತಿಲ್ಲ. ಕೇವಲ ಸರ್ವೆ ಮಾಡಿ, ವರದಿ ಸಿದ್ಧಪಡಿಸಲು ಮಾತ್ರ ಸೀಮಿತರಾಗಿದ್ದಾರೆ' ಎಂಬುವುದು ಸಾರ್ವಜನಿಕರ ಆರೋಪ.ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 42 ರಾಜ ಕಾಲುವೆಗಳಿದ್ದು, 7 ಕಿ.ಮೀ ಉದ್ದ ಇದೆ. ಎಲ್ಲಾ ಕಾಲುವೆಗಳು ಒತ್ತುವರಿಯಾಗಿದ್ದು, ಇದರಲ್ಲಿ ಈವರೆಗೆ 13 ಕಾಲುವೆಗಳು ಒತ್ತುವರಿ ತೆರವುಗೊಳಿಸಲಾಗಿದೆ. ಇನ್ನೂ 29 ಕಾಲುವೆಗಳ ಒತ್ತುವರಿ ತೆರವು ಮಾಡಿಲ್ಲ.

ಮಳೆ ಬಂದಾಗ ಪ್ರತಿ ಬಾರಿಯೂ ನೀರು ಸಂಪರ್ಕವಾಗಿ ಹರಿದು ಹೋಗದೆ ರಸ್ತೆ ಮೇಲೆ ನಿಲ್ಲುತ್ತದೆ. ಕೆಲವು ಕಡೆಗಳಲ್ಲಿ ಮನೆ, ಅಂಗಡಿ ಮಳಿಗೆಗಳಿಗೆ ನುಗ್ಗುತ್ತದೆ. ಇದರಿಂದ ನಗರದ ಸಾರ್ವಜನಿಕರು ಸಂಕಷ್ಟ ಅನುಭವಿಸುತ್ತಿದ್ದಾರೆ.

ಒಂದು ಸಣ್ಣ ಮಳೆಯಾದರೂ ನಗರದ ಅಂತರಸನಹಳ್ಳಿ ಕೆಳ ಸೇತುವೆ ಜಲಾವೃತವಾಗುತ್ತದೆ. ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ರಸ್ತೆ ದಾಟುತ್ತಾರೆ. ಅಂತರಸನಹಳ್ಳಿ ಭಾಗದಲ್ಲಿರುವ 3 ರಾಜಕಾಲುವೆಗಳು ಒತ್ತುವರಿ ಯಾಗಿವೆ. ರಾಜ ಕಾಲುವೆ ಜಾಗದಲ್ಲಿ ಕಟ್ಟಡಗಳು ತಲೆ ಎತ್ತಿವೆ. ಇದರಿಂದ ನೀರು ಸರಾಗವಾಗಿ ಹರಿದು ಹೋಗಲು ಸಾಧ್ಯವಾಗದೆ ತೊಂದರೆಯಾಗುತ್ತಿದೆ. ಗೆದ್ದಲಹಳ್ಳಿ ಭಾಗದ 10 ಕಾಲುವೆಗಳು ಸಂಪೂರ್ಣವಾಗಿ ಒತ್ತುವರಿಯಾಗಿವೆ.

ಶೆಟ್ಟಿಹಳ್ಳಿ, ಬಡ್ಡಿಹಳ್ಳಿ ಒಳಗೊಂಡಂತೆ ಕೆಲವೇ ಕಡೆಗಳಲ್ಲಿ ಮಾತ್ರ ಒತ್ತುವರಿ ತೆರವುಗೊಳಿಸಲಾಗಿದೆ. ಉಳಿದೆಡೆ ಒತ್ತುವರಿ ರಾಜಾರೋಷವಾಗಿ ಮುಂದುವರಿದಿದೆ. ವಿವಿಧೆಡೆ ಪ್ರಭಾವಿಗಳೇ ಒತ್ತುವರಿ ಮಾಡಿಕೊಂಡು ಬಡಾವಣೆ, ಕಾಂಪೌಂಡ್, ಶೆಡ್, ಕಟ್ಟಡ ನಿರ್ಮಿಸಿಕೊಂಡಿದ್ದಾರೆ. ಅವರಿಗೆ ಕಟ್ಟು ನಿಟ್ಟಿನ ಸೂಚನೆ ನೀಡಿ ಒತ್ತುವರಿ ತೆರವುಗೊಳಿಸಲು ಅಧಿಕಾರಿಗಳು ಮುಂದಾಗುತ್ತಿಲ್ಲ. ಒತ್ತಡ, ಪ್ರಭಾವದಿಂದಾಗಿ ಒತ್ತುವರಿ ನೋಡಿಕೊಂಡು ಸುಮ್ಮನಿದ್ದಾರೆ.

ಉದಯವಾಹಿನಿ ಚಿತ್ರ

ನಗರದ ಜನರು ಆಕ್ರೋಶ

ಇಲ್ಲದ ಉಸಾಬರಿ ನಮಗೇಕೆ' ಎಂದು ತಮ್ಮ ಕೆಲಸದಿಂದ ಜಾರಿಕೊಳ್ಳುತ್ತಿದ್ದಾರೆ. ಕನಿಷ್ಠ ಒಂದು ನೋಟಿಸ್ ಜಾರಿ ಮಾಡಲು ಸಹ ಆಗುತ್ತಿಲ್ಲ. ಪಾಲಿಕೆಯ ಆಯುಕ್ತರು ಸಭೆ ನಡೆಸಿ, ಸಲಹೆ ಸೂಚನೆ ನೀಡಲು ಮಾತ್ರ ಇಲ್ಲಿಗೆ ಬಂದಂತೆ ಕಾಣುತ್ತಿದೆ. ಒತ್ತುವರಿ ತೆರವು ವಿಷಯದಲ್ಲಿ ಯಾವುದೇ ಕ್ರಮಕೈಗೊಳ್ಳುತ್ತಿಲ್ಲ ಎಂದು ನಗರದ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಕೇರಳದಲ್ಲಿ 2 ವಾರದಲ್ಲಿ 2 ಲಕ್ಷ ಮಂದಿಗೆ ಸಾಂಕ್ರಾಮಿಕ ರೋಗ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕಾಸರಗೋಡು

ಕೇರಳ ರಾಜ್ಯದಲ್ಲಿ ವಿವಿಧ ಸಾಂಕ್ರಾಮಿಕ ರೋಗ ವ್ಯಾಪಕವಾಗಿ ಹರಡ ತೊಡಗಿದ್ದು, ಇದರ ಪರಿಣಾಮವಾಗಿ ಕಳೆದ ಎರಡು ವಾರದಲ್ಲಿ ಎರಡು ಲಕ್ಷದಷ್ಟು ಮಂದಿಗೆ ವಿವಿಧ ಸಾಂಕ್ರಾಮಿಕ ರೋಗ ಹರಡಿದೆ.

ಈ ಪೈಕಿ 10 ಮಂದಿ ಸಾವಿಗೀಡಾಗಿದ್ದಾರೆ. ಕಳೆದ ಐದು ತಿಂಗಳಲ್ಲಿ ಸಾಂಕ್ರಾಮಿಕ ರೋಗದಿಂದ 91 ಮಂದಿ ಸಾವಿಗೀಡಾಗಿದ್ದಾರೆ.

ಇದಲ್ಲದೆ ಅಮೀಬಿಕ್ ಮೆಂಜಾಯನ್‌ಸೆಫಾಲೈಟೀಸ್ ಎನ್ನುವ ಮಿದುಳಿಗೆ ತಗಲುವ ಅತ್ಯಪೂರ್ವ ರೋಗವೂ ರಾಜ್ಯದಲ್ಲಿ ಕಾಣಿಸಿಕೊಂಡಿದೆ. ಇದಲ್ಲದೆ ವೆಸ್ಟ್‌ನೈಲ್ ಜ್ವರವೂ ಹರಡುತ್ತಿದೆ. ತಾಪಮಾನ ಏರಿಕೆಯ ಜೊತೆಗೆ ಪದೇ ಪದೆ ಸುರಿಯುತ್ತಿರುವ ಬೇಸಗೆ ಮಳೆ ಮತ್ತು ತ್ಯಾಜ್ಯ ಸಮಸ್ಯೆಗಳೇ ಸಾಂಕ್ರಾಮಿಕ ರೋಗ ವ್ಯಾಪಿಸಲು ಕಾರಣವಾಗಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಹೇಳುತ್ತಿದ್ದಾರೆ. ಮಲಪ್ಪುರ ಮತ್ತು ಕಲ್ಲಿಕೋಟೆ ಜಿಲ್ಲೆಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸಾಂಕ್ರಾಮಿಕ ರೋಗ ಕಾಣಿಸಿಕೊಂಡಿದೆ.

ಡೆಂಗ್ಯೂ, ಹಳದಿ ಕಾಮಾಲೆ, ಇಲಿ ಜ್ವರ, ಎಚ್1ಎನ್1, ಸಿಡುಬು ರೋಗ, ಮಲೇರಿಯ, ಮಂಗನ ಕಾಯಿಲೆ, ಜಲ ಸಂಬಂಧಿತ ರೋಗಗಳು ಇತ್ಯಾದಿ ರಾಜ್ಯದಲ್ಲಿ ಹರಡುತ್ತಿದೆ. ಹೆಚ್ಚುತ್ತಿರುವ ಜನಸಾಂದ್ರತೆ, ಜೀವನ ಶೈಲಿ, ಹವಾಮಾನ ವೈಪರೀತ್ಯ, ಭೌಗೋಳಿಕ ಭಿನ್ನತೆ ಇತ್ಯಾದಿಗಳೇ ಸಾಂಕ್ರಾಮಿಕ ರೋಗ ಹರಡಲು ಕಾರಣವಾಗಿದೆ ಎಂದು ಆರೋಗ್ಯ ಅಧಿಕಾರಿಗಳು ಹೇಳುತ್ತಿದ್ದಾರೆ.

10 ಮಂದಿ ಸಾವು

ರಾಜ್ಯದಲ್ಲಿ ಕಳೆದ ಎರಡು ವಾರದಲ್ಲಿ ಒಟ್ಟು 78,718 ಮಂದಿಯಲ್ಲಿ ವಿವಿಧ ರೀತಿಯ ಸಾಂಕ್ರಾಮಿಕ ರೋಗ, 971 ಮಂದಿಯಲ್ಲಿ ಸಿಡುಬು, 328 ಮಂದಿಯಲ್ಲಿ ಡೆಂಗ್ಯೂ, 20 ಮಂದಿಯಲ್ಲಿ ಮಲೇರಿಯ, 70 ಮಂದಿಯಲ್ಲಿ ಇಲಿ ಜ್ವರ

ಅಂತರಾಳದಿಂದ... EDITORIAL

ಕಾನೂನು ಪ್ರಕ್ರಿಯೆ ಗೌರವಿಸಿ; ಜನರ ಮೂಲಭೂತ ಹಕ್ಕುಗಳನ್ನು ರಕ್ಷಿಸಿ

ಉದಯವಾಹಿನಿ ಚಿತ್ರ

ನ್ಯೂಸ್ ಕ್ಲಿಕ್ ಸುದ್ದಿತಾಣದ ಸಂಸ್ಥಾಪಕ ಹಾಗೂ ಪ್ರಧಾನ ಸಂಪಾದಕ ಪ್ರಬೀರ್ ಪುರಕಾಯಪ್ಪ, ಮಾನವ ಹಕ್ಕುಗಳ ಕಾರ್ಯಕರ್ತ ಗೌತಮ್ ನವಲಖಾ ಅವರನ್ನು ಬಂಧನದಿಂದ ಬಿಡುಗಡೆಗೊಳಿಸುವಂತೆ ಸುಪ್ರೀಂ ಕೋರ್ಟ್ ಎರಡು ಪ್ರತ್ಯೇಕ ಆದೇಶಗಳ ಮೂಲಕ ಸೂಚನೆ ನೀಡಿರುವುದು ನ್ಯಾಯಕ್ಕೆ ಹಾಗೂ ನ್ಯಾಯಸಮ್ಮತ ಪ್ರಕ್ರಿಯೆಗೆ ಸಂದ ಜಯ. ಈ ಎರಡು ಆದೇಶಗಳು ಪೊಲೀಸರು ಮತ್ತು ಸರ್ಕಾರದ ನಡೆಗೆ ನ್ಯಾಯಾಲಯ ವ್ಯಕ್ತಪಡಿಸಿರುವ ಗಂಭೀರ ಸ್ವರೂಪದ ಅಸಮ್ಮತಿಯೂ ಹೌದು. ಪುರಕಾಯಸ್ಥ ಅವರ ಬಂಧನವು ತಪ್ಪು. ಕಾನೂನುಬಾಹಿರ ಎಂದು ಕೋರ್ಟ್ ಹೇಳಿದೆ. ಬಂಧನದ ಪ್ರಕ್ರಿಯೆಯು ಕಾನೂನಿಗೆ ಅನುಗುಣವಾಗಿ ಇರಬೇಕು. ವ್ಯಕ್ತಿಯ ಹಕ್ಕುಗಳನ್ನು ರಕ್ಷಿಸಬೇಕು ಎಂಬ ಅಂಶವನ್ನು ಕೋರ್ಟ್ ಒತ್ತಿಹೇಳಿದೆ. ಈ ಎರಡೂ ಪ್ರಕರಣಗಳು, ಭಿನ್ನ ದನಿಗಳನ್ನು ಹತ್ತಿಕ್ಕುವ, ಸರ್ಕಾರದ ಟೀಕಾಕಾರರ ಬಾಯಿ ಮುಚ್ಚಿಸುವ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ಉದ್ದೇಶಕ್ಕೆ ಭಯೋತ್ಪಾದನಾ ವಿರೋಧಿ ಕಾನೂನುಗಳನ್ನು ದುರ್ಬಳಕೆ ಮಾಡಿಕೊಳ್ಳುವುದರ ಬಗ್ಗೆ ಕಳವಳ ಮೂಡಲು ಕಾರಣವಾಗಿದ್ದವು. ವಿದೇಶಗಳಿಂದ ಹಣದ ನೆರವು ಪಡೆದು ರಾಷ್ಟ್ರ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದ ಆರೋಪದ ಅಡಿಯಲ್ಲಿ ಪುರಕಾಯಸ್ಥ ಅವರನ್ನು 2023ರಲ್ಲಿ ಬಂಧಿಸಲಾಗಿತ್ತು.

ನವಲಖಾ ಅವರನ್ನು 2020ರಲ್ಲಿ ಭೀಮಾ ಕೋರೆಗಾಂವ್ ಪ್ರಕರಣದಲ್ಲಿ ಬಂಧಿಸಲಾಗಿತ್ತು. ಯಾವುದೇ ಸಾಕ್ಷ್ಯ ಇಲ್ಲದಿದ್ದರೂ, ರಾಜಕೀಯ ಕಾರಣಗಳಿಗಾಗಿ, ಹಗೆ ತೀರಿಸಿಕೊಳ್ಳುವ ಉದ್ದೇಶದಿಂದ ಈ ಇಬ್ಬರ ಬಂಧನ ಆಗಿದೆ. ಎಂಬ ಟೀಕೆಗಳು ವ್ಯಕ್ತವಾಗಿದ್ದವು.

ಪುರಕಾಯಸ್ಥ ಅವರನ್ನು ಬಂಧಿಸಿದ್ದಕ್ಕೆ ಕಾರಣ ಏನು ಎಂಬುದನ್ನು ಲಿಖಿತ ರೂಪದಲ್ಲಿ ತಿಳಿಸದೇ ಇದ್ದುದಕ್ಕಾಗಿ, ಅವರ ಬಂಧನ ಹಾಗೂ ಅವರನ್ನು ಉದ್ದೇಶಿಸಿ ಹೊರಡಿಸಿದ್ದ ರಿಮಾಂಡ್ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ. ಬಂಧನಕ್ಕೆ ಕಾರಣವನ್ನು ಲಿಖಿತ ರೂಪದಲ್ಲಿ ನೀಡದೇ ಇರುವುದು ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದಂತೆ ಆಗುತ್ತದೆ ಎಂದು ಹೇಳಿದೆ. ಪುರಕಾಯಸ್ಥ ಅವರ ಬಂಧನ ಪ್ರಕ್ರಿಯೆಯನ್ನು 'ಗುಟ್ಟುಗುಟ್ಟಾಗಿ ನಡೆಸಲಾಯಿತು. ಇದು ಕಾನೂನಿನ ಪ್ರಕ್ರಿಯೆಯನ್ನು ಸರಿಯಾಗಿ ಪಾಲಿಸದೆ ನುಣುಚಿ ಕೊಳ್ಳಲಿಕ್ಕೆ ಮುಚ್ಚುಮರೆಯಲ್ಲಿ ನಡೆಸಿದ ಯತ್ನ' ಎಂದು ಕೋರ್ಟ್ ಕಟುವಾದ ಮಾತು ಹೇಳಿದೆ. ಹಿಂದಿನ ತೀರ್ಪೊಂದನ್ನು ವಿಸ್ತರಿಸಿರುವ ಕೋರ್ಟ್, ಯಾವುದೇ ಕಾನೂನಿನ ಅಡಿಯಲ್ಲಿ ವ್ಯಕ್ತಿಯನ್ನು ಬಂಧಿಸುವಾಗ, ಬಂಧನಕ್ಕೆ ಕಾರಣ ಏನು ಎಂಬುದನ್ನು ಅದಷ್ಟು ಬೇಗ ತಿಳಿದುಕೊಳ್ಳುವ ಹಕ್ಕು ಆ ವ್ಯಕ್ತಿಗೆ ಇರುತ್ತದೆ ಎಂದು ಹೇಳಿದೆ. ಈ ವಿಚಾರದಲ್ಲಿ ವಿನಾಯಿತಿ ಇಲ್ಲ ಎಂದು ಸ್ಪಷ್ಟಪಡಿಸಿದೆ. ಕಾನೂನಿನ ಪ್ರಕ್ರಿಯೆಯನ್ನು ಸೂಕ್ತ ರೀತಿಯಲ್ಲಿ ಪಾಲಿಸಬೇಕಿರುವುದು ಕಾನೂನಿಗೆ ಅನುಗುಣವಾದ ಆಡಳಿತ ಎಂಬ ತತ್ವದ ಹೃದಯವಿದ್ದಂತೆ. ಈ ತತ್ವದ ಪಾಲನೆ ಆದಾಗ ಮಾತ್ರ ಸಂವಿಧಾನಕ್ಕೆ ಬೆಲೆ. ಈ ಪ್ರಕ್ರಿಯೆಯನ್ನು ಉಲ್ಲಂಘಿಸುವ ಕೆಲಸ ಆಗಬಾರದು. ಬಂಧನಕ್ಕೂ ಮೊದಲು ತನಿಖೆ ನಡೆದಿರಬೇಕು. ಬಂಧನಕ್ಕೆ ಕಾರಣ ನೀಡುವಾಗ ಅದರಲ್ಲಿ ತನಿಖೆಯ ವಿವರಗಳನ್ನೂ ಉಲ್ಲೇಖಿಸಬೇಕು. ಈ ಪ್ರಕ್ರಿಯೆಯನ್ನು ಪಾಲಿಸದ ಯಾವುದೇ ಬಂಧನವು ಅಸಿಂಧುವಾಗುತ್ತದೆ.

ನವಲಖಾ ಅವರಿಗೆ ಜಾಮೀನು ಮಂಜೂರು ಮಾಡುವಾಗ ಕೋರ್ಟ್. ಇನ್ನೊಂದು ವೈಫಲ್ಯದ ಬಗ್ಗೆ ಬೊಟ್ಟುಮಾಡಿದೆ. ನವಲಖಾ ಅವರು ನಾಲ್ಕು ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಜೈಲಿನಲ್ಲಿ ಇದ್ದಾರೆ. ಅವರ ವಿಚಾರಣೆಯು ಪೂರ್ಣಗೊಳ್ಳುವುದಕ್ಕೆ ಬಹಳ ಕಾಲ ಬೇಕಾಗುತ್ತದೆ ಎಂದು ಕೋರ್ಟ್ ಹೇಳಿದೆ. ನವಲಖಾ ಅವರಿಗೆ ಸಂಬಂಧಿಸಿದ ಪ್ರಕರಣದಲ್ಲಿ 370 ಸಾಕ್ಷಿಗಳು ಇದ್ದಾರೆ. ನವಲಖಾ ಅವರ ಜೊತೆ ಆರೋಪಿಗಳಾಗಿದ್ದ ಇತರ ಆರು ಮಂದಿಯನ್ನು ಈಗಾಗಲೇ ಜಾಮೀನಿನ ಆಡಿ ಬಿಡುಗಡೆ ಮಾಡಲಾಗಿದೆ. ಅಲ್ಲದೆ, ನವಲಖಾ ಅವರ ವಿರುದ್ಧದ ದೋಷಾರೋಪಗಳನ್ನು ಇನ್ನಷ್ಟೇ ನಿಗದಿ ಮಾಡಬೇಕಿದೆ. ಪುರಕಾಯಸ್ಥ ಅವರು ಎಂಟು ತಿಂಗಳು ಜೈಲಿನಲ್ಲಿ ಇದ್ದರು. ನವಲಖಾ ಅವರು ನಾಲ್ಕು ವರ್ಷ ತಮ್ಮ ಸ್ವಾತಂತ್ರ್ಯ ಕಳೆದುಕೊಂಡಿದ್ದರು. ಅವರಿಬ್ಬರ ಪ್ರಕರಣದಲ್ಲಿ ಕಾನೂನಿಗೆ ಅನುಗುಣವಾದ ಆಡಳಿತ ಎಂಬ ತತ್ವವನ್ನು ಹಾಗೂ ನ್ಯಾಯ ವ್ಯವಸ್ಥೆಯ ಸೂತ್ರಗಳನ್ನು ಹೇಗೆ ಉಲ್ಲಂಘಿಸಲಾಯಿತು ಎಂಬುದನ್ನು ಕೋರ್ಟ್‌ನ ಆದೇಶಗಳು ಹೇಳುತ್ತಿವೆ. ಪ್ರಜೆಗಳ ಹಕ್ಕುಗಳನ್ನು ಗೌರವಿಸದ ಕಾನೂನು ಜಾರಿ ವ್ಯವಸ್ಥೆಯು ಸರ್ವಾಧಿಕಾರಿ ವ್ಯವಸ್ಥೆಯಂತೆ ಕಾಣುತ್ತದೆ.

ಮಹಾಭಾರತ
ದ್ರೋಣಪರ್ವ

• ಹಿಂದಿನ ಸಂಚಿಕೆಯಿಂದ

ಮಿಂಚಿನಂತೆ ಹೊಂಚಿದ ಅಭಿಮನ್ಯುವಿನ ರಥವು ಪದ್ಮವ್ಯೂಹದೆಡೆಗೆ ಸಿಡಿಲಿನಂತೆ ನಡೆಯಿತು. ಧ್ವಜವೊಂದು ಬೇರೆಯಾಗಿರದಿದ್ದರೆ, ಅರ್ಜುನನೇ ಬಂದಿರುವನೋ ಎನಿಸುವಂತಿತ್ತು. ಎರಡು ಸೈನ್ಯಗಳೂ ಮೇಳವಿಸಿದವು. ದ್ರೋಣನ ಕಣ್ಣೆದುರಿಗೇ ಮಾನವವ್ಯಾಪ್ತಿಗೆ ಮೀರಿದ ಪದ್ಮವ್ಯೂಹ ಛೇದನೆಯನ್ನು ಅಭಿಮನ್ಯುವು ಸಾಧಿಸಿ, ಒಡನೆಯೇ ವ್ಯೂಹವನ್ನು ಪ್ರವೇಶಿಸಿಬಿಟ್ಟನು. ಕೌರವ ಸೇನೆಯು ಭಯದಿಂದ ತತ್ತರಿಸಿತು. ಅರ್ಜುನನ ಮಗ, ಹದಿನಾರು ವರ್ಷದ ಪೋರ, ವ್ಯೂಹವನ್ನೊಡೆದು ದ್ರೋಣನ ಲೆಕ್ಕಾಚಾರಗಳನ್ನೆಲ್ಲಾ ಬುಡಮೇಲು ಮಾಡಿಬಿಟ್ಟಿದ್ದನು. ಅಕಸ್ಮಾತ್ ಛೇದಿಸಲ್ಪಟ್ಟರೂ, ತಕ್ಷಣವೇ ಪುನಃ ಕೂಡಿಕೊಳ್ಳುವಂಥದು ಪದ್ಮವ್ಯೂಹ. ಅಭಿಮನ್ಯು ಒಳಗೆ ಹೋದ ಒಡನೆಯೇ ಅನೇಕ ವೀರರನ್ನು ಒಟ್ಟಿಗೇ ಎದುರಿಸಬೇಕಾಯಿತು. ಆದರೇನು ಅವನ ಬಾಣ ವರ್ಷಗಳಿಂದ ಸಾಯುವ ಸೈನಿಕರ ರಾಶಿ ಬೆಳೆಯುತ್ತ ಹೋಯಿತು. ಕೌರವರು ಸಹಾಯಕ್ಕಾಗಿ ದಶದಿಕ್ಕುಗಳನ್ನು ನೋಡತೊಡಗಿದರು. ಕುಮಾರನನ್ನು ತಡೆಯುವವರೇ ಇಲ್ಲವಾದರು. ಮೊದಲು ಎದುರಿಸಿ ನಿಂತವನು ದುರ್ಯೋಧನ. ಇದನ್ನು ನೋಡಿದೊಡನೆ ರಾಜನ ಸಹಾಯಕ್ಕೆ ದ್ರೋಣನು ಧಾವಿಸಿ ಬಂದನು. ಕೃಪ ಕೃತವರ್ಮ ರಾಧೇಯ ಶಕುನಿ ಇವರೂ ಪಕ್ಕದಲ್ಲಿ ಬಂದು ನೆರೆದರು. ವ್ಯೂಹದ ಹೃದಯದಲ್ಲಿದ್ದ ರಾಜನ ಬಳಿಗೆ ಕ್ಷಣಮಾತ್ರದಲ್ಲಿ ಅಭಿಮನ್ಯು ಬಂದುಬಿಟ್ಟಿದ್ದನು. ಎಲ್ಲಾ ವೀರರು ಒಟ್ಟಿಗೆ ಅಭಿಮನ್ಯುವನ್ನು ಘಾತಿಸಲಾರಂಭಿಸಿದರು.

★ ★ ★ ★

ಮಿಂಚಿನಂತೆ ಹೊಂಚಿದ ಅಭಿಮನ್ಯುವಿನ ರಥವು ಪದ್ಮವ್ಯೂಹದೆಡೆಗೆ ಸಿಡಿಲಿನಂತೆ ನಡೆಯಿತು. ಧ್ವಜವೊಂದು ಬೇರೆಯಾಗಿರದಿದ್ದರೆ, ಅರ್ಜುನನೇ ಬಂದಿರುವನೋ ಎನಿಸುವಂತಿತ್ತು. ಎರಡು ಸೈನ್ಯಗಳೂ ಮೇಳವಿಸಿದವು. ದ್ರೋಣನ ಕಣ್ಣೆದುರಿಗೇ ಮಾನವವ್ಯಾಪ್ತಿಗೆ ಮೀರಿದ ಪದ್ಮವ್ಯೂಹ ಛೇದನೆಯನ್ನು ಅಭಿಮನ್ಯುವು ಸಾಧಿಸಿ, ಒಡನೆಯೇ ವ್ಯೂಹವನ್ನು ಪ್ರವೇಶಿಸಿಬಿಟ್ಟನು. ಕೌರವ ಸೇನೆಯು ಭಯದಿಂದ ತತ್ತರಿಸಿತು. ಅರ್ಜುನನ ಮಗ, ಹದಿನಾರು ವರ್ಷದ ಪೋರ, ವ್ಯೂಹವನ್ನೊಡೆದು ದ್ರೋಣನ ಲೆಕ್ಕಾಚಾರಗಳನ್ನೆಲ್ಲಾ ಬುಡಮೇಲು ಮಾಡಿಬಿಟ್ಟಿದ್ದನು. ಅಕಸ್ಮಾತ್ ಛೇದಿಸಲ್ಪಟ್ಟರೂ, ತಕ್ಷಣವೇ ಪುನಃ ಕೂಡಿಕೊಳ್ಳುವಂಥದು ಪದ್ಮವ್ಯೂಹ. ಅಭಿಮನ್ಯು ಒಳಗೆ ಹೋದ ಒಡನೆಯೇ ಅನೇಕ ವೀರರನ್ನು ಒಟ್ಟಿಗೇ ಎದುರಿಸಬೇಕಾಯಿತು. ಆದರೇನು ಅವನ ಬಾಣ ವರ್ಷಗಳಿಂದ ಸಾಯುವ ಸೈನಿಕರ ರಾಶಿ ಬೆಳೆಯುತ್ತ ಹೋಯಿತು. ಕೌರವರು ಸಹಾಯಕ್ಕಾಗಿ ದಶದಿಕ್ಕುಗಳನ್ನು ನೋಡತೊಡಗಿದರು. ಕುಮಾರನನ್ನು ತಡೆಯುವವರೇ ಇಲ್ಲವಾದರು. ಮೊದಲು ಎದುರಿಸಿ ನಿಂತವನು ದುರ್ಯೋಧನ. ಇದನ್ನು ನೋಡಿದೊಡನೆ ರಾಜನ ಸಹಾಯಕ್ಕೆ ದ್ರೋಣನು ಧಾವಿಸಿ ಬಂದನು. ಕೃಪ ಕೃತವರ್ಮ ರಾಧೇಯ ಶಕುನಿ ಇವರೂ ಪಕ್ಕದಲ್ಲಿ ಬಂದು ನೆರೆದರು. ವ್ಯೂಹದ ಹೃದಯದಲ್ಲಿದ್ದ ರಾಜನ ಬಳಿಗೆ ಕ್ಷಣಮಾತ್ರದಲ್ಲಿ ಅಭಿಮನ್ಯು ಬಂದುಬಿಟ್ಟಿದ್ದನು.

ಮುಂದುವರಿಯುವುದು...

ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು
ಡಾ: ಗಿರೀಶ್ ಕಾರ್ನಾಡ್ 86 ನೇ ವರ್ಷದ ಜನ್ಮಜಯಂತಿ

• ಉದಯವಾಹಿನಿ, ವಿಶೇಷ

ಡಾಕ್ಟರ್: ಗಿರೀಶ್ ಕಾರ್ನಾಡ್ ಅವರು 1938 ಮೇ 19 ರಂದು ಮಹಾರಾಷ್ಟ್ರದ ಮತೇರನ್ ಎಂಬಲ್ಲಿ ಜನಿಸಿದರು. ತಂದೆ ರಘುನಾಥ್ ಕಾರ್ನಾಡ್ ತಾಯಿ ಕೃಷ್ಣಾಬಾಯಿ. ಧಾರವಾಡದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಪಡೆದು ಕರ್ನಾಟಕ ವಿಶ್ವವಿದ್ಯಾಲಯ ವಿದ್ಯಾರ್ಥಿಯಾಗಿ ಪದವೀಧರರಾದರು. ಆ ಬಳಿಕ ಮುಂಬೈ ವಿಶ್ವವಿದ್ಯಾಲಯದಲ್ಲಿ ಸಂಖ್ಯಾಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ನಂತರ ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ನಡೆಸಲು ಪ್ರತಿಷ್ಠಿತ ರೋಡ್ಸ್ ವಿದ್ಯಾರ್ಥಿ ವೇತನ ದೊರೆಯಿತು. ಆಕ್ಸ್‌ಫರ್ಡ್ ನಲ್ಲಿ ತತ್ವಶಾಸ್ತ್ರ, ರಾಜ್ಯಶಾಸ್ತ್ರ ಹಾಗೂ ಅರ್ಥಶಾಸ್ತ್ರದಲ್ಲಿ ಎಂ ಎ ಪದವಿ ಪಡೆದರು. ನಂತರ ಆಕ್ಸ್‌ಫರ್ಡ್ ಯೂನಿಯನ್ ಸೊಸೈಟಿ ಅಧ್ಯಕ್ಷರಾದರು.

ಭಾರತಕ್ಕೆ ಹಿಂತಿರುಗಿದ ನಂತರ ಮದ್ರಾಸಿನಲ್ಲಿದ್ದ ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ನಲ್ಲಿ ಕೆಲಕಾಲ ಮೆನೇಜರ್ ಆಗಿ ಕೆಲಸ ಮಾಡಿ ಇದೇ ವೇಳೆಯಲ್ಲಿ ಮದ್ರಾಸಿನ ಹವ್ಯಾಸಿ ರಂಗಭೂಮಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಹೆಚ್ಚಿನ ಅನುಭವಗಳಿಸಿದರು. ಇಟಲಿ ರಷ್ಯಾ ಹಾಗೂ ಅಮೆರಿಕ ದೇಶಗಳ ಪ್ರಸಿದ್ಧ ನಾಟಕಕಾರರ ನಾಟಕಗಳನ್ನು ನಿರ್ದೇಶಿಸಿದ್ದರು.

ಕಾರ್ನಾಡರು ಮೊದಲು ಬರೆದ ನಾಟಕ ಮಾನಿಷಾದ ರೇಡಿಯೋ ನಾಟಕವಾಗಿ ಪ್ರಸಾರವಾಯಿತು. ಆ ಬಳಿಕ ಇವರು ಕ್ರಮವಾಗಿ ಯಯಾತಿ, ತುಘಲಕ್, ಹಯವದನ, ಅಂಜುಮಲ್ಲಿಗೆ, ಹಿಟ್ಟಿನಹುಂಜ , ನಾಗಮಂಡಲ, ತಲೆದಂಡ, ಅಗ್ನಿ ಮತ್ತು ಮಳೆ ಹಾಗೂ ಟಿಪ್ಪು ಸುಲ್ತಾನ್ ಕಂಡ ಕನಸು ಎಂಬ ನಾಟಕಗಳನ್ನು ರಚಿಸಿದರು. ಕಾರ್ನಾಡ್ ರವರು ಪ್ರತಿಭಾವಂತ ನಾಟಕಕಾರ, ಕಲಾವಿದ, ನಿರ್ದೇಶಕರಾಗಿ ಹಲವಾರು ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ.

ಕನ್ನಡದ ನಾಟಕ ಸಾಹಿತ್ಯ ಪ್ರಕಾರಕ್ಕೆ ಅಮೂಲ್ಯ ಕೊಡುಗೆ ನೀಡಿ, ರಂಗಭೂಮಿ,ಚಲನಚಿತ್ರ ಕ್ಷೇತ್ರಗಳಲ್ಲಿ ಅನನ್ಯ ಸಾಧನೆ ಮಾಡಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿಗಳಿಸಿದ ಗಿರೀಶ್ ಕಾರ್ನಾಡರವರು ಕನ್ನಡಿಗರ ಹೆಮ್ಮೆ ಎನಿಸಿದ್ದಾರೆ. ಗಿರೀಶ್ ಕಾರ್ನಾಡ್ ರವರು ವೈಚಾರಿಕ, ವೈಜ್ಞಾನಿಕ ಮತ್ತು ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಜೀವನವನ್ನು ರೂಪಿಸಿಕೊಂಡು, ಸಕಾರಾತ್ಮಕ ಚಿಂತನೆಯೊಂದಿಗೆ, ಸಾಧಕ-ಬಾದಕಗಳನ್ನು ಅರ್ಥಮಾಡಿಕೊಂಡು ಬದ್ಧತೆಯಲ್ಲಿ ಬದುಕಿದ ಜೀವ.

ಅವರಿಗೆ ಆಡಂಬರಗಳ ಬಗ್ಗೆ ಆಸ್ಥೆ ಇರಲಿಲ್ಲ, ಸನಾತನ ಸಂಪ್ರದಾಯಗಳ ಕುರಿತು ಭ್ರಮೆಗಳಿರಲಿಲ್ಲ,ಸಾವಿನ ನಂತರದ ಸ್ವರ್ಗ-ನರಕಗಳ ಕಲ್ಪನೆಗಳ ಕುರಿತು ನಂಬಿಕೆಗಳಿರಲಿಲ್ಲ, ಇರುವವರೆಗೆ ಎಲ್ಲಾ,ಸತ್ತ ಮೇಲೆ ಏನೂ ಇಲ್ಲಾ ಎಂದು ಅರಿತಿದ್ದರು. ಹಾಗಾಗಿ ಸಾವಿಗೆ ಮುನ್ನವೇ, ಸತ್ತ ನಂತರ ಯಾವುದೇ ಧಾರ್ಮಿಕ ವಿಧಿವಿಧಾನಗಳನ್ನು ಮಾಡಕೂಡದು,ಸತ್ತ ಶವದ ಮೆರವಣಿಗೆ, ವೈಭವೀಕರಣಗಳು ಆಗಕೂಡದು, ಸರ್ಕಾರಿ ಗೌರವಾದರಗಳು ನಡೆಯಕೂಡದು, ಎಂದು ತಮ್ಮ ಮಗನಿಗೆ ಕಟ್ಟಾಜ್ಞೆ ಮಾಡಿ ತಮ್ಮ ಪಾಡಿಗೆ ಅವರು ಜಗದ ಯಾತ್ರೆಯನ್ನು ದಿನಾಂಕ: 10-06-2019 ರಂದು ಮುಗಿಸಿ ಮತ್ತೆ ಮರಳಿ ಬಾರದ ಶೂನ್ಯದತ್ತ ಹೊರಟರು. ಒಬ್ಬ ಮನುಷ್ಯ ಕಲೆಯಾಗಿ ಅರಳಿ, ಸಂಸ್ಕೃತಿಯಾಗಿ ರೂಪ ತೋರಿ,ಕಡೆಗೆ ಸಾಹಿತ್ಯಕವಾಗಿ ಮುಡಿಏರಬೇಕು. ಅಂತಹ ಉತ್ತಮ ಹಾಗೂ ಅತ್ಯುತ್ತಮವಾದ ವ್ಯಕ್ತಿತ್ವವನ್ನುಗಳಿಸಿಕೊಂಡವರ ಪೈಕಿ ಒಬ್ಬರಾಗಿರುತ್ತಾರೆ. ಸನ್ಮಾನ್ಯರ ಇಂದು 86 ನೇ ವರ್ಷದ ಜನ್ಮಜಯಂತಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಿ ಅವರನ್ನು ಸ್ಮರಿಸಿ ನೆನೆಯುತ್ತಾ, ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕಲೆಂದು ಕನ್ನಡ ಮನಸ್ಸುಗಳಾದ ನಾವುಗಳು ಆ ಭಗವಂತನಲ್ಲಿ ಪ್ರಾರ್ಥಿಸೋಣ.

ಉದಯವಾಹಿನಿ ಚಿತ್ರ

ಜನಪದ ರಂಗಭೂಮಿಯ ತಂತ್ರಗಳಲ್ಲಿ ಸೃಜನಾತ್ಮಕ ವೈವಿಧ್ಯಗಳನ್ನು ತಂದ ಇವರಿಗೆ ಹೋಮಿ ಬಾಬಾ ಫೆಲೋಷಿಪ್ ದೊರಕಿದೆ. ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಿದೆ. ಭಾರತ ಸರ್ಕಾರ ಪದ್ಮಶ್ರೀ ಹಾಗೂ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ. ಸಂಗೀತ ನಾಟಕ ಅಕಾಡೆಮಿಯ ಫೆಲೋ ಎಂಬ ಗೌರವ ಇವರಿಗೆ ಸಂದಿದೆ. ಕರ್ನಾಟಕ ಸರ್ಕಾರ ಗುಬ್ಬಿ ವೀರಣ್ಣ ಹಾಗೂ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ಮಧ್ಯಪ್ರದೇಶ ಸರ್ಕಾರ ಕಾಳಿದಾಸ ಸಮ್ಮಾನ್ ಪ್ರಶಸ್ತಿ ನೀಡಿ ಗೌರವಿಸಿದೆ. ಕಾರ್ನಾಡರ ತಲೆದಂಡ ನಾಟಕಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರೆತಿವೆ. 1998 ರಲ್ಲಿ ಭಾರತದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಯಾದ ಭಾರತೀಯ ಜ್ಞಾನಪೀಠ ಪ್ರಶಸ್ತಿ ದೊರಕಿದೆ.

ಬೆಂಗಳೂರಿನಿಂದ ಮಂತ್ರಾಲಯಕ್ಕೆ ಹೋಗಲು ಇರುವ 5 ರೈಲುಗಳು

• ಉದಯವಾಹಿನಿ, ಬೆಂಗಳೂರು

ಕಲಿಯುಗದ ಕಾಮಧೇನು, ಬೇಡಿದ ವರವನ್ನು ನೀಡುವ ಕರುಣಾಮಯಿ ರಾಘವೇಂದ್ರ ಸ್ವಾಮಿಗಳನ್ನು ಮಂತ್ರಾಲಯದಲ್ಲಿ ಪೂಜಿಸಲಾಗುತ್ತದೆ. ತಂಗಾಭದ್ರ ತಟದಲ್ಲಿ ನಿಂತಿರುವ ರಾಯರ ಸನ್ನಿಧಾನಕ್ಕೆ ನಿತ್ಯ ನೂರಾರು ಜನ ಭಕ್ತರು ಭೇಟಿ ನೀಡುತ್ತಾರೆ.



ಬೇಸಿಗೆ ರಜೆ ಮುಗಿತಾ ಬಂತು ಅಷ್ಟರಲ್ಲಿ ಮಂತ್ರಾಲಯಕ್ಕೆ ಹೋಗಿ ಬರಬೇಕು ಅಂದುಕೊಂಡಿದ್ದರೆ ಬೆಂಗಳೂರಿನಿಂದ ಮಂತ್ರಾಲಯಕ್ಕೆ ಹೋಗಲು ಇರುವ ಐದು ರೈಲುಗಳ ಬಗ್ಗೆ ಮಾಹಿತಿಯನ್ನು ನಾವು ನಿಮಗೆ ನೀಡಲಿದ್ದೇವೆ. ಆ ಮೂಲಕ ನೀವು ಮಂತ್ರಾಲಯಕ್ಕೆ ಸುಲಭವಾಗಿ ತೆರಳಬಹುದು.

ಅಲ್ಲದೇ ನೀವು ಬೆಂಗಳೂರಿನಿಂದ ಮಂತ್ರಾಲಯಕ್ಕೆ ವಂದೇ ಭಾರತ್ ರೈಲಿನಲ್ಲೂ ಕೂಡ ಹೋಗಬಹುದು. ಅದರ ಬಗ್ಗೆ ನೋಡುವುದಾದರೆ. ಈ ರೈಲು ಸಂಖ್ಯೆ KLBG VANDeBHARA(22232). ಇದು ಕೆಎಸ್‌ಆರ್ ಬೆಂಗಳೂರಿನಿಂದ ಮಧ್ಯಾಹ್ನ 2.40 ಗಂಟೆಗೆ ಹೊರಡುತ್ತದೆ. ರಾತ್ರಿ 8:18ಕ್ಕೆ ಮಂತ್ರಾಯಲವನ್ನು ತಲುಪುತ್ತದೆ. ಇದರ ಪ್ರಯಾಣ ದರ SL: 1175 ರೂಪಾಯಿ ಇದೆ. ನೀವೇನಾದ್ರು ಮಂತ್ರಾಲಯಕ್ಕೆ ಹೋಗಬೇಕು ಅಂದುಕೊಂಡಿದ್ದರೆ ಈ ರೈಲು ಪ್ರಯಾಣ ಮಾಡಬಹುದು.

ರಾಯರ ಮಠಕ್ಕೆ ಮಂತ್ರಾಲಯ ರೈಲ್ವೆಸ್ಟೇಷನ್ ತುಂಬಾ ಹತ್ತಿರವಾದ ರೈಲ್ವೇ ಸ್ಟೇಷನ್ ಆಗಿದೆ. ಮಂತ್ರಾಲಯ ರೈಲ್ವೆಸ್ಟೇಷನ್‌ನಿಂದ ಮಠವು 15 ಕಿಮೀ ದೂರದಲ್ಲಿದೆ. ಬೆಂಗಳೂರಿನಿಂದ ಮಂತ್ರಾಲಯಕ್ಕೆ ತೆರಳು ಇರುವ ಮೊದಲನೇ ರೈಲು 11014. ಇದು ಕೆಎಸ್‌ಆರ್ ಬೆಂಗಳೂರಿನಿಂದ ಸಂಜೆ 4 ಗಂಟೆಗೆ ಹೊರಡುತ್ತದೆ. ರಾತ್ರಿ 11.14ಕ್ಕೆ ತಲುಪುತ್ತದೆ. ಪ್ರಯಾಣ ದರ SL 245 ರೂಪಾಯಿ

ನಾಡು ತಳಿಗಳ ಸಂರಕ್ಷಣೆಯ ಬಗ್ಗೆ ಅತೀವ ಆಸಕ್ತಿ

ಬಂಟ್ವಾಳ ತಾಲ್ಲೂಕಿನ ಕುಕ್ಕಿಲದಲ್ಲಿ ಜಾಗವೊಂದನ್ನು ಖರೀದಿಸಿ, ಸುಮಾರು 400 ಜಾತಿಯ ನಾಡ ಮಾವು ಸಸಿಗಳ ನಾಟಿ

• ಉದಯವಾಹಿನಿ, ಮಂಗಳೂರು

ನಗರದಿಂದ 38 ಕಿ.ಮೀ ದೂರದಲ್ಲಿರುವ ಕುಕ್ಕಿಲ ಎಂಬ ಪುಟ್ಟ ಹಳ್ಳಿಯ ಗುಡ್ಡದ ತಟದಲ್ಲಿ, ನಶಿಸುತ್ತಿರುವ ಕರಾವಳಿ- ಮಲೆನಾಡಿನ ಅಪರೂಪದ ನಾಡ ಮಾವು ಜೀನ್ ಬ್ಯಾಂಕ್ ಮೈದಳೆದಿದೆ. ವೃತ್ತಿಯಲ್ಲಿ ಪಶು ವೈದ್ಯರಾಗಿರುವ ಡಾ. ಮನೋಹ ಉಪಾಧ್ಯ ಅವರಿಗೆ ನಾಡು ತಳಿಗಳ ಸಂರಕ್ಷಣೆಯ ಬಗ್ಗೆ ಅತೀವ ಆಸಕ್ತಿ. ಈ ಆಸಕ್ತಿಯ ಫಲವಾಗಿ ಬಂಟ್ವಾಳ ತಾಲ್ಲೂಕಿನ ಕುಕ್ಕಿಲದಲ್ಲಿ ಜಾಗವೊಂದನ್ನು ಖರೀದಿಸಿ, ಅವರು ಸುಮಾರು 400 ಜಾತಿಯ ನಾಡ ಮಾವು ಸಸಿಗಳನ್ನು ನಾಟಿ ಮಾಡಿದ್ದಾರೆ.

ಕುಕ್ಕಿಲದಲ್ಲಿ ನಾಡ ಮಾವು ಜೀನ್ ಬ್ಯಾಂಕ್

ಉದಯವಾಹಿನಿ ಚಿತ್ರ

ತಯ್ಯಿಲ್ ಚೊಪ್ಪನ್, ಬಪ್ಪಾಯಿ ಕಡುಕಾಚಿ, ಸಿಂಗಾಣಿ, ಅಲ್ಬುಕರ್ಕ್, ಕೈಂತಜೆ ಜೀರಿಗೆ, ಅಯ್ಯನಕಟ್ಟೆ, ಮುಳಬಾಗಿಲು ಮೆಲೋಗರ, ಬಡಾಪೈರಿ, ಪನ್ನೆಸೊನೆ, ಉಮಡ್ಕ ಸಾಸಿವೆ, ಕೇರಳ ಅಪ್ಪೆ ಸಾಸಿವೆ, ಗಿಳಿಕುಕ್ಕು, ಬಾಯ್ಮನೆ ಕಸಿ, ಪದ್ಮಾಣ ಜೀರಿಗೆ, ದೇವರಕೊಲ್ಲಿ, ಮಾಣಿಭಟ್ಟ, ಅಮ್ಮಂಕಲ್ಲು ಇಡ್ಕಾಯಿ, ಚೆನ್ನಪ್ಪ ಚೆಡ್ಕಾರ್, ಮುಂಚಿ ಕುಕ್ಕು ಅಜ್ಜಾವರ, ಶಂಕರಿ ಗೊರ್ಗೋಡಿ, ಲಾಡು ಮುಳಿಯ, ನಾಗರಡಿ ಬೆಳ್ಳೆ ಮುಂತಾದ ಹಳ್ಳಿಗರೇ ಹೆಸರಿಸಿರುವ ನಾಡು ಜಾತಿಯ ಮಾವಿನ ಗಿಡಗಳು ಚಿಗುರೊಡೆದಿವೆ.

ಹೋಲಿಕೆಯ ದೃಷ್ಟಿಯಿಂದ ಇವುಗಳ ಜೊತೆಗೆ ಸುಮಾರು 50 ಹೈಬ್ರೀಡ್, ಎಕ್ಸಾಟಿಕ್ ಜಾತಿಯ ಮಾವಿನ ಸಸಿಗಳನ್ನು ಕೂಡ ಅವರು ಬೆಳೆಸಿದ್ದಾರೆ. ಮಾವಿನ ತೋಪಿ ಸುತ್ತಲು ಕಾವಲುಗಾರರಂತೆ ಹಲಸಿನ ಗಿಡಗಳು ನೆಲೆಯೂರಿವೆ. ಇವು ಕೂಡ ಸ್ಥಳೀಯವಾಗಿ ಲಭ್ಯವಾಗುವ ಹಲಸು ವೈವಿಧ್ಯಗಳಾಗಿವೆ.

ನಮ್ಮ ಮೂಲ ನೆಲೆ ಉಡುಪಿ ಜಿಲ್ಲೆಯ ಪಾರಂಪಳ್ಳಿ ಗ್ರಾಮದ 'ಬಾಯ್ಮನೆ ಕಸಿ' ಹಣ್ಣಿನ ರುಚಿ ಹಾಗೂ ಅಡಿಕೆ ಪತ್ರಿಕೆ ಸಂಪಾದಕ ಶ್ರೀಪಡ್ರೆ ಅವರು ಕೇರಳ ರಾಜ್ಯದ ಕಣ್ಣಪ್ಪುರಂನಲ್ಲಿ ನಡೆಯುವ ನಾಡ ಮಾವು ಮೇಳಕ್ಕೆ ಕರೆದೊಯ್ದ ಅನುಭವವು ನಾಡ ಮಾವು ಜೀನ್ ಬ್ಯಾಂಕ್ ಕಲ್ಪನೆಗೆ ಮೂಲ ಪ್ರೇರಣೆಯಾದವು' ಎನ್ನುತ್ತಾರೆ ಡಾ. ಉಪಾಧ್ಯ. 2022ರಿಂದ ನಾಡ ಮಾವು ತಳಿಗಳ ಹುಡುಕಾಟ ಆರಂಭವಾಯಿತು. ಕಾಸರಗೋಡು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳು, ಉತ್ತರ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಭಾಗಶಃ ಪ್ರದೇಶಗಳಿಂದ ನಾಡ ಮಾವು ತಳಿಗಳನ್ನು ಸಂಗ್ರಹಿಸಿದ್ದೇನೆ. ಆಯಾ ಊರಿಗೆ ಹೋಗಿ ಸಂಗ್ರಹಿಸಿದ ಕಸಿ ಕಡ್ಡಿಯನ್ನು (ಸಯಾನ್) ಸರ್ವೇಶ್ವರ ರಾವ್ ಅವರು ಕಸಿ ಗಿಡ ಮಾಡಿ, ಬೆಳೆಸಿಕೊಟ್ಟರೆ, ನಾಡ ಮಾವು ಮಿತ್ರರು (ನಾಮಾಮಿ) ಬಳಗದ ಸದಸ್ಯರು ಹಲವಾರು ಮಾಹಿತಿ ನೀಡುವಲ್ಲಿ ನೆರವಾದರು' ಎಂದು ಸ್ಮರಿಸುತ್ತಾರೆ ಅವರು.

ಪ್ರತಿ 15 ಅಡಿಗೆ ಒಂದು ಗಿಡ ನಾಟಿ ಮಾಡಲಾಗಿದೆ. ಸುಮಾರು 550ರಷ್ಟು ಗಿಡಗಳ ನಾಟಿಗೆ ಅವಕಾಶ ಇದೆ. ಇನ್ನೂ 75 ನಾಡ ಮಾವಿನ ಸಸಿಗಳು, 50ರಷ್ಟು ಹಲಸಿನ ಗಿಡಗಳನ್ನು ನಾಟಿ ಮಾಡುವುದು ಅವರ ಗುರಿ. ಕುಕ್ಕಿಲದ ಗುಡ್ಡದಲ್ಲಿ ಬೆಳೆದಿರುವ ನಾಡ ಮಾವಿನ ಗಿಡದೊಂದಿಗೆ ಡಾ. ಮನೋಹರ ಉಪಾಧ್ಯ - ಫಕ್ರುದ್ದೀನ್ ಎಚ್ ನಾಡ ಮಾವಿನ ಗಿಡಗಳ ರಕ್ಷಣೆಗೆ ಮಾಡಿರುವ ಬೋರ್‌ವೆಲ್ ವ್ಯವಸ್ಥೆ ಬಗ್ಗೆ ಡಾ. ಉಪಾಧ್ಯ ವಿವರಣೆ ನೀಡಿದರು.

> ಪ್ರತಿಯೊಬ್ಬರೂ ಒಂದೊಂದು ನಾಡ ಮಾವು ತಳಿ ಸಂರಕ್ಷಣೆ ಮಾಡಿದರೆ ನಶಿಸುತ್ತಿರುವ ನಾಡ ಮಾವು ತಳಿಗಳ ಕಂಪು ಪಸರಿಸಲು ಸಾಧ್ಯ.
> -ಡಾ. ಮನೋಹರ ಉಪಾಧ್ಯ, ತಳಿ ಸಂರಕ್ಷಕ

ಹನಿ ನೀರಾವರಿ ವ್ಯವಸ್ಥೆ

ನೀರಾವರಿ ವ್ಯವಸ್ಥೆ ಬಿರು ಬೇಸಿಗೆಯಲ್ಲೂ ಇಳಿಜಾರಿನ ಗುಡ್ಡದಲ್ಲಿ ಮಾವಿನ ಸಸಿಗಳು ನಳನಳಿಸುತ್ತಿವೆ. ಉಪಾಧ್ಯರು ಬೋರ್‌ವೆಲ್ ತೆಗೆದು ಇದಕ್ಕೆ ಹನಿ ನೀರಾವರಿ ವ್ಯವಸ್ಥೆ ಮಾಡಿದ್ದಾರೆ. ತಾವೇ ಸ್ವತಃ ಭೇಟಿ ನೀಡಿ ಗಿಡಗಳಿಗೆ ನೀರು ಜೀವಾಮೃತ ಉಣಿಸುತ್ತಾರೆ. ಇನ್ನು ಮೂರು ವರ್ಷಗಳಲ್ಲಿ ಎಲ್ಲಾ ಸಸಿಗಳು ಮರವಾಗಿ ಬೆಳೆದು ಹಣ್ಣು ನೀಡಬಹುದು ಎಂಬುದು ಡಾ. ಉಪಾಧ್ಯರ ನಿರೀಕ್ಷೆ.

ಬರ ಪರಿಹಾರ ಹಣ ರೈತರಿಗೆ ನೀಡಿ ಸಾಲಕ್ಕೆ ಜಮಾ ಮಾಡಬೇಡಿ

• ಉದಯವಾಹಿನಿ, ಸಿಂಧನೂರು

ಸರ್ಕಾರದಿಂದ ಬರ ಪರಿಹಾರ ತಾಲ್ಲೂಕಿಗೆ 30 ಕೋಟಿ ರೂ ಬಂದಿದ್ದು. ಗೃಹ ಲಕ್ಷ್ಮಿ ಯೋಜನೆಯ ಹಣವನ್ನು ನೇರವಾಗಿ ರೈತರು ಹಾಗೂ ಮಹಿಳೆಯರ ಖಾತೆಗೆ ಜಮಾ ಮಾಡಬೇಕು. ಮತ್ತು ಯಾವುದೇ ಕಾರಣಕ್ಕೂ. ಕಷ್ಟಕ್ಕೆ ಬಂದಿರುವ ಹಣವನ್ನು ವಿವಿಧ ಬ್ಯಾಂಕ್‌ಗಳು ಮೇನೇಜರ್‌ಗಳು ರೈತರು ಹಾಗೂ ಮಹಿಳೆಯರ ಪಡೆದಿರುವ ಸಾಲಕ್ಕೆ ಜಮಾ ಮಾಡಿಕೊಳ್ಳಬಾರದು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ಸಿಂಧನೂರು ತಾಲ್ಲೂಕಿಗೆ ಬರ ಪರಿಹಾರ 30 ಕೋಟಿ ರೂ ಬಂದಿದ್ದು. ಪ್ರತಿಯೊಬ್ಬ ರೈತರ ಖಾತೆಗೆ ನೇರವಾಗಿ ಹಣವನ್ನು ಜಮಾ ಮಾಡುವಂತ ಕೆಲಸ ಆಗಬೇಕು ಎಂದು ಹೇಳಿದರು.

ಏಕೆಂದರೆ ದೇಶಕ್ಕೆ ಅನ್ನ ನೀಡುವ ರೈತರನ್ನು ಯಾರು ಸಹ ಕಡೆಗಣಿಸಿ ಬಾರದು. ಈದೇಶದ

ಉದಯವಾಹಿನಿ ಚಿತ್ರ

ಬೆನ್ನೆಲುಬು ರೈತ ಎಂದು ಹೇಳಿ ನಾವೆಲ್ಲರೂ ರೈತರು ಹಾಗೂ ಮಹಿಳೆಯರ ಪರವಾಗಿ ಎಲ್ಲಾ ಬ್ಯಾಂಕ್‌ಗಳು ಮುಂದಾಗಬೇಕು.

ಒಂದು ಒಂದು ಬ್ಯಾಂಕಿನವರು ಹಣವನ್ನು ಸರಿಯಾಗಿ ಕೊಡುತ್ತಿಲ್ಲ. ಕೆಲವು ಬ್ಯಾಂಕುಗಳು ಮೇಲೆ ಆರೋಪ ಬಂದಿದ್ದು. ಅಲ್ಲಿ ಹೊಂದಿರುವ ಖಾತೆಗಳನ್ನು ದಯವಿಟ್ಟು ಯಾವ ಬ್ಯಾಂಕಿನವರು ಲಾಕ್ ಮಾಡಿದೆ ಬರ ಗಾಲದ ಬಂದವರು ಹಣವನ್ನು ರೈತರಿಗೆ ಮಹಿಳೆಯರು ಕಾರ್ಮಿಕರು ನೇರವಾಗಿ ಹಣವನ್ನು ಜಮಾ ಮಾಡಿ. ಫಲಾನುಭವಿಗಳಿಗೆ ಸಾಲ ಇದ್ದರೆ ಬೇರೆ ರೀತಿಯಲ್ಲಿ ಜಮಾ ಮಾಡಿಕೊಳ್ಳಿ. ಎಂದು ಲೀಡ್ ಬ್ಯಾಂಕ್ ನವರ ಆದೇಶ ಹೊರಡಿಸಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ, ಶಿವಕುಮಾರ್ ಜವಳಿ. ವೆಂಕಟೇಶ್ ರಾಗಲಪರ್ವಿ. ವೆಂಕನಗೌಡ ಗಿಣಿವಾರ ಮುದಿಯಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

> ಏಕೆಂದರೆ ಬರಗಾಲದ ಛಾಯೆಯಲ್ಲಿ. ಕಷ್ಟದಲ್ಲಿ ಜೀವನವನ್ನು ನಡೆಸುತ್ತಿ ರುವ ರೈತರಿಗೆ ಅನುಕೂಲವಾಗಲಿ. ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ಸಹ ಎಲ್ಲಾ ಬ್ಯಾಂಕುಗಳಿಗೆ ಸೂಚನೆ ಮನವರಿಕೆ ಮಾಡಿದ್ದಾರೆ. ಇದನ್ನು ಬ್ಯಾಂಕಿನವರು ಸಹ ಅನುಸರಿಸಿ. ರೈತರಿಗೆ ಮಹಿ ಳೆಯರಿಗೆ ಒಳ್ಳೆಯದಾಗಲಿ
> -ಸೋಮನಗೌಡ ಬಾದರ್ಲಿ, ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ

ಬಹಿರ್ದೆಸೆಗೆ ಕುಳಿತ ಇಬ್ಬರ ಬಲಿ ಪಡೆದ ಶೌಚಾಲಯದ ಗೋಡೆ

• ಉದಯವಾಹಿನಿ, ಕುಷ್ಟಗಿ

ಹಳೆಯ ಶೌಚಾಲಯ ಗೋಡೆಯ ಪಕ್ಕ ಬಹಿರ್ದೆಸೆ ಕುಳಿತ ಮಹಿಳೆಯರ ಮೇಲೆ ಶೌಚಾಲಯದ ಗೋಡೆ ಕುಸಿದು ಇಬ್ಬರು ದುರಂತ ಸಾವನಪ್ಪಿದ ಪ್ರಕರಣ ಕುಷ್ಟಗಿ ತಾಲ್ಲೂಕಿನ ತಾವರಗೇರಾದಲ್ಲಿ ನಡೆದಿದೆ. ತಾವರಗೇರಾದ ಮಸೀದಿ ಮುಂದಿನ ಕುರುಬರ ಓಣಿ ಮಹಿಳಾ ಶೌಚಾಲಯದ ಶಿಥಿಲ ಗೋಡೆ ಇಬ್ಬರನ್ನು ಬಲಿ ಪಡೆದಿದೆ.

ಗೋಡೆ ಕುಸಿದು ಅಸ್ವಸ್ಥಗೊಂಡ ಮತ್ತೊಬ್ಬ ಮಹಿಳೆಯ ಚಿಂತಾಜನಕವಾಗಿದ್ದು ಹೆಚ್ಚಿನ ಚಿಕಿತ್ಸೆಗೆ ಗಂಗಾವತಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಹಿಳಾ ಶೌಚಾಲಯ ಕಳೆದ ಹಲವು ತಿಂಗಳಿನಿಂದ ಶಿಥಿಲ ಗೊಂಡಿತ್ತು. ಶೌಚಾಲಯದೊಳಗ ಹೋಗದಂತೆ ಪಟ್ಟಣ ಪಂಚಾಯತಿ ನಿರ್ಭಂದಿಸಿತ್ತು. ಓಣಿಯ ಮಹಿಳೆಯರು ಸಹ ಅಲ್ಲಿ ಶೌಚಕ್ಕೆ ಹೋಗುವದನ್ನು ನಿಲ್ಲಿಸಿದ್ದರು. ಕಳೆದ ಒಂದು ವಾರದಿಂದ ಮಳೆಯಾದ ಪರಿಣಾಮ ಗೋಡೆ ನೆನೆದು ಇಂದು ಏಕಾಏಕಿ ಕುಸಿದಿದೆ. ರಾತ್ರಿ ಯಾಗಿದ್ದ ಕಾರಣ ಮಹಿಳೆಯರು ಹಳೇ ಶೌಚಾಲಯದಲ್ಲಿ ಹೋಗಿದ್ದರೆಂದು


ಉದಯವಾಹಿನಿ ಚಿತ್ರ

ಗೊತ್ತಾಗಿದೆ.

ಮೃತ ಮಹಿಳೆ ಭಾನುಬೇಗಂ (40) ಖಾಜಿ , ಉಮಾ ಬಾಯಿ ಬಪ್ಪರಗಿ (36) ಮೃತ ದುರ್ದೈವಿ , ತೀವ್ರ ಚಿಂತಾಜನಕ ಸ್ಥಿತಿಯಲ್ಲಿರುವ ಮಹಾದೇವಿ ರಾಜಣ್ಣ ಇವರನ್ನು ಹೆಚ್ಚಿನ ಚಿಕಿತ್ಸೆಗೆ ಗಂಗಾವತಿ ಆಸ್ಪತ್ರೆಗೆ ಕಳಿಸಲಾಗಿದೆ ಎಂದು ತಿಳಿದು ಬಂದಿದೆ. ತಾಲ್ಲೂಕ ದಂಡಾಧಿಕಾರಿಗಳಾದ ರವಿ ಅಂಗಡಿ , ಸಿಪಿಐ ಯಶವಂತ ಬಿಸನಳ್ಳಿ, ಪ.ಪಂ.ಮುಖ್ಯಾಧಿಕಾರಿ ನಬಿಸಾಬ ಖುದನವರ , ಪಿಎಸ್‌ಐ ಸುಜಾತ ನಾಯಕ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಡೊನೇಷನ್ ಹಾವಳಿ

• ಉದಯವಾಹಿನಿ, ಸಿಂಧನೂರು

ತಾಲ್ಲೂಕಿನಲ್ಲಿ ಬರುವ ಖಾಸಗಿ, ಅನುದಾನಿತ ಪದೇ ಪೂರ್ವ ಕಾಲೇಜುಗಳಲ್ಲಿ ಸರ್ಕಾರ ನಿಗದಿಪಡಿಸಿದ ಶೂಲ್ಕವನ್ನು ಮಾತ್ರ ಪಡೆಯಬೇಕು. ಅದನ್ನು ಬಿಟ್ಟು ಹೆಚ್ಚು ಮೊತ್ತ ಮ ತ್ತು ಡೊನೇಷನ್ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಸ್ವೀಕರಿಸ ಬಾರದೆಂದು ವೀರ ಮದಕರಿ ನಾಯಕ ಯುವ ವೇದಿಕೆ ತಾಲ್ಲೂಕ ವತಿಯಿಂದ ಒತ್ತಾಯಿಸುತ್ತದೆ. ಎಂದರು.

ಡಿಡಿಪಿಐ ಅಧಿಕಾರಿ ಶಾಮೀಲು

ಉದಯವಾಹಿನಿ ಚಿತ್ರ

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ವೀರ ಮದಕರಿ ನಾಯಕ ಯುವ ವೇದಿಕೆ ತಾಲ್ಲೂಕ ಅಧ್ಯಕ್ಷರಾದ ವಿಶ್ವನಾಥ ನಾಯಕ್ ಅವರು ಈ ಡೊನೇಷನ್ ಹಾವಳಿ ಬಗ್ಗೆ ದಿನಾಂಕ 24-1-2024 ರಂದು ಮಾನ್ಯ ಉಪ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ರಾಯಚೂರು ಇವರಿಗೆ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಮಾಹಿತಿ ಕೇಳಿದರೆ. ಒಬ್ಬ ಡಿಡಿಪಿಐ ಅಧಿಕಾರಿ ಸೋಮಶೇಖರ್ ಗೌಡ ಹೊಕ್ರಾಣಿ ಅವರು ಆದೇಶವನ್ನು ಹೊರಡಿಸದೆ ಕೇಳಿರುವ ಮಾಹಿತಿಯನ್ನು ನೀಡದೆ ತಮಗೆ ಸಂಬಂಧವಿಲ್ಲವೆಂದು ಕಾರ್ಯ ನಿರ್ವಹಿಸುತ್ತಿದ್ದಾರೆ.

ಕಾನೂನಾತ್ಮಕವಾಗಿ ಖಾಸಗಿ ಸರಕಾರಿ ಅನುದಾನಿತ ಎಲ್ಲಾ ವಿಭಾಗದ ಶುಲ್ಕವನ್ನು ಸೂಚನಾ ಫಲಕದಲ್ಲಿ ಸರಕಾರದ ಸುತ್ತೋಲೆಯನ್ನು ಪ್ರಕಟಿಸಬೇಕು ಎಲ್ಲಾ ಖಾಸಗಿ ಕಾಲೇಜುಗಳು ಆಡಳಿತ ಮಂಡಳಿ ನಿಗದಿಪಡಿಸಿದ ಶುಲ್ಕವನ್ನು ಸೂಚನಾ ಫಲಕದಲ್ಲಿ ಪ್ರಕಟಿಸಬೇಕು.

ಜಿಲ್ಲಾಧಿಕಾರಿ, ತಹಶೀಲ್ದಾರರು ಅವರು ಸಿಂಧನೂರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಹೆಚ್ಚುವರಿ ಶುಲ್ಕ ಮತ್ತು ಡೊನೇಷನ್ ಪಡುವ ಕಾಲೇಜುಗಳು ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಪತ್ರಿಕ ಮಾಧ್ಯಮಗಳ ಮೂಲಕ ಒತ್ತಾಯಿಸುತ್ತೇವೆ. ಈಗಾಗಲೇ ವಿದ್ಯಾರ್ಥಿಗಳು ಮತ್ತು ಪಾಲಕರು ಈ ಹೆಚ್ಚುವರಿ ವಿಷಯ ಶುಲ್ಕದ ಡೊನೇಷನ್ ಪಡಿದಿರುವುದು ನಮ್ಮ ಗಮನಕ್ಕೆ ಬಂದಿದೆ. ಒಂದು ವೇಳೆ ಪರಿಗಣಿಸದೆ ಇದ್ದರೆ ಪಾಲಕರಿಂದ ನೇರವಾಗಿ ಅಂತಹ ಕಾಲೇಜುಗಳು ವಿರುದ್ಧ ಪ್ರತಿಭಟಿಸಿ ಮತ್ತಿಗೆ ಹಾಕಲಾಗುತ್ತದೆ. ಇದಕ್ಕೆ ಕಾಲೇಜುಗಳ ಆಡಳಿತ ಮಂಡಳಿ ನೀರ ಹೊಣೆಗಾರರಾಗುತ್ತಾರೆ ಎಂದರು.

ಈ ಸಂದರ್ಭದಲ್ಲಿ, ಮಲ್ಲಯ್ಯ ನಾಯಕ್. ಫಕೀರಪ್ಪ ನಾಯಕ . ನರಸಣ್ಣ ನಾಯಕ್ ಸೇರಿದಂತೆ ಇತರರು ಇದ್ದರು.

ಫೀ ನೆಪದಲ್ಲಿ ಡೊನೇಷನ್

ಖಾಸಗಿ, ಅನುದಾನಿತ ಸಂಸ್ಥೆಗಳು ಶಿಕ್ಷಣದ ಹೆಸರಿನಲ್ಲಿ ಫೀ ನೆಪದಲ್ಲಿ ಡೊನೇಷನ್ ವಸೂಲಿ ದಂಧೆಕೋರರು ಸಿಂಧನೂರು ತಾಲ್ಲೂಕಿನ ನಲ್ಲಿ ಹಾವಳಿ ಹೆಚ್ಚಾಗಿದ್ದು. ತಮ್ಮ ತಮ್ಮೊಳಗಿನ ಕಾಂಪಿಟೇಶನ್ ನಡೆದಿದ್ದು ಇಂತಹಾ ಅಗಲಿ ದಂಧೆಕೋರರು ಮೇಲೆ ಮಟ್ಟ ಹಾಕುವುದು ಯಾವಾಗ? ಡಿಡಿಪಿಐ ಸಾಹೇಬರು. ಇದರಲ್ಲಿ ದೊಡ್ಡ ಪಾತ್ರ ಇದೆ. ಈ ಡೊನೇಷನ್ ಹಾವಳಿಗೆ ನೀವೇ ಕೀಗ್ ಮೇಕರ್ ಎಂಬ ಮೇಲೆ ನೋಟಕ್ಕೆ ಎದ್ದು ಕಾಣುತ್ತದೆ.

ಅನುಪಯುಕ್ತ ಹಳೆಯ ಸಾಮಾನು ಮಾರಾಟ

ಆದೇಶಕ್ಕೆ ಮೀರಿ ಮಾರಾಟ ಮಾಡುತ್ತಿದ್ದು ಸೂಕ್ತ ಕ್ರಮಕ್ಕಾಗಿ ಆಗ್ರಹ

• ಉದಯವಾಹಿನಿ,ಚಿಂಚೋಳಿ

ತಾಲ್ಲೂಕಿನ ಚಿಮ್ಮನಚೋಡ ಗ್ರಾಮದ ಕೆಳದಂಡೆ ಮುಲ್ಲಾಮಾರಿ ಯೋಜನೆಯ ಅಣೆಕಟ್ಟು ಉಪ ವಿಭಾಗದಲ್ಲಿರುವ ಸಾವಿರಾರು ಟನ್ ಅನುಪಯುಕ್ತ ಹಳೆಯ ಸಾಮಾನುಗಳು ಮಾರಾಟ ಮಾಡಲು ಸರ್ಕಾರದ ಹಾಗೂ ಉಚ್ಚ ನ್ಯಾಯಾಲಯದ ಆದೇಶವು ತಡೆಹಿಡಿಯವಂತೆ ಇದ್ದರೂ ಸಹ ಇಲಾಖೆ ಅಧಿಕಾರಿಗಳಾದ ಎಇಇ, ಇಇ ಹಾಗೂ ಉನ್ನತಮಟ್ಟದ ಅಧಿಕಾರಿಗಳು ಶಾಮೀಲಾಗಿ ಮಾರಾಟ ಮಾಡುತ್ತಿದ್ದು ಇವರ ಮೇಲೆ ಸೂಕ್ತಕ್ರಮ ಕೈಗೊಂಡು ಮಾರಾಟ ಮಾಡಿರುವ ಹಳೆಯ ಸಾಮಾನುಗಳು ಮೂಲಸ್ಥಳದಲ್ಲೇ ಶೇಖರಣೆ ಮಾಡುವಂತೆ ಅಂಬೇಡ್ಕರ್ ಧ್ವನಿ ಸಂಘಟನೆಯ ಯುವ ಘಟಕದ ರಾಜ್ಯಾಧ್ಯಕ್ಷ ವೈ.ಎಂ.ಸಾಗರ ಆಗ್ರಹಿಸಿದರು.

ಪತ್ರಿಕಾ ಪ್ರಕಟನೆ ಹೊರಡಿಸಿದ ಅವರು, ಸರ್ಕಾರವು 21 ಅಕ್ಟೋಬರ್ 2022ರಂದು ಶಾಹಾಪೂರದ ಭೀಮರಾಯನಗುಡಿಯ ಮಾತಾ ಮಾಣಿಕೇಶ್ವರಿ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಅನುಪಯುಕ್ತ ಹಳೆಯ ಸಾಮಾನು ವಿಲೇವಾರಿ ಮಾಡುವುದನ್ನು ತಡೆಹಿಡಿದು ಆದೇಶ ಮಾ ಡಿರುತ್ತಾರೆ ಹಾಗೂ ನ್ಯಾಯಾಲಯವು ಕೂಡ 23ಫೆಬ್ರವರಿ 2023ರಂದು ಹಳೆಯ ಸಾಮಾನು ವಿಲೇವಾರಿ ಮಾಡಲು ತಡೆಯಾಜ್ಞೆ ನೀಡಿರುತ್ತಾರೆ ಆದರೆ ಅಧಿಕಾರಿಗಳು ಶಾಮೀಲಾಗಿ

ಉದಯವಾಹಿನಿ ಚಿತ್ರ

ನ್ಯಾಯಾಲಯದ ಹಾಗೂ ಸರ್ಕಾರದ ಆದೇಶ ದಿಕ್ಕರಿಸಿ ಸಾವಿರಾರು ಟನ್ ಹಳೆಯ ಸಾಮಾನು ಅಧಿಕಾರಿಗಳು ಸ್ವಇಚ್ಛೆಯಿಂದ ಖಾಸಗಿ ಸಂಸ್ಥೆಗಳಿಗೆ ಯಾವುದೇ ಟೆಂಡರ್ ಇಲ್ಲದೆ ಆದೇಶವಿಲ್ಲದೆ ಮಾರಾಟ ಮಾಡುತ್ತಿರುವ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.

ಸಂಬಂಧಪಟ್ಟ ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರ ಅಧಿಕಾರಿಗಳು ಮತ್ತು ಸ್ಟೋರ್ ಕೀಪರ್‌ಗಳಿಗೆ ಕೇಳಿದರೆ ಹರಕೆ ಉತ್ತರ ನೀಡುತ್ತಿದ್ದಾರೆ ಅದಕಾರಣ ಸಂಬಂಧಪಟ್ಟ ಉನ್ನತಮಟ್ಟದ ಅಧಿಕಾರಿಗಳು ಗಮನಹರಿಸಿ ಹಳೆಯ ಸಾಮಾನು ಮಾರಾಟ ಮಾಡುವುದು ತಡೆಗಟ್ಟಿ ಮಾರಾಟ ಮಾಡಿರುವ ಸಾಮಾನು ಪುನಃ ಸ್ಥಳದಲ್ಲೇ ಶೇಖರಣೆ ಮಾಡಬೇಕು ಇಲ್ಲಾದಿದ್ದರೆ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದರು.

> ನೀರಾವರಿ ನಿಗಮದ ಇಇ ಕಡೆಯಿಂದ ಕೆಳದಂಡೆ ಮುಲ್ಲಾಮಾರಿ ಯೋಜನೆ ಅಣೆಕಟ್ಟು ಚಿಮ್ಮನಚೋಡ ಉಪವಿಭಾಗಕ್ಕೆ ಹಳೆಯ ಸಾಮಾನು ಮಾರಾಟ ವಿಲೇವಾರಿ ಮಾಡಲು ಆದೇಶ ಬಂದಿರುತ್ತದೆ ಅದಕ್ಕೆ ನಾವು ಮಾರಾಟ ಮಾಡುತ್ತಿರುವುದು ಇದರಲ್ಲಿ ನ್ಯಾಯಾಲಯ ತಡೆಯಾಜ್ಞೆ ನೀಡಿದ್ದು ಆದರೆ ಖರೀದಿ ಮಾಡುವವರು ನ್ಯಾಯಾಲಯದ ಮೇಲ್ಮನವಿ ಅಪೀಲ್ ಹೋಗಿದ್ದಾರೆ ಆದೇಶ ಸಿಗುತ್ತದೆ ಎಂಬ ಭರವಸೆಯಿಂದ ಸಾಮಾನುಗಳು ವಿಲೇವಾರಿ ಮಾಡಲು ನೀರಾವರಿ ನಿಗಮ ಇಇ ಆದೇಶ ನೀಡಿದ್ದಾರೆ ನಾವು ಮಾರಾಟ ಮಾಡುತ್ತಿದ್ದೇವೆ
> - ತ್ರಿಲೋಚನಕುಮಾರ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಚಿಮ್ಮನಚೋಡ.

• ಉದಯವಾಹಿನಿ, ಬ್ರಹ್ಮಾವರ

11 ಸಾವಿರ ಹೆಕ್ಟೇರ್ ಭತ್ತ ಬೆಳೆಯುವ ಗುರಿ

ಕಳೆದ ಎರಡ್ಮೂರು ದಿನಗಳಿಂದ ಸಾಧಾರಣವಾಗಿ ಮುಂಗಾರು ಪೂರ್ವ ಮಳೆ ಬೀಳುತ್ತಿರುವುದರಿಂದ ಭತ್ತದ ಬೀಜ ಬಿತ್ತನೆಗೆ ಪೂರಕ ವಾತಾವರಣ ನಿರ್ಮಾಣವಾಗುತ್ತಿದ್ದು ರೈತರು ಕೃಷ

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	07:30 ರಿಂದ 09:00
ಗುಳಿಕ ಕಾಲ	ಮಧ್ಯಾಹ್ನ	01:30 ರಿಂದ 03:00
ಯಮಗಂಡ ಕಾಲ	ಬೆಳಿಗ್ಗೆ	10:30 ರಿಂದ 12:00

ಮೇಷ – ನಿಮ್ಮ ದೊಡ್ಡ ಆಸ್ತಿಯೆಂದರೆ ನಿಮ್ಮ ಹಾಸ್ಯ ಪ್ರಜ್ಞೆಯಾಗಿದೆ ಇದನ್ನು ನಿಮ್ಮ ಅನಾರೋಗ್ಯ ಗುಣಪಡಿಸಲು ಬಳಸಲು ಪ್ರಯತ್ನಿಸಿ. ವಿವಾಹಿತ ಜನರು ಇಂದು ತಮ್ಮ ಮಕ್ಕಳ ಶಿಕ್ಷಣದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

ವೃಷಭ – ಇಂದು ನೀವು ನಿಮ್ಮ ಜೀವನದಲ್ಲಿ ನಿಜವಾದ ಪ್ರೀತಿಯ ಅನುಪಸ್ಥಿತಿಯನ್ನು ಅನುಭವಿಸುತ್ತೀರಿ. ಚಿಂತಿಸಬೇಡಿ, ಕಾಲಕಳೆದಂತೆ ಎಲ್ಲವೂ ಬದಲಾಗುತ್ತದೆ, ನಿಮ್ಮ ಪ್ರಣಯ ಜೀವನವೂ ಸಹ.

ಮಿಥುನ – ನೀವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿದಲ್ಲಿ ಖಿನ್ನತೆಗೊಳಗಾಗಬೇಡಿ. ಆಹಾರದ ಸ್ವಾದಕ್ಕೆ ಉಪ್ಪು ಬೇಕಾದ ಹಾಗೆ ಅತೃಪ್ತಿಯಿಂದ ಮಾತ್ರ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ.

ಕರ್ಕಾಟಕ – ಬಿಡುವಿನ ವೇಳೆಯಲ್ಲಿ ನೀವು ಇಂದು ಸೃಜನಾತ್ಮಕವಾಗಿ ಏನಾದರೂ ಮಾಡಬಹುದು. ಇದು ನಿಮ್ಮ ಸಂಗಾತಿಯ ಜೊತೆಗಿನ ನಿಮ್ಮ ಜೀವನದ ಅತ್ಯುತ್ತಮ ದಿನವಾಗಿರಬಹುದು.

ಸಿಂಹ – ಪ್ರತಿ ವ್ಯಕ್ತಿಯನ್ನೂ ಆಲಿಸಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ದೊರಕಬಹುದು. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು.

ಕನ್ಯಾ – ಉತ್ತಮ ಆರೋಗ್ಯ ಏನಾದರೂ ಅಸಾಮಾನ್ಯವಾಗಿದ್ದನ್ನು ಸಾಧಿಸಲು ಸಾಧ್ಯವಾಗಿಸುವ ಒಂದು ವಿಶೇಷ ದಿನ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ಕೌಟುಂಬಿಕ ಅಗತ್ಯಗಳಿಗೆ ತಕ್ಷಣದ ಗಮನ ನೀಡಬೇಕು.

ತುಲಾ – ಇಂದು ನೀವು ಉಚಿತ ಸಮಯದಲ್ಲಿ ಯಾರೊಂದಿಗೂ ಭೇಟಿ ಮಾಡಲು ಇಷ್ಟ ಪಡುವುದಿಲ್ಲ ಮತ್ತು ಏಕಾಂತದಲ್ಲಿ ಸಂತೋಷವಾಗಿರುತ್ತೀರಿ. ನಿಮ್ಮ ಜೀವನ ಮದುವೆಗೆ ಸಂಬಂಧಿಸಿದಂತೆ ಇಂದು ಅದ್ಭುತವಾಗಿ ಕಾಣುತ್ತದೆ.

ವೃಶ್ಚಿಕ – ಇಂದು ನಿಮಗೆ ತುಂಬ ಉನ್ನತ ಶಕ್ತಿಯಿರುವ ದಿನ ಮತ್ತು ನೀವು ಸಣ್ಣ ವಿಷಯಗಳಿಗೂ ಕಿರಿಕಿರಿಗೊಳ್ಳುತ್ತೀರಿ. ಹಿಂದೆ ತಮ್ಮ ಹಣವನ್ನು ಹೂಡಿಕೆ ಮಾಡಿದ ಜನರು ಇಂದು ಆ ಹಣದಿಂದ ಲಾಭ ಪಡೆಯುವ ಸಾಧ್ಯತೆಯಿದೆ.

ಧನಸ್ಸು – ನಿಮ್ಮ ಮುಖದಲ್ಲಿ ನಿರಂತರವಾದ ನಗುವಿರುವ ಮತ್ತು ಅಪರಿಚಿತರೂ ಪರಿಚಿತರಂತೆ ತೋರುವ ಒಂದು ದಿನ. ನಿಮ್ಮ ಸೃಜನಶೀಲ ಪ್ರತಿಭೆಯನ್ನು ಸರಿಯಾಗಿ ಬಳಸಿದಲ್ಲಿ ಅದು ಅತ್ಯಂತ ಲಾಭದಾಯಕವೆಂದು ಸಾಬೀತಾಗಬಹುದು.

ಮಕರ – ಇಂದು ನಿಮ್ಮ ಪ್ರಿಯತಮೆ ಉಡುಗೊರೆಗಳ ಜೊತೆ ನಿಮ್ಮ ಸ್ವಲ್ಪ ಸಮಯವನ್ನೂ ಅಪೇಕ್ಷಿಸಬಹುದು. ದಿನ ಉತ್ತಮವಾಗಿದೆ, ಇಂದು ನಿಮಗಾಗಿ ಸಮಯವನ್ನು ತೆಗೆದುಕೊಳ್ಳಿ.

ಕುಂಭ – ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ ಎಂದು ಭರವಸೆ ಇದೆ.

ಮೀನ – ನಿಮ್ಮ ಸಕಾರಾತ್ಮಕ ದೃಷ್ಟಿಕೋನ ನಿಮ್ಮ ಸುತ್ತಲಿನವರನ್ನು ಆಕರ್ಷಿಸಬಹುದು. ನಿಮ್ಮ ಸಮರ್ಪಣೆ ಮತ್ತು ಶ್ರಮವನ್ನು ಗಮನಿಸಲಾಗುತ್ತದೆ ಮತ್ತು ಇಂದು ನಿಮಗೆ ಸ್ವಲ್ಪ ಆರ್ಥಿಕ ಪ್ರತಿಫಲಗಳನ್ನು ತರುತ್ತದೆ.

ವಿಮಾನ ನಿಲ್ದಾಣ: ಕಲಬುರಗಿಯ ಜನರಿಗೆ ಎಎಐನಿಂದ ಸಿಹಿಸುದ್ದಿ

ವಿಮಾನ ನಿಲ್ದಾಣಗಳ ಪ್ರಾಧಿಕಾರ ಕಲಬುರಗಿ ವಿಮಾನ ನಿಲ್ದಾಣದಲ್ಲಿ ಇನ್‌ಸ್ಟ್ರುಮೆಂಟ್ ಲ್ಯಾಂಡಿಂಗ್ ಸ್ಟಿಸ್ಟಮ್ ಬಳಕೆಗೆ ಚಾಲನೆ

• ಉದಯವಾಹಿನಿ ಕಲಬುರಗಿ

ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (ಎಎಐ) ಕಲಬುರಗಿ ಜನರಿಗೆ ಸಿಹಿಸುದ್ದಿಯನ್ನು ನೀಡಿದೆ. ನಗರದ ಸೇಡಂ ರಸ್ತೆಯಲ್ಲಿ ಕಲಬುರಗಿ ವಿಮಾನ ನಿಲ್ದಾಣ ಇದ್ದು, 2022ರಲ್ಲಿ ಲೋಕಾರ್ಪಣೆಗೊಂಡಿದೆ. ವಿಮಾನ ನಿಲ್ದಾಣಗಳ ಪ್ರಾಧಿಕಾರ ಕಲಬುರಗಿ ವಿಮಾನ ನಿಲ್ದಾಣದಲ್ಲಿ ಇನ್‌ಸ್ಟ್ರುಮೆಂಟ್ ಲ್ಯಾಂಡಿಂಗ್ ಸ್ಟಿಸ್ಟಮ್ (ಐಎಲ್‌ಎಸ್) ಬಳಕೆಗೆ ಚಾಲನೆ ನೀಡಿದೆ. ಎಎಐ ಜಂಟಿ ಪ್ರಧಾನ ವ್ಯವಸ್ಥಾಪಕ (ಸಿಎನ್‌ಎಸ್) ಆರ್. ದಿವಾಕರ್ ಈ ಸೌಲಭ್ಯಕ್ಕೆ ಚಾಲನೆ ನೀಡಿದರು.

ಐಎಲ್‌ಎಸ್ ಸೌಲಭ್ಯಕ್ಕೆ ಚಾಲನೆ

ಸುಮಾರು 12.12 ಕೋಟಿ ರೂ. ವೆಚ್ಚ ಮಾಡಿ ಎಐಎ ಕಲಬುರಗಿ ವಿಮಾನ ನಿಲ್ದಾಣದಲ್ಲಿ ಈ ಸೌಲಭ್ಯವನ್ನು ಸ್ಥಾಪಿಸಿದೆ. ಇದರ ಮೂಲಕ ರಾತ್ರಿ ವಿಮಾನ ಲ್ಯಾಂಡ್ ಆಗಲು ಸಹಾಯಕವಾಗುವ ಜೊತೆಗೆ ಪ್ರತಿಕೂಲ ಹವಾಮಾನದಲ್ಲಿಯೂ ವಿಮಾನ ಸುಲಭವಾಗಿ ಭೂಸ್ಪರ್ಶ ಮಾಡಬಹುದಾಗಿದೆ.

ಆರ್. ದಿವಾಕರ್ ಐಎಲ್‌ಎಸ್ ಸೌಲಭ್ಯಕ್ಕೆ ಚಾಲನೆ ನೀಡಿ ಮಾತನಾಡಿ, ಇನ್ನು ಕಲಬುರಗಿ ವಿಮಾನ ನಿಲ್ದಾಣದಲ್ಲಿ ವಿಮಾನಗಳ ಕಾರ್ಯಾಚರಣೆಗೆ ಹೆಚ್ಚಿನ ಅನುಕೂಲವಾಗಲಿದೆ. ಇದು ಈ ಭಾಗದ ಉತ್ತಮ ಸಂಪರ್ಕ ಮತ್ತು ಪ್ರಾದೇಶಿಕ ಆರ್ಥಿಕ ಬೆಳವಣಿಗೆಗೆ ಸಹಾಯಕವಾಗಲಿದೆ ಎಂದರು.

ಕಲಬುರಗಿ ವಿಮಾನ ನಿಲ್ದಾಣ: 2008ರಲ್ಲಿ ಕಲಬುರಗಿ ವಿಮಾನ ನಿಲ್ದಾಣದ ಕಾಮಗಾರಿ ಆರಂಭಗೊಂಡಿತ್ತು. ಆದರೆ ವಿವಿಧ ಕಾರಣಗಳಿಗೆ ಕಾಮಗಾರಿ ವಿಳಂಬಗೊಂಡಿತು. 742 ಎಕರೆ ಬೃಹತ್ ಪ್ರದೇಶದಲ್ಲಿ ಲಘು ವಿಮಾನಗಳು ಸೇರಿದಂತೆ ಏರ್‌ಬಸ್-320 ಸಹ ಲ್ಯಾಂಡ್ ಆಗಲು ಅನುಕೂಲವಾಗುವಂತೆ 3.725 ಕಿ. ಮೀ. ಉದ್ದದ ರನ್‌ವೇಯನ್ನು ಕಲಬುರಗಿ ವಿಮಾನ ನಿಲ್ದಾಣದಲ್ಲಿ ನಿರ್ಮಿಸಲಾಗಿದೆ.

2018ರಲ್ಲಿ ಕಲಬುರಗಿ ವಿಮಾನ ನಿಲ್ದಾಣದಲ್ಲಿ ಲಘು ವಿಮಾನದ ಪ್ರಾಯೋಗಿಕ ಹಾರಾಟ ಯಶಸ್ವಿಯಾಗಿತ್ತು. ಹೈದ್ರಾಬಾದ್‌ನ ಏಶಿಯನ್ ಪೆಸಿಫಿಕ್ ಫ್ಲೈಟ್ ಟ್ರೇನಿಂಗ್ ಅಕಾಡೆಮಿಯ ಡೈಮಂಡ್-40 ಮತ್ತು ಡೈಮಂಡ್-42 ಎಂಬ 4 ಆಸನಗಳ ಎರಡು ಲಘು ವಿಮಾನಗಳು ವಿಮಾನ ನಿಲ್ದಾಣದಲ್ಲಿ ಬಂದಿಳಿಯುವ ಮೂಲಕ ಕಲಬುರಗಿ ಜಿಲ್ಲೆಯ ಜನರ ವಿಮಾನ ಹಾರಾಟದ ಕನಸು ನನಸು ಮಾಡಿದ್ದವು. 2022ರ ನವೆಂಬರ್‌ನಲ್ಲಿ ಅಂದಿನ ಮುಖ್ಯಂತ್ರಿ ಬಿ. ಎಸ್. ಯಡಿಯೂರಪ್ಪ ವಿಮಾನ ನಿಲ್ದಾಣ ಲೋಕಾರ್ಪಣೆ ಮಾಡಿದ್ದರು.

ಉದಯವಾಹಿನಿ ಚಿತ್ರ

ಐಎಲ್‌ಎಸ್ ಸೌಲಭ್ಯದ ಬಗ್ಗೆ ಕಲಬುರಗಿ ವಿಮಾನ ನಿಲ್ದಾಣದ ನಿರ್ದೇಶಕ ಚಿಲಕಾ ಮಹೇಶ ಮಾಹಿತಿ ನೀಡಿದ್ದಾರೆ. ರಡಾರ್ ಆಧಾರಿತ ಐಎಲ್‌ಎಸ್ ಉಪಕರಣವನ್ನು ರಷ್ಯಾದಿಂದ ತರಿಸಲಾಗಿದೆ. ತಡೆ ರಹಿತವಾದ ವಿಮಾನಗಳ ಹಾರಾಟಕ್ಕೆ ಈ ಸೌಲಭ್ಯ ಅನುಕೂಲವಾಗಲಿದೆ

-ಚಿಲಕಾ ಮಹೇಶ

ರಫ್ತುಮೂಲಕ ಜಿಲ್ಲೆ ವಿಶ್ವದಾದ್ಯಂತ ಗಮನ ಸೆಳೆದಿದೆ

ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಕಲಬುರಗಿ ವಿಮಾನ ನಿಲ್ದಾಣ ಕೊಡುಗೆ ನೀಡುತ್ತಿದೆ. ದೇಶಕ್ಕೆ ಶೇ.30 ರಷ್ಟು ತೊಗರಿ ಉತ್ಪಾದಿಸುವ ಮತ್ತು ಸಿಮೆಂಟ್ ರಫ್ತುಮೂಲಕ ಜಿಲ್ಲೆ ವಿಶ್ವದಾದ್ಯಂತ ಗಮನ ಸೆಳೆದಿದೆ. ಈಗ ರಾತ್ರಿಯೂ ಕಲಬುರಗಿಗೆ ವಿಮಾನ ಸಂಚಾರ ಆರಂಭಿಸಲು ಅನುಕೂಲವಾಗಿದ್ದು, ಇನ್ನಷ್ಟು ನಗರದಿಂದ ವಿಮಾನ ಸೇವೆ ಆರಂಭವಾಗುವ ನಿರೀಕ್ಷೆ ಇದೆ.

ಐಎಲ್‌ಎಸ್ ಉಪಕರಣದ ಸಹಾಯದಿಂದ ಮಂಜು ಕವಿದ ವಾತಾವರಣ, ಮಳೆ, ಕಡಿಮೆ ಬೆಳಕಿನಲ್ಲಿಯೂ ಪೈಲೆಟ್‌ಗಳಿಗೆ ನಿಖರವಾದ ತಾಂತ್ರಿಕ ನಿರ್ದೇಶನಗಳು ಸಿಗಲಿವೆ. ಇದರಿಂದಾಗಿ ಲ್ಯಾಂಡ್ ಮಾಡಲು ಅನುಕೂಲವಾಗಲಿದೆ ಎಂದು ಹೇಳಿದರು.

ಉಡಾನ್ ಯೋಜನೆಯಡಿ ವಿಮಾನ ನಿಲ್ದಾಣ ಸೇರ್ಪಡೆಗೊಂಡಿದೆ. ಆದರೆ ಪ್ರತಿಕೂಲ ಹವಾಮಾನ ಮತ್ತು ರಾತ್ರಿಯ ವೇಳೆ ವಿಮಾನ ಲ್ಯಾಂಡ್ ಮಾಡುವ ಸೌಲಭ್ಯ ವಿಮಾನ ನಿಲ್ದಾಣದಲ್ಲಿ ಲಭ್ಯ ವಿರಲಿಲ್ಲ. ಎಎಐ ಈ ಯೋಜನೆಗಾಗಿ 12.12 ಕೋಟಿ ರೂ. ವೆಚ್ಚ ಮಾಡಿದೆ. ಇದು ದೇಶಾದ್ಯಂತ ವಿಮಾನ ಪ್ರಯಾಣಿಕರ ಸುರಕ್ಷತೆ ಮತ್ತು ಹಾರಾಟಕ್ಕೆ ನೀಡುವ ಆದ್ಯತೆಯನ್ನು ಸೂಚಿಸುತ್ತದೆ. ಈ ವ್ಯವಸ್ಥೆಯಿಂದ ಪೈಲೆಟ್ 550 ಮೀಟರ್ ಎತ್ತರದಿಂದ ರನ್ ವೇಯನ್ನು ಸುಲಭವಾಗಿ ನೋಡಬಹುದು. ರನ್ ವೇ ಕೇಂದ್ರ ವಿದ್ಯುತ್ ಜಾಲವು ಸ್ಪಷ್ಟವಾದ ಹಾದಿ ತೋರಿಸಲಿದೆ ಎಂದು ವಿವರಿಸಿದರು.

ಡಿಪ್ಲೊಮಾ ಪ್ರವೇಶಾತಿ: ವಿಶೇಷ ಚೇತನರಿಂದ ಅರ್ಜಿ ಆಹ್ವಾನ

• ಉದಯವಾಹಿನಿ ಚಿತ್ರದುರ್ಗ

ಮೈಸೂರು ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ವತಿಯಿಂದ 2023-24ನೇ ಸಾಲಿಗೆ ಮೂರು ವರ್ಷಗಳ ಅವಧಿಯ ಡಿಪ್ಲೊಮಾ ಕೋರ್ಸುಗಳ ಪ್ರವೇಶಕ್ಕೆ ವಿಶೇಷಚೇತನ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಜೂನ್ 15 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ.

ಅನುದಾನಿತ ಕೋರ್ಸುಗಳಾದ ಆರ್ಕಿಟೆಕ್ಚರ್ ಅಸಿಸ್ಟೆಂಟ್‌ಷಿಪ್, ಕಮರ್ಷಿಯಲ್ ಪ್ರಾಕ್ಟೀಸ್, ಕಂಪ್ಯೂಟರ ಸೈನ್ಸ್ ಮತ್ತು ಇಂಜಿನಿಯರಿಂಗ್ ಹಾಗೂ ಅನುದಾನ ರಹಿತ ಕೋರ್ಸುಗಳಾದ ಜ್ಯುಯಲರಿ ಡಿಸೈನ್ ಮತ್ತು ಟೆಕ್ನಾಲಜಿ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್, ಕಂಪ್ಯೂಟರ್ ಅಪ್ಲಿಕೇಷನ್ಸ್, ಅಪಾರೇಲ್ ಡಿಸೈನ್ ಮತ್ತು ಫ್ಯಾಬ್ರಿಕೇಷನ್ ಟೆಕ್ನಾಲಜಿ ಕೋರ್ಸುಗಳಿಗೆ ವಿಶೇಷಚೇತನರು ಅರ್ಜಿ ಸಲ್ಲಿಸಬಹುದು.

ಪ್ರವೇಶಾರ್ಹತೆ: ಕರ್ನಾಟಕ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಠ ಶೇ.35 ಅಂಕಗಳೊಂದಿಗೆ ತೇರ್ಗಡೆ ಹಾಗೂ ಮೂಳೆ ಮತ್ತು ಕೀಲು ಅಂಗವಿಕಲತೆ ಶೇ.40 ಮತ್ತು ಮೇಲ್ಪಟ್ಟು, ಕಿವುಡು ಮತ್ತು ಮೂಗು ಅಂಗವಿಕಲತೆ 60 ಡಿಬಿ ಮತ್ತು ಮೇಲ್ಪಟ್ಟು, ಭಾಗಶಃ ಮತ್ತು ಪೂರ್ಣ ಅಂಧತ್ವ 6/60 ಅಥವಾ 20/200 ಸ್ನೆಲೆನ್ ಹೊಂದಿರುವವರು ಅರ್ಜಿ ಸಲ್ಲಿಸಬಹುದು.

ಅರ್ಹ ವಿದ್ಯಾರ್ಥಿಗಳಿಗೆ ರಾಜ್ಯ ಮತ್ತು ರಾಷ್ಟ್ರಮಟ್ಟದ ವಿದ್ಯಾರ್ಥಿವೇತನದ ಆರ್ಥಿಕ ಸಹಾಯ ದೊರೆಯುತ್ತದೆ. ಪಾಲಿಟೆಕ್ನಿಕ್‌ನ ಯಶಸ್ವಿ ವಿದ್ಯಾರ್ಥಿಗಳಿಗೆ ಉದ್ಯೋಗ ಮತ್ತು ತರಬೇತಿ ಕೇಂದ್ರದ ಮೂಲಕ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡಲಾಗುತ್ತದೆ. ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಿದ್ಯಾರ್ಥಿ ನಿಲಯದ ಸೌಲಭ್ಯ ಕಲ್ಪಿಸಲಾಗಿದೆ.

ಪ್ರವೇಶಕ್ಕೆ ಅರ್ಜಿಗಳನ್ನು ಸಮಾನ್ಯ ವರ್ಗದ ಅಭ್ಯರ್ಥಿಗಳು ರೂ100/ ಹಾಗೂ SC/ST/C-1 ವರ್ಗದವರಿಗೆ ರೂ 50/ ನಗದು ಅಥಾವಾ ಡಿಡಿ ಮೂಲಕ ಮೈಸೂರಿನಲ್ಲಿ ಸಂದಾಯವಾಗುವಂತೆ ಕಳುಹಿಸಿ ಅರ್ಜಿ ಪಡೆಯಬಹುದು ಅಥಾವಾ ವೆಬ್ ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ ದೂರವಾಣಿ ಸಂಖ್ಯೆ 9844644937 ಗೆ ಸಂಪರ್ಕಿಸಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಜೂನ್ 15 ರೊಳಗೆ ಕಚೇರಿಗೆ ತಲುಪಿಸಬೇಕೆಂದು ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಪ್ರಾಂಶುಪಾಲರು ತಿಳಿಸಿದ್ದಾರೆ.

ಅಂಜಲಿ ಕೊಲೆ ಕೇಸ್: ಅಂತಹ ಮಗ ನನಗೆ ಬೇಡ, ಅವನನ್ನು ನೋಡಲು ಹೋಗಲ್ಲ, ಆರೋಪಿ ವಿಶ್ವತಾಯಿ ಹೇಳಿಕೆ

• ಉದಯವಾಹಿನಿ ಹುಬ್ಬಳ್ಳಿ

ಹುಬ್ಬಳ್ಳಿಯ ವೀರಾಪುರ ಓಣಿಯಲ್ಲಿ ನಸುಕಿನ ಜಾವದಲ್ಲಿ ಅಂಜಲಿ ಅಂಬೀಗೆರ ಎನ್ನುವ ಯುವತಿಯನ್ನು ಪ್ರೀತಿ ನಿರಾಕರಣೆ ಮಾಡಿದ್ದಕ್ಕಾಗಿ ವಿಶ್ವ ಅಲಿಯಾಸ್ ಗಿರೀಶ್ ಸಾವಂತ್ ಎನ್ನುವ ಯುವಕ ಚಾಕುವಿನಿಂದ ಇರಿದು ಭೀಕರವಾಗಿ ಕೊಲೆ ಮಾಡಿದ್ದ. ಇದೀಗ ಆರೋಪಿಯಾಗಿರುವ ವಿಶ್ವ ಅವರ ತಾಯಿ ಶ್ವೇತಾ ಹೇಳಿಕೆ ನೀಡಿದ್ದು, ಅಂತಹ ಮಗ ನನಗೆ ಬೇಕಿಲ್ಲ.ನಾನು ಅವನನ್ನು ನೋಡಲು ಎಲ್ಲಿಯೂ ಹೋಗುವುದಿಲ್ಲ ಎಂದು ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಂಜಲಿ ಅಂಬಿಗೇರ ಕೊಲೆ ಪ್ರಕರಣ ಆರೋಪಿಯ ವಿಶ್ವತಾಯಿ ಶ್ವೇತಾ ಹೇಳಿಕೆ ನೀಡಿದ್ದು, ನನಗೆ ಇವನೊಬ್ಬನೆ ಮಗ

ಉದಯವಾಹಿನಿ ಚಿತ್ರ

ಏನು ಕೆಲಸ ಮಾಡುತ್ತಿದ್ದನು ಗೊತ್ತಿಲ್ಲ. ನ್ಯಾಯಾಲಯ ಅವನಿಗೆ ಏನೂ ಶಿಕ್ಷೆ ಕೊಡುತ್ತದೆಯೋ ಕೊಡಲಿ ಎಂದು ತಿಳಿಸಿದರು.

ನನ್ನ ಮಗ ವಿಶ್ವ ಮಾಡಿದ ತಪ್ಪಿಗೆ ನಾವೆಲ್ಲ ಶಿಕ್ಷೆ ಅನುಭವಿಸುತ್ತಿದ್ದೇವೆ. ಮೊದಲು ವಿಶ್ವ ಚೆನ್ನಾಗಿದ್ದ ನಾಲ್ಕು ವರ್ಷದ ನಂತರ ಹೀಗೆ ಆಗಿದ್ದಾನೆ. ಅಂತಹ ಮಗ ನನಗೆ ಬೇಡ ಅವನನ್ನು ನೋಡಲು ಹೋಗುವುದಿಲ್ಲ ಎಂದು ಹುಬ್ಬಳ್ಳಿಯಲ್ಲಿ ಆರೋಪಿ ವಿಶ್ವತಾಯಿ ಶ್ವೇತಾ ಹೇಳಿಕೆ ನೀಡಿದರು.

ಕ್ಯಾಂಟರ್ ಅಡ್ಡಗಟ್ಟಿ 32 ಲಕ್ಷ ರೂ. ದರೋಡೆ

• ದಯವಾಹಿನಿ ವಿಜಯಪುರ

ಹತ್ತಿ ಮಾರಾಟ ಮಾಡಿದ ಹಣದೊಂದಿಗೆ ವ್ಯಾಪಾರಿಯ ನೌಕರರು ಕ್ಯಾಂಟರ್ ನಲ್ಲಿ ಮರಳುತ್ತಿದ್ದಾಗ ಕ್ಯಾಂಟರ್ ಅಡ್ಡಗಟ್ಟಿ, ಅದರಲ್ಲಿದ್ದ ಇಬ್ಬರ ಕಣ್ಣಿಗೆ ಖಾರದ ಪುಡಿ ಎರಚಿ, ಹಲ್ಲೆ ನಡೆಸಿ 32 ಲಕ್ಷ ರೂ. ಹಣ ದೋಚಿರುವ ದರೋಡೆ ಕೃತ್ಯ ಜಿಲ್ಲೆಯಲ್ಲಿ ನಡೆದಿದೆ.

ಕಲಬುರಗಿ ಜಿಲ್ಲೆಯ ಜೀವರ್ಗಿ ಮೂಲದ ವ್ಯಾಪಾರಿ ಚಂದ್ರಕಾಂತ ಕುಂಬಾರ ಎಂಬವರಿಗೆ ಸೇರಿದ ಹಣ. 32 ಲಕ್ಷ ರೂ. ಹಣ ತರುತ್ತಿದ್ದ ಚಾಲಕ ಮಹಾಂತೇಶ ಕುಂಬಾರ ಹಾಗೂ ಸಹಾಯಕ ಮಲ್ಲಿ ಕೊಡಚಿ ದರೋಡೆಕೋರರಿಂದ ಹಲ್ಲೆಗೊಳಗಾಗಿ ಹಣ ಕಳೆದುಕೊಂಡವರು.

ಧಾರವಾಡ ಬಳಿಯ ಅಮ್ಮಿನಭಾವಿ ಗ್ರಾಮದಲ್ಲಿರುವ ಅರಳೆ ಕಾರ್ಖಾನೆಗೆ ಚಂದ್ರಕಾಂತ ಹತ್ತಿ ಮಾರಾಟ ಮಾಡಿದ್ದರು. ಹತ್ತಿ ಮಾರಾಟದಿಂದ ಬಂದಿದ್ದ 32 ಲಕ್ಷ ರೂ. ಹಣದೊಂದಿಗೆ ಹತ್ತಿ ಸಾಗಿಸಿದ್ದ ಕ್ಯಾಂಟರ್ ನಲ್ಲೇ ಚಾಲಕ ಮಹಾಂತೇಶ, ಸಹಾಯಕ ಮಲ್ಲು ಜೀವರ್ಗಿಗೆ ಮರಳುತ್ತಿದ್ದರು. ಈ ಹಂತದಲ್ಲಿ ವಿಜಯಪುರ ಜಿಲ್ಲೆಯ ಕೊಲ್ಹಾರ ಬಳಿ ಬುಲೆರೋ ವಾಹನದಲ್ಲಿ ಬಂದ ದರೋಡೆಕೋರರು, ಕ್ಯಾಂಟರ್ ಅಡ್ಡಗಟ್ಟಿ, ಕಬ್ಬಿಣದ ರಾಡ್ ಹಾಗೂ ಕಲ್ಲುಗಳಿಂದ ಕ್ಯಾಂಟರ್ ಗಾಜು ಒಡೆದು ವಾಹನ ನಿಲ್ಲಿಸಿದ್ದಾರೆ. ಬಳಿಕ ಮಹಾಂತೇಶ ಹಾಗೂ ಮಲ್ಲು ಅವರ ಕಣ್ಣಿಗೆ ಖಾರದ ಪುಡಿ ಎರಚಿ, ಹಲ್ಲೆ ನಡೆಸಿದ್ದಾರೆ. ಬಳಿಕ 32 ಲಕ್ಷ ರೂ. ಹಣ ದರೋಡೆ ಮಾಡಿ ಪರಾರಿಯಾಗಿದ್ದಾರೆ. ದರೋಡೆಕೋರರಿಂದ ಹಲ್ಲೆಗೊಳಗಾದ ಮಹಾಂತೇಶ, ಮಲ್ಲು ಇಬ್ಬರೂ ತೀವ್ರವಾಗಿ ಗಾಯಗೊಂಡಿದ್ದು, ಕೊಲ್ಹಾರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದಿಯುತ್ತಿದ್ದಾರೆ.

ಉದಯವಾಹಿನಿ ಚಿತ್ರ

ಪ್ರಕರಣ ದಾಖಲು

ಸುದ್ದಿ ತಿಳಿಯುತ್ತಲೇ ವಿಜಯಪುರ ಜಿಲ್ಲೆಯ ಎಸ್ಪಿ ರಿಷಿಕೇಶ ಭಗವಾನ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿದ್ದು, ಕೊಲ್ಹಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಿ, ಪರಾರಿಯಾಗಿರುವ ದರೋಡೆಕೋರರ ಬಂಧನಕ್ಕೆ ಜಾಲ ಬೀಸಿದ್ದಾರೆ.

ಅಂಜಲಿ ಕೊಲೆಗಡಕನಿಗೆ ಎನಕೌಂಟರ್ ಮಾಡಿ : ಭಗವಂತರಾಯ

• ಉದಯವಾಹಿನಿ ಜೀವರ್ಗಿ

ಹುಬ್ಬಳ್ಳಿಯಲ್ಲಿ ನೇಹಾ ಕೊಲೆ ಪ್ರಕರಣ ಜನರ ಮನಸಿನಿಂದ ಮಾಸಿ ಹೋಗುವ ಮುನ್ನ ಕೆಲವೇ ದಿನಗಳ ಒಳಗೆ ಅಂಜಲಿ ಅಂಬಿಗೇರ ಎಂಬ ಯುವತಿಯನ್ನು ಬೆಳಗಿನ ಜಾವದಲ್ಲಿ ವಿಶ್ವಾ ಅಲಿಯಾಸ್ ಗಿರೀಶ ಎಂಬಾತ ಹುಬ್ಬಳ್ಳಿ ನಗರದ ಹೀರಾಪುರ ಗಳ್ಳಿಯಲ್ಲಿ ಅಜ್ಜಿಯ ಜೊತೆ ವಾಸವಾಗಿದ್

ವಿದ್ಯಾರ್ಥಿಗಳು ವಸತಿ ನಿಲಯಗಳ ಒಳಗೇ ಇರುವಂತೆ ಮನವಿ

● ಕಿರ್ಗಿಸ್ತಾನದಲ್ಲಿ ಹಿಂಸಾಚಾರ: ಭಾರತ, ಪಾಕಿಸ್ತಾನ ವಿದ್ಯಾರ್ಥಿಗಳು ಟಾರ್ಗೆಟ್ ಆಗುತ್ತಿರುವುದು ಏಕೆ?

ಬಿಷ್ಕೇಕ್: ಕಳೆದ ಕೆಲವು ದಿನಗಳಿಂದ ಕಿರ್ಗಿಸ್ತಾನದ ರಾಜಧಾನಿ ಬಿಷ್ಕೇಕ್, ಹೊತ್ತಿ ಉರಿಯುತ್ತಿದೆ. ಭಾರತ, ಬಾಂಗ್ಲಾದೇಶ ಮತ್ತು ಪಾಕಿಸ್ತಾನ ಮೂಲದ ವಿದ್ಯಾರ್ಥಿಗಳು ವಾಸ ಇರುವ ಹಾಸ್ಟೆಲ್‌ಗಳನ್ನು ಗುರಿಯಾಗಿಸಿ ಹಿಂಸಾಚಾರಗಳು ನಡೆಯುತ್ತಿವೆ. ಹಿಂಸಾತ್ಮಕ ದಾಳಿಗಳಲ್ಲಿ ಈಗಾಗಲೇ ಪಾಕಿಸ್ತಾನದ ಕೆಲವು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಭಾರತ ಮತ್ತು ಪಾಕಿಸ್ತಾನಗಳು ಕಿರ್ಗಿಸ್ತಾನದಲ್ಲಿರುವ ತಮ್ಮ ಪ್ರಜೆಗಳಿಗೆ ಸೂಚನೆ ಹೊರಡಿಸಿವೆ.

ವಿದೇಶಿ ಪ್ರಜೆಗಳನ್ನು ಗುರಿಯಾಗಿಸಿ ದಾಳಿಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಮನೆಗಳ ಒಳಗೇ ಇರುವಂತೆ ಭಾರತ ತನ್ನ ವಿದ್ಯಾರ್ಥಿಗಳಿಗೆ ಸಲಹೆ ಕೊಟ್ಟಿದೆ. ನಾವು ನಮ್ಮ ವಿದ್ಯಾರ್ಥಿಗಳ ಜತೆ ಸಂಪರ್ಕದಲ್ಲಿದ್ದೇವೆ. ಪರಿಸ್ಥಿತಿ ಸದ್ಯಕ್ಕೆ ತಿಳಿಯಾಗಿದೆ. ಆದರೆ ಈಗಿನ ಸನ್ನಿವೇಶಕ್ಕೆ ವಿದ್ಯಾರ್ಥಿಗಳ ಒಳಗೇ ಇರುವಂತೆ ಹಾಗೂ ಯಾವುದೇ ಸಮಸ್ಯೆ ಬಂದಾಗ ರಾಯಭಾರ ಕಚೇರಿ ಜತೆ ಸಂಪರ್ಕದಲ್ಲಿ ಇರುವಂತೆ ಸಲಹೆ ನೀಡಲಾಗಿದೆ. ನಮ್ಮ 24X7 ಸಂಪರ್ಕ ಸಂಖ್ಯೆ 0555710041 ಎಂದು ಭಾರತೀಯ ಕಾನ್ಸುಲೇಟ್ ಟ್ವೀಟ್ ಮಾಡಿದೆ. ರಾಯಭಾರ ಕಚೇರಿ ಜತೆ ಸಂಪರ್ಕದಲ್ಲಿ ಇರುವಂತೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಕೂಡ ವಿದ್ಯಾರ್ಥಿಗಳಿಗೆ ಸಲಹೆ ನೀಡಿದ್ದಾರೆ. ಪಾಕಿಸ್ತಾನದ ಮೂವರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ ಎಂದು

ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ಪೋಸ್ಟ್ ಮಾಡಿದ್ದಾರೆ. ಆದರೆ ಈ ಬಗ್ಗೆ ತಮಗೆ ಯಾವುದೇ ವರದಿ ಬಂದಿಲ್ಲ ಎಂದು ಸರ್ಕಾರ ತಿಳಿಸಿದೆ.

ಹಿಂಸಾಚಾರ ನಡೆಯಲು ಕಾರಣವೇನು?: ಹಾಸ್ಟೆಲ್ ಒಂದರಲ್ಲಿ ಸ್ಥಳೀಯರು ಮತ್ತು ವಿದೇಶಿ ವಿದ್ಯಾರ್ಥಿಗಳ ನಡುವೆ ನಡೆದ ಜಗಳವೇ ಈ ಹಿಂಸಾಚಾರಕ್ಕೆ ಮೂಲ ಕಾರಣ ಎಂದು ಸ್ಥಳೀಯ ವರದಿಗಳು ತಿಳಿಸಿವೆ. ಪಾಕಿಸ್ತಾನಿಯರು ಮತ್ತು ಈಜಿಪ್ಟಿನ ವಿದ್ಯಾರ್ಥಿಗಳು ಸ್ಥಳೀಯರ ಜತೆ ಮೇ 13ರಂದು ಕೈಕೈ ಮಿಲಾಯಿಸಿದ್ದರು ಎನ್ನಲಾದ ವಿಡಿಯೋಗಳು ವೈರಲ್ ಆಗಿವೆ.

ಇದರ ಬಳಿಕ ಬಿಷ್ಕೇಕ್‌ನ ಬೀದಿಗಳಲ್ಲಿಯೂ ಘರ್ಷಣೆಗಳು ಆರಂಭವಾಗಿವೆ. ಜಗಳದಲ್ಲಿ ಭಾಗಿಯಾದ ವಿದೇಶಿಗರ ವಿರುದ್ಧ ಕ್ರಮ ಕೈಗೊಳ್ಳದೆ ಅವರ ಬಗ್ಗೆ ಮೃದು ಧೋರಣೆ ಅನುಸರಿಸಲಾಗುತ್ತಿದೆ ಎಂದು ಆರೋಪಿಸಿ ಸ್ಥಳೀಯರು ಬೀದಿಗಳಲ್ಲಿ ಗುಂಪುಗೂಡಿ ಪ್ರತಿಭಟನೆಗಳನ್ನು ನಡೆಸಿದ್ದಾರೆ. ಆದರೆ ಗೂಂಡಾಗಿರಿ ಶಂಕೆಯೊಂದಿಗೆ ಮೂವರು ವಿದೇಶಿಗರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಈ ಘಟನೆ ಎಲ್ಲಾ ವಿದೇಶಿಗರನ್ನೂ ಗುರಿ ಯಾಗಿಸಿ ಹಿಂಸಾಚಾರ ನಡೆಸಲು ಪ್ರಚೋದನೆ ನೀಡಿದೆ. ಭಾರತ, ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಪ್ರಜೆಗಳು ನೆಲೆಸಿರುವ ವೈದ್ಯಕೀಯ ವಿಶ್ವವಿದ್ಯಾಲಯಗಳ ಹಾಸ್ಟೆಲ್‌ಗಳಲ್ಲಿ ದಾಂದಲೆಗಳನ್ನು ನಡೆಸಲಾಗುತ್ತಿದೆ. ಮಹಿಳಾ ವಿದ್ಯಾರ್ಥಿಗಳ ಮೇಲೆಯೂ ಹಲ್ಲೆಗಳು ನಡೆದಿದ್ದು, ಅನೇಕರು ಗಾಯಗೊಂಡಿದ್ದಾರೆ ಎಂದು ಪಾಕಿಸ್ತಾನದ ಆಜ್ ನ್ಯೂಸ್ ವರದಿ ಮಾಡಿದೆ.

ಈ ದೇಶದಲ್ಲಿ ಭಾರತದ ಸುಮಾರು 14,500 ಮತ್ತು ಪಾಕಿಸ್ತಾನ 10,000 ವಿದ್ಯಾರ್ಥಿಗಳಿದ್ದಾರೆ. ಕೇಂದ್ರ ಏಷ್ಯಾದ ದೇಶಗಳ ಪೈಕಿ ಅತ್ಯುತ್ತಮ ವೈದ್ಯಕೀಯ ಸವಲತ್ತು, ಶಿಕ್ಷಣ ಮತ್ತು ಸಾರಿಗೆ ವ್ಯವಸ್ಥೆ ಹೊಂದಿರುವ ಕಿರ್ಗಿಸ್ತಾನಕ್ಕೆ ಅಪಾರ ಸಂಖ್ಯೆಯಲ್ಲಿ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳು ತೆರಳಲು ಹಲವು ಕಾರಣಗಳಿವೆ.

ಬಹಳ ಅಗ್ಗದ ಜೀವನ ವೆಚ್ಚ, ಭಾರತೀಯ ಶೈಲಿಯ ಆಹಾರದ ಲಭ್ಯತೆ, ಉತ್ತಮ ವಿದ್ಯಾರ್ಥಿ-ಶಿಕ್ಷಕ ಅನುಪಾತ, ಭಾರತೀಯ ಎಂಬಿಬಿಎಸ್ ವಿದ್ಯಾರ್ಥಿಗಳನ್ನು ಆಕರ್ಷಿಸಲು ಕೆಲವು ಸೌಕರ್ಯಗಳಲ್ಲಿ ಉಚಿತ ಪ್ರವೇಶಾತಿ ಮುಂತಾದವು. ಆದರೆ ಎಲ್ಲಕ್ಕಿಂತ ಮಿಗಿಲಾಗಿ, ಕಿರ್ಗಿಸ್ತಾನದ ಬಹುತೇಕ ವೈದ್ಯಕೀಯ ಸಂಸ್ಥೆಗಳು ಅಂತಾರಾಷ್ಟ್ರೀಯ ಮಾನ್ಯತೆ ಹೊಂದಿವೆ. ಜತೆಗೆ ವಿಶ್ವ ಆರೋಗ್ಯ ಸಂಸ್ಥೆಯೂ ಮಾನ್ಯತೆ ನೀಡಿದೆ. ಇಲ್ಲಿ ರಷ್ಯನ್ ಅಧಿಕೃತ ಭಾಷೆಯಾಗಿದ್ದರೂ, ಶಿಕ್ಷಣವು ಇಂಗ್ಲಿಷ್‌ನಲ್ಲಿ ನಡೆಯುತ್ತದೆ. ಹಾಗೆಯೇ ಇಲ್ಲಿನ ಟ್ಯೂಷನ್ ಶುಲ್ಕ ಕೂಡ ಗಮನಾರ್ಹ. ಕ್ಲಿನಿಕಲ್ ತರಬೇತಿ ಸೇರಿದಂತೆ 5- 6 ವರ್ಷದ ಎಂಬಿಬಿಎಸ್ ಕೋರ್ಸ್, ಕಿರ್ಗಿಸ್ತಾನದಲ್ಲಿ 22 ಲಕ್ಷ ರೂ.ದಲ್ಲಿ ಮುಗಿದು ಹೋಗುತ್ತದೆ.

ಇದು ಆರ್ಥಿಕ ಮುಗ್ಗಟ್ಟು ಉಂಟುಮಾಡಲಿದೆ ಎಂಬ ಆತಂಕ ಸ್ಥಳೀಯರಲ್ಲಿ ಮೂಡಿಸಿದೆ. ಕಿರ್ಗಿಸ್ತಾನವು ರಷ್ಯಾದ ವಿದೇಶಿ ನೇರ ಬಂಡವಾಳ ಹೂಡಿಕೆ ಹಾಗೂ ಕಾರ್ಮಿಕ ವಲಸೆ ವಿನಾಯಿತಿಗಳ ಮೇಲೆ ಬಹಳವಾಗಿ ಅವಲಂಬಿಸಿದೆ. ಉಕ್ರೇನ್ ಯುದ್ಧದ ಕಾರಣದಿಂದ ಹೂಡಿಕೆಯಲ್ಲಿ ಭಾರಿ ಕುಸಿತ ಉಂಟಾಗಿದೆ. ಪಶ್ಚಿಮ ದೇಶಗಳು ಹೇರಿರುವ ನಿರ್ಬಂಧಗಳು ಕಿರ್ಗಿಸ್ತಾನ ಮೂಲದ ಕಂಪೆನಿಗಳಿಗೆ ತೀವ್ರ ಹಾನಿ ಉಂಟುಮಾಡಿವೆ.

ವಲಸಿಗರ ಸಂಖ್ಯೆ ಹೆಚ್ಚಳ

ಉಕ್ರೇನ್ ಯುದ್ಧ ಆರಂಭವಾದಾಗಿನಿಂದ ಕಿರ್ಗಿಸ್ತಾನದಲ್ಲಿ ವಲಸಿಗರ ಸಂಖ್ಯೆ ಹೆಚ್ಚಿದೆ. ಇದರಿಂದ ಸಮಸ್ಯೆಗಳೂ ಹೆಚ್ಚುತ್ತಿವೆ. ದೇಶದಲ್ಲಿ ನೆಲೆಯೂರಲು ರಷ್ಯಾ ಮೂಲದವರು ಮತ್ತು ಅವರ ಕುಟುಂಬಗಳಿಗೆ ಕಿರ್ಗಿಸ್ತಾನವು ಡಿಜಿಟಲ್ ಅಲೆಮಾರಿ ಕಾರ್ಯಕ್ರಮ ಆರಂಭಿಸಿದೆ. ಹಿಂದಿನ ಸೋವಿಯತ್ ಒಕ್ಕೂಟದ ಭಾಗವಾಗಿದ್ದ ಕಿರ್ಗಿಸ್ತಾನ, 1991ರಲ್ಲಿ ಸ್ವತಂತ್ರ ದೇಶವಾಯಿತು. 2022ರ ಜನವರಿಯಿಂದ ಸೆಪ್ಟೆಂಬರ್‌ವರೆಗೆ 1.84 ಲಕ್ಷ ರಷ್ಯನ್ನರು ಕಿರ್ಗಿಸ್ತಾನಕ್ಕೆ ಬಂದಿದ್ದಾರೆ ಎಂದು ಸರ್ಕಾರದ ದಾಖಲೆಗಳು ತಿಳಿಸಿವೆ.

ಭಾರತದಿಂದ ವಿದ್ಯಾರ್ಥಿಗಳು ಹೋಗುವುದೇಕೆ?

ಕಿರ್ಗಿಸ್ತಾನದಲ್ಲಿ ನಡೆದ ಹಿಂಸಾಕೃತ್ಯಗಳು, ದಕ್ಷಿಣ ಏಷ್ಯಾ ಮತ್ತು ರಷ್ಯಾದಿಂದ ವಲಸಿಗರ ಸಂಖ್ಯೆ ಹೆಚ್ಚುತ್ತಿರುವುದರ ಮೇಲೆಯೂ ಬೆಳಕು ಚೆಲ್ಲಿದೆ. ಉನ್ನತ ಮಟ್ಟದ ವೈದ್ಯಕೀಯ ತರಬೇತಿ ಕಾರಣದಿಂದ ದಕ್ಷಿಣ ಏಷ್ಯಾ ದೇಶಗಳ ವಿದ್ಯಾರ್ಥಿಗಳಿಗೆ ಕಿರ್ಗಿಸ್ತಾನ ಅಚ್ಚುಮೆಚ್ಚಿನ ಕಲಿಕಾ ಕೇಂದ್ರವಾಗಿದೆ. ಕೇಂದ್ರ ಏಷ್ಯಾದ ಐದು ದೇಶಗಳ ಪೈಕಿ, ಅತ್ಯಧಿಕ ವಿದೇಶಿ ವಿದ್ಯಾರ್ಥಿಗಳಿಗೆ (61,418) ಆತಿಥ್ಯ ನೀಡಿದ ದೇಶವೆಂದರೆ ಕಿರ್ಗಿಸ್ತಾನ ಎಂದು 2021ರ ವಲಸಿಗರ ದತ್ತಾಂಶ ಪೋರ್ಟಲ್ ತಿಳಿಸಿದೆ.

ಪ್ರಧಾನಿ ಮೋದಿ ನಾಯಕತ್ವಕ್ಕೆ ನಾವು ಆಭಾರಿ

ವಾಷಿಂಗ್ಟನ್: ಮತದಾನದ ಹಕ್ಕನ್ನು ಚಲಾಯಿಸುತ್ತಿರುವ ಭಾರತದ ಜನರನ್ನು ಶ್ಲಾಘಿಸಿರುವ ಶ್ವೇತಭವನವು ಭಾರತಕ್ಕಿಂತ ಹೆಚ್ಚು ರೋಮಾಂಚಕ ಪ್ರಜಾಪ್ರಭುತ್ವಗಳು ಜಗತ್ತಿನಲ್ಲಿ ಇಲ್ಲ ಎಂದು ಅಭಿಪ್ರಾಯಪಟ್ಟಿದೆ.

ಭಾರತಕ್ಕಿಂತ ಹೆಚ್ಚು ರೋಮಾಂಚಕ ಪ್ರಜಾಪ್ರಭುತ್ವಗಳು ಜಗತ್ತಿನಲ್ಲಿಲ್ಲ. ಮತ್ತು ಭಾರತೀಯ ಜನರು ತಮ್ಮ ಮತದಾನದ ಸಾಮರ್ಥ್ಯವನ್ನು ಚಲಾಯಿಸಲು ಮತ್ತು ಅವರ ಭವಿಷ್ಯದ ಸರ್ಕಾರದಲ್ಲಿ ಧ್ವನಿಯನ್ನು ಹೊಂದಲು ನಾವು ಶ್ಲಾಘಿಸುತ್ತೇವೆ. ಮತ್ತು ಪ್ರಕ್ರಿಯೆಯ ಉದ್ದಕ್ಕೂ ನಾವು ಅವರಿಗೆ ಶುಭ ಹಾರೈಸುತ್ತೇವೆ ಎಂದು ಶ್ವೇತಭವನದ ರಾಷ್ಟ್ರೀಯ ಭದ್ರತಾ ಸಂವಹನ ಸಲಹೆಗಾರ ಜಾನ್ ಕಿರ್ಬಿ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಸುದ್ದಿಗಾರರಿಗೆ ತಿಳಿಸಿದರು.

2,660 ನೋಂದಾಯಿತ ರಾಜಕೀಯ ಪಕ್ಷಗಳನ್ನು ಪ್ರತಿನಿಧಿಸುವ ಸಾವಿರಾರು ಅಭ್ಯರ್ಥಿಗಳಿಂದ ಸಂಸತ್ತಿನ 545 ಸದಸ್ಯರನ್ನು ಆಯ್ಕೆ ಮಾಡಲು 969 ಮಿಲಿಯನ್ ಜನರು ಒಂದು ಮಿಲಿಯನ್ ಮತಗಟ್ಟೆಗಳಲ್ಲಿ ತಮ್ಮ ಹಕ್ಕನ್ನು ಚಲಾಯಿಸುತ್ತಿರುವ ಭಾರತದ ಚುನಾವಣೆಗಳ ಕುರಿತ ಪ್ರಶ್ನೆಗೆ ಕಿರ್ಬಿ ಪ್ರತಿಕ್ರಿಯಿಸಿದರು. ಇನ್ನೊಂದು ಪ್ರಶ್ನೆಗೆ ಪ್ರತಿಕ್ರಿಯಿಸಿದ ಕಿರ್ಬಿ, ಬಿಡೆನ್ ಆಡಳಿತದ ಕಳೆದ ಮೂರು ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತ, ಯುಎಸ್ ಸಂಬಂಧವು ಬಲಗೊಂಡಿದೆ ಎಂದು ಹೇಳಿದರು. ಭಾರತದೊಂದಿಗಿನ ನಮ್ಮ ಸಂಬಂಧವು ಅತ್ಯಂತ ನಿಕಟವಾಗಿದೆ ಮತ್ತು ಹತ್ತಿರವಾಗುತ್ತಿದೆ ಎಂದು ಅವರು ಹೇಳಿದರು.

ಇದು ಅತ್ಯಂತ ರೋಮಾಂಚಕ, ಅತ್ಯಂತ ಸಕ್ರಿಯ ಪಾಲುದಾರಿಕೆಯಾಗಿದೆ. ಪ್ರಧಾನಿ ಮೋದಿಯವರ ನಾಯಕತ್ವಕ್ಕೆ ನಾವು ಆಭಾರಿಯಾಗಿದ್ದೇವೆ ಎಂದು ಶ್ವೇತಭವನದ ಅಧಿಕಾರಿ ತಿಳಿಸಿದ್ದಾರೆ. ಭಾರತ ಮತ್ತು ಜಪಾನ್ ಅನ್ಯದ್ವೇಷದ ದೇಶಗಳು ಎಂದು ಅಧ್ಯಕ್ಷ ಜೋ ಬಿಡನ್ ನಂಬುತ್ತಾರೆಯೇ ಎಂದು ಕೇಳಿದಾಗ, ಅವರು ನಕಾರಾತಕವಾಗಿ ಉತ್ತರಿಸಿದರು ಮತ್ತು ಅಧ್ಯಕ್ಷರು ಇತ್ತೀಚೆಗೆ ವಿಶಾಲವಾದ ವಿಷಯವನ್ನು ಮಾಡುತ್ತಿದ್ದಾರೆ

ಜಾನ್ ಕಿರ್ಬಿ

ಮೋದಿ ರಾಜ್ಯ ರಾಜ್ಯಗಳ ನಡುವೆ ಘರ್ಷಣೆ ಹುಟ್ಟು ಹಾಕುತ್ತಿದ್ದಾರೆ; ಸ್ಟಾಲಿನ್

ಚೆನ್ನೈ: ಚುನಾವಣೆ ಗೆಲ್ಲಲು ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಗಳ ನಡುವೆ ಘರ್ಷಣೆಯನ್ನು ಹುಟ್ಟುಹಾಕುವ ಅಗ್ಗದ ತಂತ್ರ ವನ್ನು ಆರಿಸಿಕೊಂಡಿದ್ದಾರೆ ಎಂದು ಡಿಎಂಕೆ ಅಧ್ಯಕ್ಷ ಮತ್ತು ಮುಖ್ಯಮಂತ್ರಿ ಎಂ ಕೆ ಸ್ಟಾಲಿನ್ ಆರೋಪಿಸಿದ್ದಾರೆ. ತಮಿಳುನಾಡು ಸೇರಿದಂತೆ ದಕ್ಷಿಣದ ರಾಜ್ಯಗಳ ನಾಯಕರು ಉತ್ತರ ಪ್ರದೇಶದ ಜನರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ ಎಂಬ ಮೋದಿಯವರ ಕಾಲ್ಪನಿಕ ಕಥೆಗಳು ಮತ್ತು ಸುಳ್ಳಿನ ಚೀಲಗಳು ಎಂದು ಅವರು ಟೀಕಿಸಿದರು. ಕೆಲವು ದಿನಗಳ ಹಿಂದೆ, ಸಮಾಜವಾದಿ ಪಕ್ಷ ಮತ್ತು ಕಾಂಗ್ರೇಸ್‌ನ ದಕ್ಷಿಣದ ಮಿತ್ರಪಕ್ಷಗಳು ಉತ್ತರ ಪ್ರದೇಶ ಮತ್ತು ಸನಾತನ ಧರ್ಮವನ್ನು ಅವಮಾನಿಸಿದವು ಎಂದು ಪಿಎಂ ಮೋದಿ ಚುನಾವಣಾ ರ‍್ಯಾಲಿಯಲ್ಲಿ ಆರೋಪಿಸಿದ್ದರು ಆದರೆ ಎರಡು ಪಕ್ಷಗಳು ಆಗ ಮೌನವಾಗಿದ್ದವು. ತಮಿಳುನಾಡಿನ ಅತಿಥಿ ಕಾರ್ಮಿಕರ ಮೇಲೆ ಮನೀಷ್ ಕಶ್ಯಪ್‌ನಂತಹ ಯೂಟ್ಯೂಬ್‌ಗಳು ಮಾಡಿದ ಸುಳ್ಳು ಹೇಳಿಕೆಗಳಂತಹ ನಕಲಿ ಸುದ್ದಿಗಳನ್ನು ಬೆಂಬಲಿಸುವುದು ಮತ್ತು ಪ್ರೋತ್ಸಾಹಿಸುವುದು ಬಿಜೆಪಿ ಎಂದು ಡಿಎಂಕೆ ಅಧ್ಯಕ್ಷರು ಆರೋಪಿಸಿದ್ದಾರೆ. ಇಂತಹ ನಕಲಿ ಹಕ್ಕುಗಳು ಸಮಾಜದಲ್ಲಿ ವಿಭಜನೆಯನ್ನು ಸೃಷ್ಟಿಸುವ ಉದ್ದೇಶದಿಂದ ದ್ವೇಷದ ಪ್ರಚಾರವಾಗಿದೆ.

ಬಿಹಾರದಿಂದ ಬಂದ ವಲಸೆ ಕಾರ್ಮಿಕರ ಮೇಲೆ ತಮಿಳುನಾಡಿನಲ್ಲಿ ನಡೆದ ದಾಳಿಗಳ ನಕಲಿ ವೀಡಿಯೊಗಳನ್ನು ಪ್ರಸಾರ ಮಾಡಿದ ಆರೋಪದ ಮೇಲೆ ತಮಿಳುನಾಡು ಪೊಲೀಸರು ಕಳೆದ ವರ್ಷ ಕಶ್ಯಪ್ ಅವರನ್ನು ಬಂಧಿಸಿದ್ದರು. ಆ ಪ್ರಕರಣದಲ್ಲಿ ಜೈಲು ಸೇರಿದ್ದ ಕಶ್ಯಪ್ ಕಳೆದ ತಿಂಗಳು ಬಿಜೆಪಿ ಸೇರಿದ್ದರು. ಹಿಂದುಳಿದ ವರ್ಗಗಳು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನರಿಗೆ ಮೀಸಲಾತಿಯ ಮೇಲಿನ ಶೇ. 50 ರ ಮಿತಿಯನ್ನು ತೆಗೆದುಹಾಕುವ ಬಗ್ಗೆ ಮೋದಿ ಮಾತನಾಡಲಿಲ್ಲ ಎಂದು ಸ್ಟಾಲಿನ್ ವಾಗ್ದಾಳಿ ನಡೆಸಿದರು, ಇದು ಉತ್ತರ ಪ್ರದೇಶದ ಜನರಿಗೆ ತುಂಬಾ ಪ್ರಯೋಜನಕಾರಿಯಾಗಿದೆ. ಆದರೆ, ಮೋದಿ ಕೇವಲ ದ್ವೇಷದ ಪ್ರಚಾರದಲ್ಲಿ ಉತ್ಸುಕರಾಗಿದ್ದಾರೆ ಎಂದು ಡಿಎಂಕೆ ಉನ್ನತ ನಾಯಕ ಆರೋಪಿಸಿದ್ದಾರೆ.

ದ್ರಾವಿಡ ಪಕ್ಷದ ಮುಖ್ಯಸ್ಥರು ಅಂಕಿಅಂಶಗಳನ್ನು ಉಲ್ಲೇಖಿಸಿ, ಚೆನ್ನೈ ಮೆಟ್ರೊರೈಲ್‌ಗೆ ಪ್ರೋತ್ಸಾಹವು ಗಮನಾರ್ಹವಾಗಿ ಹೆಚ್ಚಾಗಿದೆ ಮತ್ತು ಕೇಂದ್ರವು ಒಪ್ಪಿಕೊಂಡಂತೆ ರಾಜ್ಯಕ್ಕೆ ಹಣವನ್ನು ಬಿಡುಗಡೆ ಮಾಡದೆ ತಮಿಳುನಾಡು ರಾಜಧಾನಿಯಲ್ಲಿ ಹಂತ ವಿಸ್ತರಣೆಯನ್ನು ಮೋದಿ ಅವರು ಕುಂಠಿತಗೊಳಿಸಿದ್ದಾರೆ ಎಂದು ಆರೋಪಿಸಿದರು.

ಪ್ರಧಾನಿ ಮೋದಿ ಅವರು ಬಸ್, ಮೆಟ್ರೋ ರೈಲು ಸೇವೆಗಳ ಸಂದರ್ಶನದಲ್ಲಿ ಮಾತನಾಡಿದ್ದಾರೆ ಮತ್ತು ಅವರು ತಮಿಳುನಾಡಿಗೆ ನಿರ್ದಿಷ್ಟ ಉಲ್ಲೇಖವನ್ನು ಮಾಡಿದ್ದಾರೆಯೇ ಅಥವಾ ಇಲ್ಲವೇ ಎಂಬುದು ತಿಳಿದಿಲ್ಲ.

ಬಿಜೆಪಿಯ ವಿಭಜಕ ಕನಸುಗಳು ಎಂದಿಗೂ ನನಸಾಗುವುದಿಲ್ಲ

ಸುಳ್ಳು ನಿರೂಪಣೆ ಮತ್ತು ದ್ವೇಷವನ್ನು ಛಿದ್ರಗೊಳಿಸಲಾಗುತ್ತದೆ, ಇಂಡಿಯಾ ಒಕ್ಕೂಟ ಗೆಲ್ಲುತ್ತದೆ ಎಂದು ಸ್ಟಾಲಿನ್ ಹೇಳಿಕೆಯಲ್ಲಿ ತಿಳಿಸಿದ್ದಾರೆ. ದ್ವೇಷದ ಪ್ರಚಾರ ನಿಷ್ಪ್ರಯೋಜಕವಾಗಿರುವುದರಿಂದ ಮೋದಿ ಹತಾಶರಾಗಿದ್ದಾರೆ ಮತ್ತು ಹತ್ತು ವರ್ಷಗಳ ಅಧಿಕಾರಾವಧಿಯಲ್ಲಿ ಜನರಿಗೆ ಹೇಳಲು ಯಾವುದೇ ಸಾಧನೆಗಳಿಲ್ಲ ಎಂದು ಮುಖ್ಯಮಂತ್ರಿ ಹೇಳಿದರು.

ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ನುಸುಳುಕೋರರಿಗೆ ದೀದಿ ಆಶ್ರಯ

ನವದೆಹಲಿ: ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ನುಸುಳುಕೋರರಿಗೆ ಆಶ್ರಯ ನೀಡುತ್ತಿದ್ದಾರೆ ಎಂದು ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ ಗಂಭೀರ ಆರೋಪ ಮಾಡಿದ್ದಾರೆ. ಮಮತಾ ಬ್ಯಾನರ್ಜಿ ಅವರು ನುಸುಳುಕೋರರಿಗೆ ಆಶ್ರಯ ನೀಡುತ್ತಿದ್ದಾರೆ, ಅವರಿಗೆ ಗುರುತಿನ ಚೀಟಿ, ಪಡಿತರ ಚೀಟಿಗಳನ್ನು ನೀಡಿ ಅವರನ್ನು ಮತದಾರರನ್ನಾಗಿ ಮಾಡಿ ದೇಶದ್ರೋಹಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎಂದು ಜೆಪಿ ನಡ್ಡಾ ಆರೋಪಿಸಿದರು. ಪಶ್ಚಿಮ ಬಂಗಾಳದಲ್ಲಿ ಹಿಂಸಾಚಾರವನ್ನು ನಿಲ್ಲಿಸುವ ಮಾರ್ಗಗಳಿಗೆ ಉತ್ತರಿಸಿದ ನಡ್ಡಾ, ಕಾನೂನು ಮತ್ತು ಸುವ್ಯವಸ್ಥೆ ರಾಜ್ಯದ ವಿಷಯವಾಗಿದೆ, ನಾವು ಅವರನ್ನು ಬೆಂಬಲಿಸಬಹುದು ಆದರೆ ಮಮತಾ ಬ್ಯಾನರ್ಜಿ ಅವರ ಉದ್ದೇಶಗಳು ಸ್ಪಷ್ಟವಾಗಿಲ್ಲ. ಅವರ ಉದ್ದೇಶವು ಸಂಶಯಾಸ್ಪದವಾಗಿದೆ ಎಂದಿದ್ದಾರೆ.

ಮಾಧ್ಯಮಕ್ಕೆ ನೀಡಿದ ವಿಶೇಷ ಸಂದರ್ಶನದಲ್ಲಿ ಬಿಜೆಪಿ ಅಧ್ಯಕ್ಷರು ಆಪಾದಿತ ಸಂದೇಶಖಾಲಿ ಘಟನೆಯ ಬಗ್ಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯನ್ನು ತರಾಟೆಗೆ ತೆಗೆದುಕೊಂಡರು, ಅವರ ಮೌನದ ಬಗ್ಗೆ ಪ್ರಶ್ನೆಗಳನ್ನು ಎತ್ತಿದರು. ಸಂದೇಶಖಾಲಿ ಘಟನೆಯು ಬಿಜೆಪಿಯ ಪಿತೂರಿಯಾಗಿದೆ ಎಂಬ ಮಮತಾ ಬ್ಯಾನರ್ಜಿ ಅವರ ಆರೋಪದ ಬಗ್ಗೆ ಕೇಳಿದ ಪ್ರಶ್ನೆಗೆ, ನಡ್ಡಾ ಅವರು, ಅಪ್ರಾಮಾಣಿಕ ಆಡಳಿತಗಾರ, ಅಪ್ರಾಮಾಣಿಕ ರಾಜಕಾರಣಿ, ನಾನು ಮುಖ್ಯಮಂತ್ರಿಯಾಗಿದ್ದರೆ, ಅಂತಹ ಪ್ರಕರಣ ನನಗೆ ಬಂದರೆ, ನಾನು ಹೇಳುತ್ತೇನೆ. ನಾನು ಈ ಬಗ್ಗೆ ತನಿಖೆ ನಡೆಸುತ್ತೇನೆ, ಅವರು ಮೊದಲು ಏಕೆ ಸುಮನಿದ್ದರು, ನಂತರ ಬಿಜೆಪಿಯನ್ನು ಏಕೆ ದೂಷಿಸಿದರು ಎಂದು ಪ್ರಶ್ನಿಸಿದರು.

ಆಕೆ ಮತ ಬ್ಯಾಂಕ್‌ಗಾಗಿ ರಾಷ್ಟ್ರದೊಂದಿಗೆ ರಾಜಿ ಮಾಡಿಕೊಂಡಿದ್ದಾಳೆ. ಟಿಎಂಸಿ ನುಸುಳುಕೋರರಿಗೆ ಆಶ್ರಯ ನೀಡುತ್ತಿದೆ ಮತ್ತು ಅವರಿಗೆ ಗುರುತಿನ ಚೀಟಿ ಮತ್ತು ಪಡಿತರ ಚೀಟಿಗಳನ್ನು ನೀಡಿ ಮತದಾರರನ್ನಾಗಿ ಮಾಡುತ್ತಿದೆ, ಇದು ದೇಶ ವಿರೋಧಿ ಚಟುವಟಿಕೆಯಾಗಿದೆ. ಅವರು ಅಂತಹವರಿಗೆ ರಕ್ಷಣೆ ನೀಡುತ್ತಾರೆ ಎಂದು ಆರೋಪಿಸಿದರು.

ಯಾವುದೇ ಸರ್ಕಾರದಿಂದ ಸಂವಿಧಾನ ಬ

ಸಿಕ್ಸರ್ ಮೂಲಕವೂ ದಾಖಲೆ ಬರೆದ ವಿರಾಟ್

■ ಆರ್‌ಸಿಬಿ 218 ರನ್ ■ ಮನಮೋಹಕ ಬ್ಯಾಟಿಂಗ್ ಮೂಲಕ ಉತ್ತಮ ಆರಂಭ

ಬೆಂಗಳೂರು: ಬದ್ಧ ಎದುರಾಳಿ ಚೆನ್ನೈ ಸೂಪರ್ ಕಿಂಗ್ಸ್ ಎದುರು ಶತಾಯಗತಾಯ 18 ರನ್ ಅಂತರದ ಗೆಲುವು ಸಾಧಿಸಿ ಪ್ಲೇ ಆಫ್‌ಗೇರುವ ಲೆಕ್ಕಾಚಾರದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 218 ರನ್ ಬಾರಿಸಿದೆ. ಆರ್‌ಸಿಬಿ ಪ್ಲೇ ಆಫ್‌ಗೇರಬೇಕಿದ್ದರೇ, ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು 200 ರನ್‌ಗಳೊಳಗಾಗಿ ಕಟ್ಟಿ ಹಾಕಬೇಕಿದೆ. ನಾಯಕ ಫಾಫ್ ಡು ಪ್ಲೆಸಿಸ್ ಸ್ಫೋಟಕ ಅರ್ಧಶತಕ ಸಿಡಿಸಿದರೆ, ವಿರಾಟ್ ಕೊಹ್ಲಿ, ಪಾಟೀದಾರ್ ಹಾಗೂ ಕ್ಯಾಮರೋನ್ ಗ್ರೀನ್ ಜವಾಬ್ದಾರಿಯ ಬ್ಯಾಟಿಂಗ್ ನಡೆಸಿದರು.

ಇಲ್ಲಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಟಾಸ್ ಸೋತರೂ ಮೊದಲು ಬ್ಯಾಟ್ ಮಾಡುವ ಅವಕಾಶ ಪಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಸ್ಫೋಟಕ ಆರಂಭವನ್ನೇ ಪಡೆಯಿತು. ಮೊದಲ ಮೂರು ಓವರ್‌ನಲ್ಲಿ ಆರ್‌ಸಿಬಿ 31 ರನ್‌ಗಳ ಜತೆಯಾಟವಾಡಿತು. ಈ ವೇಳೆ ಪಂದ್ಯಕ್ಕೆ ಕೆಲಕಾಲ ಮಳೆರಾಯ ಅಡ್ಡಿ ಮಾಡಿತು.

ಮಳೆ ನಿಂತ ಬಳಿಕ ಇನಿಂಗ್ಸ್ ಆರಂಭಿಸಿದ ಆರ್‌ಸಿಬಿ ತಂಡದ ರನ್ ವೇಗಕ್ಕೆ ಕಡಿವಾಣ ಹಾಕುವಲ್ಲಿ ಚೆನ್ನೈ ಸ್ಪಿನ್ನರ್‌ಗಳು ಯಶಸ್ವಿಯಾದರು. ಮಿಚೆಲ್ ಸ್ಯಾಂಟ್ನರ್ ಹಾಗೂ ಮಹೀಶ್ ತೀಕ್ಷಣ ಎದುರು ರನ್ ಗಳಿಸಲು ಫಾಫ್ ಹಾಗೂ ವಿರಾಟ್ ಪರದಾಡಿದರು. ಪರಿಣಾಮ ಮೊದಲ ಪವರ್ ಪ್ಲೇನಲ್ಲಿ 6 ಅಂತ್ಯದ ವೇಳೆಗೆ 42 ರನ್ ಗಳಿಸಲಷ್ಟೇ ಶಕ್ತವಾಯಿತು. ಸ್ಪಿನ್ನರ್‌ಗಳು ಪವರ್ ಪ್ಲೇನ ಮೂರು ಓವರ್‌ನಲ್ಲಿ ಕೇವಲ 11 ರನ್ ನೀಡಿದರು.

ಸ್ಪಿನ್ ಹಾಗೂ ಬೌನ್ಸ್ ಆಗುತ್ತಿದ್ದ ಪಿಚ್‌ನಲ್ಲಿ ಮತ್ತೆ ಲಯ ಕಂಡುಕೊಳ್ಳಲು ಆರ್‌ಸಿಬಿ ಬ್ಯಾಟರ್‌ಗಳಿಗೆ ಕೊಂಚ ಸಮಯ ಬೇಕಾಯಿತು. ಬಳಿಕ ಕೊಹ್ಲಿ ಹಾಗೂ ಫಾಫ್ ಸಹಜ ಆಟ ಮುಂದುವರೆಸಿದರು. ಹೀಗಾಗಿ ಮೊದಲ ವಿಕೆಟ್‌ಗೆ ಫಾಫ್ ಹಾಗೂ ಕೊಹ್ಲಿ 9.4 ಓವರ್‌ನಲ್ಲಿ 78 ರನ್‌ಗಳ ಜತೆಯಾಟವಾಡಿದರು. ಆರೆಂಜ್ ಕ್ಯಾಪ್ ಒಡೆಯ ವಿರಾಟ್ ಕೊಹ್ಲಿ 29 ಎಸೆತಗಳನ್ನು ಎದುರಿಸಿ 3 ಬೌಂಡರಿ ಹಾಗೂ 4 ಸಿಕ್ಸರ್ ಸಹಿತ 47 ರನ್ ಬಾರಿಸಿ ಮಿಚೆಲ್ ಸ್ಯಾಂಟ್ನರ್‌ಗೆ ವಿಕೆಟ್ ಒಪ್ಪಿಸಿದರು. ಇನ್ನು ವಿರಾಟ್ ಕೊಹ್ಲಿ ವಿಕೆಟ್ ಪತನದ ಬಳಿಕ ಆಕ್ರಮಣಕಾರಿ ಆಟವಾಡಿದ ನಾಯಕ ಫಾಫ್ ಡು ಪ್ಲೆಸಿಸ್ ಕೇವಲ 35 ಎಸೆತಗಳನ್ನು ಎದುರಿಸಿ ಈ ಆವೃತ್ತಿಯಲ್ಲಿ 4ನೇ ಅರ್ಧಶತಕ ಸಿಡಿಸಿದರು. ಮಹತ್ವದ ಪಂದ್ಯದಲ್ಲಿ ನಾಯಕನ ಆಟವಾಡಿದ ಫಾಫ್ 39 ಎಸೆತಗಳನ್ನು ಎದುರಿಸಿ ತಲಾ ಮೂರು ಬೌಂಡರಿ ಹಾಗೂ ಸಿಕ್ಸರ್‌ಗಳ ನೆರವಿನಿಂದ 54 ರನ್ ಗಳಿಸಿ ರನೌಟ್ ಆಗಿ ಪೆವಿಲಿಯನ್ ಸೇರಿದರು.

ಮತ್ತೆ ಸಿಡಿದ ಪಾಟೀದಾರ್-ಗ್ರೀನ್: ನಾಯಕ ಫಾಫ್ ವಿಕೆಟ್ ಪತನದ ಬಳಿಕ ಮೂರನೇ ವಿಕೆಟ್‌ಗೆ ಜತೆಯಾದ ಕ್ಯಾಮರೋನ್ ಗ್ರೀನ್ ಹಾಗೂ ರಜತ್ ಪಾಟೀದಾರ್ ಸ್ಫೋಟಕ ಜತೆಯಾಟವಾಡುವ ಮೂಲಕ ಆರ್‌ಸಿಬಿ ತಂಡಕ್ಕೆ ಆಸರೆಯಾದರು. ಚೆನ್ನೈ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಈ ಜೋಡಿ ಕೇವಲ 28 ಎಸೆತಗಳಲ್ಲಿ 71 ರನ್‌ಗಳ ಜತೆಯಾಟವಾಡಿತು. ಮತ್ತೊಮ್ಮೆ ಸ್ಫೋಟಕ ಬ್ಯಾಟಿಂಗ್ ನಡೆಸಿದ ಪಾಟೀದಾರ್ ಕೇವಲ 23 ಎಸೆತಗಳನ್ನು ಎದುರಿಸಿ 2 ಬೌಂಡರಿ ಹಾಗೂ 4 ಸಿಕ್ಸರ್ ಸಹಿತ 41 ರನ್ ಸಿಡಿಸಿ ಶಾರ್ದೂಲ್ ಠಾಕೂರ್‌ಗೆ ವಿಕೆಟ್ ಒಪ್ಪಿಸಿದರು.

ವಿರಾಟ್ ಬ್ಯಾಟಿಂಗ್ ಅಬ್ಬರ

ಕಿಂಗ್ ಖ್ಯಾತಿಯ ವಿರಾಟ್ ಕೊಹ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ 4 ಸಿಕ್ಸರ್ ಬಾರಿಸುವ ಮೂಲಕ ಈ ಬಾರಿಯ ಐಪಿಎಲ್‌ನಲ್ಲಿ ಅತ್ಯಧಿಕ ಸಿಕ್ಸರ್ ಬಾರಿಸಿದ ಆಟಗಾರರ ಪಟ್ಟಿಯಲ್ಲಿ ಜಂಟಿ ಅಗ್ರಸ್ಥಾನ ಪಡೆದಿದ್ದಾರೆ. ಕೊಹ್ಲಿ ಈ ಬಾರಿ ಒಟ್ಟು 36 ಸಿಕ್ಸರ್ ಬಾರಿಸಿದ್ದಾರೆ. ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಆಹ್ವಾನ ಪಡೆದ ಆರ್‌ಸಿಬಿಗೆ ವಿರಾಟ್ ಕೊಹ್ಲಿ ತಮ್ಮ ಮನಮೋಹಕ ಬ್ಯಾಟಿಂಗ್ ಮೂಲಕ ಉತ್ತಮ ಆರಂಭ ಒದಗಿಸಿದರು. 29 ಎಸೆತಗಳಿಂದ 47 ರನ್ ಗಳಿಸಿ ಔಟಾಗುವ ಮೂಲಕ ಕೇವಲ 3 ಅಂತರದಿಂದ ಅರ್ಧಶತಕದಿಂದ ವಂಚಿತರಾದರು. ಅವರ ಈ ಬ್ಯಾಟಿಂಗ್ ಇನಿಂಗ್ಸ್‌ನಲ್ಲಿ 3 ಬೌಂಡರಿ ಮತ್ತು 4 ಸಿಕ್ಸರ್ ದಾಖಲಾಯಿತು.

ಬಿಗಿ ಭದ್ರತೆ ಕೈಗೊಂಡ ವಿಂಡೀಸ್ ಕ್ರಿಕೆಟ್ ಮಂಡಳಿ

ಸಾಂಪ್ರದಾಯಿಕ ಬದ್ಧ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯ ಜೂನ್ 9 ರಂದು ನ್ಯೂಯಾರ್ಕ್‌ನಲ್ಲಿ ನಡೆಯಲ್ಲಿದೆ. ಭಾರತ ತನ್ನ ಮೊದಲ ಪಂದ್ಯವನ್ನು ಜೂನ್ 5 ರಂದು ಐರ್ಲೆಂಡ್ ವಿರುದ್ಧ ಆಡಲಿದೆ.

ಇದೇ ಜೂನ್ 1ರಿಂದ ಅಮೆರಿಕ ಮತ್ತು ವೆಸ್ಟ್ ಇಂಡೀಸ್ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ಐಸಿಸಿ ಪುರುಷರ ಟಿ20 ವಿಶ್ವಕಪ್ ಪಂದ್ಯಾವಳಿಗೆ ಕೆಲವು ದಿನಗಳ ಹಿಂದೆ ಪಾಕಿಸ್ತಾನದ ಉಗ್ರರಿಂದ ದಾಳಿಯ ಬೆದರಿಕೆಯೊಂದು ಬಂದಿತ್ತು. ಇದೀಗ ವೆಸ್ಟ್ ಇಂಡೀಸ್ ಕ್ರಿಕೆಟ್ ಮಂಡಳಿ ಕಟ್ಟುನಿಟ್ಟಾದ ಭದ್ರತಾ ಕ್ರಮಗಳನ್ನು ತೆಗೆದುಕೊಂಡಿದೆ. ಭದ್ರತಾ ಸಿಬ್ಬಂದಿಗಳು ಕೆನ್ಸಿಂಗ್ಟನ್ ಓವಲ್‌ಕ್ರಿಕೆಟ್ ಮೈದಾನ, ಬಾರ್ಬಡೋಸ್‌ನಲಿ ಅಣುಕು ಪ್ರದರ್ಶನ ಮಾಡುತ್ತಿರುವ ಫೋಟೊ ವೈರಲ್ ಆಗಿದೆ.ಪ್ರೊ-ಇಸ್ಲಾಮಿಕ್ ಸ್ಟೇಟ್ (ಐಎಸ್)ನಿಂದ ಭದ್ರತಾ ಬೆದರಿಕೆ ಬಂದಿತ್ತು. ಇದೇ ವಿಚಾರವಾಗಿ ಅಂದು ಮಾತನಾಡಿದ್ದ ಕ್ರಿಕೆಟ್ ವೆಸ್ಟ್ ಇಂಡೀಸ್‌ನ ಸಿಇಒ ಜಾನಿ ಗ್ರೇವ್ಸ್, ಐಸಿಸಿ ಪುರುಷರ ಟಿ20 ವಿಶ್ವಕಪ್‌ನಲ್ಲಿ ಪ್ರತಿಯೊಬ್ಬರ ಸುರಕ್ಷತೆ ನಮ್ಮ ಮೊದಲ ಆದ್ಯತೆಯಾಗಿದೆ ಮತ್ತು ನಾವು ಸಮಗ್ರ ಮತ್ತು ದೃಢವಾದ ಭದ್ರತಾ ಯೋಜನೆಯನ್ನು ಹೊಂದಿದ್ದೇವೆ ಎಂದು ನಾವು ಎಲ್ಲ ಪಾಲುದಾರರಿಗೆ ಭರವಸೆ ನೀಡಲು ಬಯಸುತ್ತೇವೆ ಎಂದು ಹೇಳಿದ್ದರು. ಈ ಮಾತಿಗೆ ತಕ್ಕಂತೆ ಇದೀಗ ವಿಶ್ವಕಪ್ ಪಂದ್ಯಾವಳಿಗಳು ನಡೆಯುವ ಸ್ಟೇಡಿಯಂಗಳಲ್ಲಿ ಭಾರೀ ಭದ್ರತೆ ಮಾಡಲಾಗಿದೆ. ವೆಸ್ಟ್ ಇಂಡೀಸ್‌ನಲ್ಲಿ ಆಂಟಿಗುವಾ ಬಾರ್ಬುಡಾ, ಬಾರ್ಬಡೋಸ್, ಗಯಾನಾ, ಸೇಂಟ್ ಲೂಸಿಯಾ, ಸೇಂಟ್ ವಿನ್ಸೆಂಟ್ ಮತ್ತು ಗ್ರೆನಡೈನ್ಸ್, ಟ್ರಿನಿಡಾಡ್ ಮತ್ತು ಟೊಬಾಗೊ ಸೇರಿದಂತೆ ಆರು ಸ್ಥಳಗಳಲ್ಲಿ ಟಿ20 ವಿಶ್ವಕಪ್ ಪಂದ್ಯಗಳು ಆಯೋಜನೆಗೊಂಡಿದೆ. ಟೂರ್ನಿಯಲ್ಲಿ ಒಟ್ಟು 55 ಪಂದ್ಯಗಳು ನಡೆಯಲಿವೆ. ಜೂನ್ 1ರಿಂದ 18ರವರೆಗೆ ಗುಂಪು ಹಂತದಲ್ಲಿ 40 ಪಂದ್ಯಗಳು ನಡೆಯಲಿವೆ. ಜೂನ್ 19 ರಿಂದ 24 ರವರೆಗೆ ಸೂಪರ್ 8 ಪಂದ್ಯಗಳು ನಡೆಯಲಿವೆ.

ಸಾಂಪ್ರದಾಯಿಕ ಬದ್ಧ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯ ಜೂನ್ 9 ರಂದು ನ್ಯೂಯಾರ್ಕ್‌ನಲ್ಲಿ ನಡೆಯಲ್ಲಿದೆ. ಭಾರತ ತನ್ನ ಮೊದಲ ಪಂದ್ಯವನ್ನು ಜೂನ್ 5 ರಂದು ಐರ್ಲೆಂಡ್ ವಿರುದ್ಧ ಆಡಲಿದೆ. ಟಿ20 ವಿಶ್ವಕಪ್‌ಗಾಗಿ ಟೀಮ್ ಇಂಡಿಯಾದ ಮೊದಲ ಬ್ಯಾಚ್ ಮೇ 25ರಂದು ನ್ಯೂಯಾರ್ಕ್‌ಗೆ ಪ್ರಯಾಣಿಸಲಿದೆ. ಈ ಬ್ಯಾಚ್‌ನಲ್ಲಿ ನಾಯಕ ರೋಹಿತ್ ಶರ್ಮಉಪನಾಯಕ ಹಾರ್ದಿಕ್ ಪಾಂಡ್ಯ, ರಿಷಭ್ ಪಂತ್, ಜಸ್‌ಪ್ರೀತ್ ಬುಮ್ರಾ, ಸೂರ್ಯಕುಮಾರ್ ಯಾದವ್ ಸೇರಿ ಐಪಿಎಲ್ ಪ್ಲೇ ಆಫ್‌ನಿಂದ ಹೊರಬಿದ್ದ ತಂಡದ ಆಟಗಾರರು ಪ್ರಯಾಣಿಸಲಿದ್ದಾರೆ. ಉಳಿದ ಆಟಗಾರರು ಮೇ 26 ಐಪಿಎಲ್ ಫೈನಲ್ ಬಳಿಕ ವಿಮಾನ ಏರಲಿದ್ದಾರೆ. ಒಟ್ಟು 2 ಬ್ಯಾಚ್‌ಗಳಾಗಿ ಭಾರತೀಯ ಆಟಗಾರರು ಪ್ರಯಾಣಿಸಲಿದ್ದಾರೆ.

ನ್ಯೂಯಾರ್ಕ್‌ಗೆ ತೆರಳಲಿದೆ ಟೀಮ್ ಇಂಡಿಯಾದ ಮೊದಲ ಬ್ಯಾಚ್

ಜೂನ್ 19 ರಿಂದ 24 ರವರೆಗೆ ಸೂಪರ್ 8 ಪಂದ್ಯಗಳು ನಡೆಯಲಿವೆ. ಸಾಂಪ್ರದಾಯಿಕ ಬದ್ಧ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯ ಜೂನ್ 9 ರಂದು ನ್ಯೂಯಾರ್ಕ್‌ನಲ್ಲಿ ನಡೆಯಲಿದೆ.

ಮುಂದಿನ ತಿಂಗಳು ಅಮೆರಿಕ ಮತ್ತು ವೆಸ್ಟ್ ಇಂಡೀಸ್ ಜಂಟಿ ಆತಿಥ್ಯದಲ್ಲಿ ನಡೆಯುವ ಟಿ20 ವಿಶ್ವಕಪ್‌ಗಾಗಿ ಟೀಮ್ ಇಂಡಿಯಾದ ಮೊದಲ ಬ್ಯಾಚ್ ಮೇ 25ರಂದು ನ್ಯೂಯಾರ್ಕ್‌ಗೆ ಪ್ರಯಾಣಿಸಲಿದೆ. ಈ ಬ್ಯಾಚ್‌ನಲ್ಲಿ ನಾಯಕ ರೋಹಿತ್ ಶರ್ಮ , ಉಪನಾಯಕ ಹಾರ್ದಿಕ್ ಪಾಂಡ್ಯ, ರಿಷಭ್ ಪಂತ್, ಜಸ್‌ಪ್ರೀತ್ ಬುಮ್ರಾ, ಸೂರ್ಯಕುಮಾರ್ ಯಾದವ್ ಸೇರಿ ಐಪಿಎಲ್ ಪ್ಲೇ ಆಫ್‌ನಿಂದ ಹೊರಬಿದ್ದ ತಂಡದ ಆಟಗಾರರು ಪ್ರಯಾಣಿಸಲಿದ್ದಾರೆ. ಉಳಿದ ಆಟಗಾರರು ಮೇ 26 ಐಪಿಎಲ್ ಫೈನಲ್ ಬಳಿಕ ವಿಮಾನ ಏರಲಿದ್ದಾರೆ. ಒಟ್ಟು 2 ಬ್ಯಾಚ್

ಗಳಾಗಿ ಭಾರತೀಯ ಆಟಗಾರರು ಪ್ರಯಾಣಿಸಲಿದ್ದಾರೆ.

ಮೂಲ ವೇಳಾಪಟ್ಟಿಯ ಪ್ರಕಾರ ಭಾರತ ತಂಡದ ಆಟಗಾರರು ಮೇ 21ರಂದು ನ್ಯೂಯಾರ್ಕ್‌ಗೆ ತೆರಳಬೇಕಿತ್ತು. ಆದರೆ ಐಪಿಎಲ್ ಟೂರ್ನಿಯಿಂದಾಗಿ ಇದು ಸಾಧ್ಯವಾಗಲಿಲ್ಲ. ಇದು ಮಾತ್ರವಲ್ಲದೆ ಭಾರತ ಏಕೈಕ ಅಭ್ಯಾಸ ಪಂದ್ಯ ಮಾತ್ರ ಆಡಲಿದೆ. ಭಾರತೀಯ ಆಟಗಾರರು ವ್ಯಾಪಕ ಪ್ರಯಾಣ ಮತ್ತು ಐಪಿಎಲ್‌ನಿಂದ ದಣಿದಿರುವ ಕಾರಣ ಕೇವಲ ಒಂದು ಅಭ್ಯಾಸ ಪಂದ್ಯಕ್ಕೆ ಮೊರೆ ಹೋಗಿದ್ದಾರೆ. ಜೂನ್ 1 ರಂದು ಬಾಂಗ್ಲಾದೇಶ ವಿರುದ್ಧ ಭಾರತ ಈ ಪಂದ್ಯವನ್ನು ಆಡಲಿದೆ. ಅಭ್ಯಾಸ ಪಂದ್ಯಗಳು ಮೇ 27ರಿಂದ ಜೂನ್ 1ರವರೆಗೆ ನಡೆಯಲಿದೆ.

ಭಾರತ ತನ್ನ ಮೊದಲ ಲೀಗ್ ಪಂದ್ಯವನ್ನು ಜೂನ್ 5 ರಂದು ಐರ್ಲೆಂಡ್ ವಿರುದ್ಧ ಆಡಲಿದೆ. ಭಾರತವು ತನ್ನ ಗುಂಪು ಹಂತದ ಎಲ್ಲಾ ಪಂದ್ಯಗಳನ್ನು ಅಮೆರಿಕದಲ್ಲೇ ಆಡಲಿದೆ. ಲೀಗ್ ಮುಕ್ತಾಯದ ಬಳಿಕ ಮುಂದಿನ ಹಂತಕ್ಕೆ ಅರ್ಹತೆ ಪಡೆದರೆ, ಸೂಪರ್ 8 ಪಂದ್ಯಗಳನ್ನು ಸಹ ಇಲ್ಲೇ ಆಡಲಿದೆ. ಟೂರ್ನಿಯಲ್ಲಿ ಒಟ್ಟು 55 ಪಂದ್ಯಗಳು ನಡೆಯಲಿವೆ. ಜೂನ್ 1ರಿಂದ 18ರವರೆಗೆ ಗುಂಪು ಹಂತದಲ್ಲಿ 40 ಪಂದ್ಯಗಳು ನಡೆಯಲಿವೆ. ಜೂನ್ 19 ರಿಂದ 24 ರವರೆಗೆ ಸೂಪರ್ 8 ಪಂದ್ಯಗಳು ನಡೆಯಲಿವೆ. ಸಾಂಪ್ರದಾಯಿಕ ಬದ್ಧ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯ ಜೂನ್ 9 ರಂದು ನ್ಯೂಯಾರ್ಕ್‌ನಲ್ಲಿ ನಡೆಯಲಿದೆ.

ಕಂಗುವ ಚಿತ್ರದ ದೃಶ್ಯವೊಂದರಲ್ಲಿ ಹತ್ತು ಸಾವಿರ ಜನ ಜ್ಯೂನಿಯರ್ಸ್

ತಮಿಳಿನ ಸ್ಟಾರ್ ನಟ ಸೂರ್ಯ ಸೂರರೈ ಪೊಟ್ರು, ಜೈ ಭೀಮ್ ಸಿನಿಮಾಗಳ ಸಕ್ಸಸ್ ನಂತರ ಈಗ 'ಕಂಗುವ' ಸಿನಿಮಾದ ಮೂಲಕ ಅಬ್ಬರಿಸಲು ಸಜ್ಜಾಗಿದ್ದಾರೆ. ಈ ಸಿನಿಮಾದ ದೃಶ್ಯವೊಂದಕ್ಕೆ ಹತ್ತು ಸಾವಿರ ಜನ ಜ್ಯೂನಿಯರ್ಸ್ ಬಳಕೆಯಾಗಿದ್ದಾರಂತೆ. ಈ ದೃಶ್ಯದಲ್ಲಿ ಬಾಬಿ ಡಿಯೋಲ್ ಮತ್ತು ಸೂರ್ಯ ಎದುರಾಗಿದ್ದಾರೆ. ಇದೊಂದು ಹೊಡೆದಾಟದ ಸನ್ನಿವೇಶವಂತೆ. ಇದೊಂದು ಸಾಹಸ ಪ್ರಧಾನ ಸಿನಿಮಾವಾಗಿದ್ದು, ಈ ಚಿತ್ರದಲ್ಲಿ ಡಬಲ್ ರೋಲ್‌ನಲ್ಲಿ ನಟಿಸಿರುವ ಬಗ್ಗೆ ಸೂರ್ಯ ಬಿಗ್ ಅಪ್‌ಡೇಟ್‌ವೊಂದನ್ನು ನೀಡಿದ್ದಾರೆ. ಅದರ ಪೋಸ್ಟರ್ ಕೂಡ ನಟ ಹಂಚಿಕೊಂಡಿದ್ದಾರೆ. ಇದೀಗ 'ಕಂಗುವ' ಸಿನಿಮಾದಲ್ಲಿ ಡಿಫರೆಂಟ್ ಲುಕ್‌ನಲ್ಲಿ ಗಮನ ಸೆಳೆಯುತ್ತಿದ್ದಾರೆ. ಎರಡು ತದ್ವಿರುದ್ಧ ಪಾತ್ರಕ್ಕೆ ಜೀವ ತುಂಬಿದ್ದಾರೆ. ಒಂದರಲ್ಲಿ ಪುರಾತನ ಕಾಲದ ವ್ಯಕ್ತಿಯಂತೆ ಕಾಣಿಸಿಕೊಂಡಿದ್ದಾರೆ, ಇನ್ನೊಂದರಲ್ಲಿ ಗನ್ ಹಿಡಿದು ಸ್ಟೈಲೀಶ್ ಆಗಿ ಕಾಣಿಸಿಕೊಂಡಿದ್ದಾರೆ. ಎರಡರಲ್ಲಿ ಒಂದು ಪಾತ್ರಕ್ಕೆ ನೆಗೆಟಿವ್ ಶೇಡ್ ಇದ್ಯಾ ಎಂದು ಅಭಿಮಾನಿಗಳು ಅನುಮಾನ ವ್ಯಕ್ತಪಡಿಸಿದ್ದಾರೆ. ಚಿತ್ರದ ಪೋಸ್ಟರ್ ಮೆಚ್ಚುಗೆಯ ಜೊತೆ ಚರ್ಚೆ ಕೂಡ ಶುರುವಾಗಿದೆ.

'ಕಂಗುವ' ಚಿತ್ರವು ಹಲವು ಭಾಷೆಗಳಲ್ಲಿ ಏಕಕಾಲಕ್ಕೆ ಬಿಡುಗಡೆಯಾಗುತ್ತಿರುವುದರಿಂದ ಎಲ್ಲಾ ಭಾಷೆಗಳಿಗೂ ಕನೆಕ್ಟ್ ಆಗುವಂತಹ ಶೀರ್ಷಿಕೆಯೊಂದರ ಹುಡುಕಾಟದಲ್ಲಿ ಚಿತ್ರತಂಡ ಇತ್ತು. ಆ ಶೀರ್ಷಿಕೆ ಕೊನೆಗೂ ಸಿಕ್ಕಿದ್ದು, 'ಕಂಗುವ' ಎಂದರೆ, ಬೆಂಕಿಯ ಶಕ್ತಿಯುಳ್ಳವನು ಎಂದರ್ಥ.

ಇಲ್ಲಿ ನಾಯಕ ಒಬ್ಬ ಸೂಪರ್ ಹೀರೋ ಆಗಿದ್ದು, ಹಲವು ಅವತಾರಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ಈ ಸಿನಿಮಾದಲ್ಲಿ ಸೂರ್ಯಗೆ ನಾಯಕಿಯಾಗಿ ದಿಶಾ ಪಟಾನಿ ನಟಿಸಿದ್ದಾರೆ. 'ಅನಿಮಲ್' ಚಿತ್ರದ ವಿಲನ್ ಬಾಬಿ ಡಿಯೋಲ್ ಕೂಡ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ. 10 ಭಾಷೆಗಳಲ್ಲಿ ಈ ವರ್ಷ ಸಿನಿಮಾ ರಿಲೀಸ್ ಆಗುವ ಬಗ್ಗೆ ಸೂರ್ಯ ಮಾಹಿತಿ ನೀಡಿದ್ದಾರೆ. ಆದರೆ ಎಂಬುದು ನಿಗದಿ ಪಡಿಸಿಲ್ಲ. ಈ ಚಿತ್ರ 3ಆ ವರ್ಷನ್‌ನಲ್ಲಿಯೂ ಕೂಡ ರಿಲೀಸ್ ಆಗುತ್ತಿದೆ.

ನೊಂದುಕೊಂಡು ಪೋಸ್ಟ್ ಮಾಡಿದ ನಿಶ್ವಿಕಾ

ನಟಿ ನಿಶ್ವಿಕಾ ನಾಯ್ಡುಗೆ ನಾಳೆ ಹುಟ್ಟು ಹಬ್ಬದ ಸಂಭ್ರಮ. ಆದರೆ ಈ ಬಾರಿ ಅವರು ತಮ್ಮ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುವುದಿಲ್ಲವಂತೆ. ಹಾಗಂತ ಅವರೇ ಪೋಸ್ಟ್ ಮಾಡಿದ್ದಾರೆ. ವೈಯಕ್ತಿಕ ಜೀವನದಲ್ಲಿ ಭಾವನೆಗಳು ಏರುಪೇರಾದ ಕಾರಣದಿಂದಾಗಿ ಅವರು ಇಂಥದ್ದೊಂದು ನಿರ್ಧಾರ ತೆಗೆದುಕೊಂಡಿದ್ದಾರೆ. ಈ ವರ್ಷ ನನ್ನ ಜೀವನದಲ್ಲಿ ವೈಕ್ತಿಕವಾಗಿ ಭಾವನೆಗಳಲ್ಲಿ ಏರುಪೇರಾಗಿದೆ. ನನ್ನ ಲಿಯೋ ಇತ್ತೀಚೆಗೆ ನಮ್ಮನ್ನು ಬಿಟ್ಟು ಹೊರಟು ಬಿಟ್ಟು. ಈ ಆಕಸ್ಮಿಕ ಘಟನೆ ನನ್ನ ಜೀವನಕ್ಕೆ ಮತ್ತು ಭಾವನೆಗೆ ತುಂಬಾ ನೋವನ್ನುಂಟು ಮಾಡಿದೆ. ಹಾಗಾಗಿ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿಲ್ಲ ಎಂದು ಅವರು ಪೋಸ್ಟ್ ಮಾಡಿದ್ದಾರೆ. ಯಾರೂ ನನ್ನ ಮನೆ ಹತ್ತಿರ ಬರಬೇಡಿ. ಭೇಟಿ ಮಾಡಬೇಡಿ. ಉಡುಗೊರೆ ತರಬೇಡಿ. ಇದ್ದಲ್ಲೇ ನನಗೆ ವಿಶ್ ಮಾಡಿ, ಹಾರೈಸಿ ಎಂದು ಅವರು ಕೇಳಿಕೊಂಡಿದ್ದಾರೆ. ನಿಶ್ವಿಕಾ ಸದ್ಯ ರಿಯಾಲಿಟಿ ಶೋವೊಂದರ ನಿರ್ಣಾಯಕಿಯಾಗಿ ಕೆಲಸ ಮಾಡುತ್ತಿದ್ದಾರೆ.

ವೈಯಕ್ತಿಕ ಜೀವನದಲ್ಲಿ ಏರುಪೇರಾಗಿದೆ

ಗರ್ಭಿಣಿ ಮಿಲನಾ ನಾಗರಾಜ್ ಧರಿಸಿರುವ ಕ್ರಶ್ಡ್ ಅನಾರ್ಕಲಿ ಬಾರ್ಡರ್ ಗೌನ್‌ನ ಏನು

ಕ್ರಶ್ಡ್ ಅನಾರ್ಕಲಿ ಗೌನ್‌ನಲ್ಲಿ ಆಕರ್ಷಕವಾಗಿ ಕಾಣಿಸಿಕೊಂಡಿರುವ ನಟಿ ಮಿಲನಾ ನಾಗರಾಜ್ ಟ್ರೆಡಿಷನಲ್ ಲುಕ್‌ನಲ್ಲಿ ಮಹಿಳೆಯರ ಗಮನ ಸೆಳೆದಿದ್ದಾರೆ. ಅಂದ ಹಾಗೆ ಮಿಲನಾ ನಾಗರಾಜ್ ಈಗ ಗರ್ಭಿಣಿ. ಈಗಷ್ಟೇ ವಿದೇಶದಲ್ಲಿ ಬೇಬಿ ಮೂನ್ ಮುಗಿಸಿ ಪತಿ ಡಾರ್ಲಿಂಗ್ ಕೃಷ್ಣ ಅವರೊಂದಿಗೆ ಮರಳಿರುವ ಮಿಲನಾ ಅವರು ನಾನಾ ಇವೆಂಟ್‌ನಲ್ಲಿ ಒಂದಲ್ಲ ಒಂದು ಲುಕ್‌ನಲ್ಲಿ ಕಾಣಿಸಿಕೊಳ್ಳುತ್ತಲೇ ಇರುತ್ತಾರೆ. ಬೇಬಿ ಬಂಪ್ ಹೈಲೈಟಾಗದಂತೆ ಡ್ರೆಸ್‌ಗಳನ್ನು ಧರಿಸುತ್ತಾರೆ. ಡೀಸೆಂಟಾಗಿ ಕಾಣಿ